RNI .KAR/KAN/2009/31934 ಬೆಂಗಳೂರು ಸಂಪುಟ: 16 ಸಂಚಿಕೆ: 104 ಪುಟ: 06 ಗುರುವಾರ 20-03-2025

₹ 3 Mail:mussanje2010@gmail.com www.mussanjenews.com

# ಮುಸ್ಸಂಜೆ

ಪ್ರಭಾವಶಾಲಿ ಕನ್ನಡ ಸಂಜೆ ದಿನ ಪತ್ರಿಕೆ

Managing Editor: N.Veerendra Babu (MBA, LLB)

Executive Editor: L P Babu

Honourary Editor: Venkatesh

ಸುದ್ದಿ, ಜಾಹೀರಾತು ಹಾಗೂ ಪತ್ರಿಕೆಗೆ ಚಂದಾದಾರರಾಗಲು ಸಂಪರ್ಕಿಸಿ: 9448074878



ಉದ್ಘಾಟನೆಗೆ ಹಾಜರಿ ಹಾಕಲಿದೆ ಇಡೀ ಬಾಲಿವುಡ್

'ಫೈರ್ ಫ್ಲೈ' ಚಿತ್ರದ ಮೊದಲ ಹಾಡು ಬಿಡುಗಡೆಗೆ ಸಿದ್ಧ

'ಅವರು ನನ್ನನ್ನು ಕೊಲೆ ಮಾಡಿದ್ರೆ' ಪುಟ 6

# ವಿದ್ಯುತ್ ದರ ಹೆಚ್ಚಳ

## ಪ್ರತಿ ಯೂನಿಟ್‌ಗೆ 36 ಪೈಸೆ ಏರಿಕೆ; ಪರಿಷ್ಕೃತ ದರ ಏ.1ರಿಂದಲೇ ಜಾರಿಗೆ

**ಬೆಂಗಳೂರು:** ಬಜೆಟ್ ಮಂಡನೆ ಬೆನ್ನಲ್ಲೇ ರಾಜ್ಯ ಸರ್ಕಾರ ವಿದ್ಯುತ್ ದರವನ್ನು ಹೆಚ್ಚಿಸುವ ಮೂಲಕ ಗ್ರಾಹಕರಿಗೆ ದೊಡ್ಡ ಶಾಕ್ ನೀಡಿದೆ.

ಪ್ರತಿ ಯೂನಿಟ್‌ಗೆ 36 ಪೈಸೆ ಹೆಚ್ಚಿಸಿ ಆದೇಶ ಹೊರಡಿಸಲಾಗಿದ್ದು, ಈ ಪರಿಷ್ಕೃತ ದರ ಏಪ್ರಿಲ್ 1ರಿಂದಲೇ ರಾಜ್ಯವ್ಯಾಪಿ ಜಾರಿಯಾಗಲಿದೆ.

ವಿದ್ಯುತ್ ನಿಗಮಗಳಿಗೆ ಹೊರೆಯಾಗುತ್ತಿದೆ ಎಂಬ ಕಾರಣ ನೀಡಿ ದರವನ್ನು ಹೆಚ್ಚಿಸಲಾಗಿದೆ. ಈ ಬಾರಿಯ ಬಜೆಟ್‌ನಲ್ಲಿ ಯಾವುದೇ ತೆರಿಗೆ ಹೆಚ್ಚಳವಿಲ್ಲ ಎಂದು ನಿಟ್ಟುಸಿರು ಬಿಟ್ಟಿದ್ದ ಜನರಿಗೆ ಅಧಿವೇಶನ ಮುಗಿಯುವ ಮುನ್ನವೇ ಶಾಕ್ ನೀಡಿದೆ




ಕಳೆದ 2024ನೇ ಸಾಲಿನಲ್ಲಿ ಇದೇ ಪ್ರಮಾಣದಲ್ಲಿ ವಿದ್ಯುತ್ ದರ ಹೆಚ್ಚಳ ಮಾಡಿದ್ದ ಸರ್ಕಾರ ಪ್ರಸ್ತುತ ಸಾಲಿನಲ್ಲೂ ಮತ್ತೊಮ್ಮೆ ವಿದ್ಯುತ್ ದರವನ್ನು ಹೆಚ್ಚಿಸಿದೆ.

ವಿದ್ಯುತ್ ಪ್ರಸರಣ ಮತ್ತು ಎಸ್ಕಾಮ್ ಸಿಬ್ಬಂದಿಯ ಪಿಂಚಣಿ, ಗ್ರ್ಯಾಚ್ಯುಟಿಗಾಗಿ ವಿದ್ಯುತ್ ದರ ಹೆಚ್ಚಳ ಅನಿವಾರ್ಯ ಎಂಬ ಕಾರಣವನ್ನು ಕೆಇಆರ್‌ಸಿ ನೀಡಿದ್ದ ಹಿನ್ನಲೆಯಲ್ಲಿಸರ್ಕಾರ ದರ ಹೆಚ್ಚಳದ ಮೂಲಕ ಗ್ರಾಹಕರಿಂದ ವಸೂಲಿಗೆ ಮುಂದಾಗಿದೆ.

ವಿದ್ಯುತ್ ದರ ಹೆಚ್ಚಳ ಪ್ರಸ್ತುತ ಸಾಲಿಗೆ ಅಲ್ಲದೇ ಮುಂದಿನ ಮೂರು ಆರ್ಥಿಕ ವರ್ಷಗಳಿಗೂ ಕೂಡ ಪುಟ 2

## ಬೆಟ್ಟಿಂಗ್ ಆಪ್ ಪ್ರಚಾರ: 25 ಮಂದಿ ವಿರುದ್ಧ ಪ್ರಕರಣ

**ಹೈದರಾಬಾದ್:** ಬೆಟ್ಟಿಂಗ್ ಅಪ್ಲಿಕೇಶನ್ ಪ್ರಚಾರ ಮಾಡಿದ ಆರೋಪದ ಮೇಲೆ ಕನ್ನಡ ಚಿತ್ರರಂಗದ ಖ್ಯಾತ ನಟ ಪ್ರಕಾಶ್‌ರಾಜ್, ನಟರಾದ ವಿಜಯ್‌ದೇವರಕೊಂಡ, ರಾಣಾ ದಗ್ಗುಭಾಟಿ ಸೇರಿದಂತೆ 25ಕ್ಕೂ ಹೆಚ್ಚು ನಟ-ನಟಿಯರ ವಿರುದ್ಧ ಪ್ರಕರಣ ದಾಖಲಾಗಿದೆ. ಈ ಸಂಬಂಧ 25 ನಟ,ನಟಿಯರ ವಿರುದ್ದ ತೆಲಂಗಾಣದಲ್ಲಿ ಪೊಲೀಸ್ ಕೇಸ್ ಎದುರಿಸುತ್ತಿದ್ದಾರೆ. ಉದ್ಯಮಿ ಫಣೀಂದ್ರ ಶರ್ಮಾ ದೂರು ನೀಡಿದ ನಂತರ ಎಫ್‌ಐಆರ್ ದಾಖಲಿಸಲಾಗಿದೆ. ಪುಟ 2





ಬೆಂಗಳೂರಿನ ವಿಧಾನಸೌಧದ ಸಚಿವರ ಕಚೇರಿಯಲ್ಲಿ 2011ರ ನಂತರ ನಿವೃತ್ತಿಯಾದ ಅಂಗನವಾಡಿ ಕಾರ್ಯಕರ್ತೆಯರು, ಮಿನಿ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರಿಗೆ ಗ್ರ್ಯಾಚ್ಯುಟಿ ಪಾವತಿ ಮಾಡುವ ಕುರಿತು, ಅಂಗನವಾಡಿಯ ವಿವಿಧ ಸಂಘಟನೆಗಳೊಂದಿಗೆ ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಅವರು ಚರ್ಚೆ ನಡೆಸಿದರು.

## ಜನರಿಗೆ ಬೆಲೆ ಏರಿಕೆಯ ಗ್ಯಾರಂಟಿ: ಬಿವೈವಿ ಕಿಡಿ

**ಬೆಂಗಳೂರು:** ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದಲೂ ಒಂದಲ್ಲ ಒಂದು ಅಗತ್ಯ ವಸ್ತುಗಳ ಬೆಲೆ ಏರಿಕೆ ಮಾಡುತ್ತಾ ಬಂದಿದ್ದು, ಈಗ ವಿದ್ಯುತ್ ದರ ಏರಿಸುವ ಮೂಲಕ ಮತ್ತೊಂದು ಬರೆ ನೀಡಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿವೈ ವಿಜಯೇಂದ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.



ಜನರಿಗೆ ಸರ್ಕಾರ ಬೆಲೆ ಏರಿಕೆಯ ಗ್ಯಾರಂಟಿ ನೀಡಿ ಅಧಿಕಾರಕ್ಕೆ ಬಂದಿದೆ. ಇದು ದರಿದ್ರ ಸರ್ಕಾರ ಎಂದು ಅವರು ಕಿಡಿಕಾರಿದ್ದಾರೆ.ಕೆಇಆರ್‌ಸಿ 36 ಪೈಸೆ ವಿದ್ಯುತ್ ದರ ಏರಿಕೆ ಸಂಬಂಧ ಸರ್ಕಾರದ ವಿರುದ್ದ ವಿಜಯೇಂದ್ರ ಹರಿಹಾಯ್ದಿದ್ದು, ಗ್ಯಾರಂಟಿ ವೈಪಲ್ಯ ಬೆಲೆ ಪುಟ 2

## ನಾಳೆಯಿಂದ ಎಸ್ಸೆಸ್ಸೆಲ್ಸಿ ಪರೀಕ್ಷೆ

ಬೆಂಗಳೂರು: 2024-25ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆ ನಾಳೆಯಿಂದ ಆರಂಭವಾಗಲಿದ್ದು, 2,818 ಕೇಂದ್ರಗಳಲ್ಲಿ 8.96 ಲಕ್ಷ ವಿದ್ಯಾರ್ಥಿಗಳು ಈ ಬಾರಿ ಪರೀಕ್ಷೆ ಬರೆಯುತ್ತಿದ್ದಾರೆ.

ಮಾ.21 ರಿಂದ ಏ.04 ರವರೆಗೆ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ವತಿಯಿಂದ ಎಸ್‌ಎಸ್‌ಎಲ್ಸಿ ಪರೀಕ್ಷೆ-1 ನಡೆಯಲಿದೆ. ರಾಜ್ಯದ 15,881 ಪ್ರೌಢಶಾಲೆಗಳ 4.61 ಲಕ್ಷ ಬಾಲಕರು, 4.34 ಲಕ್ಷ ಬಾಲಕಿಯರು ಈ ಬಾರಿ ಪರೀಕ್ಷೆ ಬರೆಯಲಿದ್ದಾರೆ. ಎಲ್ಲಾ ಪರೀಕ್ಷಾ ಕೇಂದ್ರಗಳಲ್ಲೂ ಈಗಾಗಲೇ ಸಿದ್ಧತೆ ಮಾಡಿಕೊಳ್ಳಲಾಗಿದೆ.

ಇನ್ನೂ, ಪರೀಕ್ಷಾ ಕೇಂದ್ರಗಳ ಸುತ್ತಲೂ 200 ಮೀಟರ್ ಆವರಣವನ್ನು ಭಾರತೀಯ ನಾಗರಿಕ ಸುರಕ್ಷಾ ಸಂಹಿತಾ 2023 ರ ಕಲಂ 163 ಮೇರೆಗೆ ನಿರ್ಬಂಧಿತ ಪ್ರದೇಶವೆಂದು ಘೋಷಿಸಲಾಗಿದೆ. ಪರೀಕ್ಷಾ ಕೇಂದ್ರಗಳ ಸುತ್ತಲೂ 200 ಮೀಟರ್ ಆವರಣದಲ್ಲಿನ ಜೆರಾಕ್ಸ್ ಸೆಂಟರ್ ಮತ್ತು ಇಂಟರ್ನೆಟ್ ಸೆಂಟರ್ ಗಳನ್ನು



ಕಾರ್ಯನಿರ್ವಹಿಸದಂತೆ ಪ್ರತಿಬಂಧಿಸಿ ಆದೇಶಿಸಿದ್ದಾರೆ.

ಆ ಪ್ರದೇಶದಲ್ಲಿ ಅನಧಿಕೃತ ವ್ಯಕ್ತಿ ಮತ್ತು ವ್ಯಕ್ತಿಗಳ ಗುಂಪುಗಳಿಗೆ ಪ್ರವೇಶವನ್ನು ನಿಷೇಧಿಸಿದೆ. ಈ ಆದೇಶವು ಪರೀಕ್ಷೆಯ ಮೇಲ್ವಿಚಾರಣೆ ಕಾರ್ಯನಿರ್ವಹಿಸುವ ಸಿಬ್ಬಂದಿಗಳಿಗೆ ಅನ್ವಯಿಸುವುದಿಲ್ಲ.

ಪರೀಕ್ಷಾ ಕೇಂದ್ರಗಳಲ್ಲಿ ಓಆರ್‌ಎಸ್, ಪ್ರಥಮ ಚಿಕಿತ್ಸೆ ಕಿಟ್ ಇರಿಸಿಕೊಳ್ಳಲು ಸೂಚಿಸಲಾಗಿದ್ದು, ಪುಟ 2

## ಹಕ್ಕಿಜ್ವರ ಆತಂಕ ಬೇಡ, ಎಚ್ಚರಿಕೆ ವಹಿಸಿ

ಚಾಂಪಿಯನ್ಸ್ ಟ್ರೋಫಿ 2025 ರಲ್ಲಿ ಚಾಂಪಿಯನ್ ಪಟ್ಟ ಅಲಂಕರಿಸಿದ ಟೀಮ್ ಇಂಡಿಯಾಗೆ ಬಿಸಿಸಿಐ 58 ಕೋಟಿ ರೂ.ಗಳ ಬೃಹತ್ ನಗದು ಬಹುಮಾನವನ್ನು ಘೋಷಿಸಿದೆ. ದುಬೈನಲ್ಲಿ ನಡೆದ ಚಾಂಪಿಯನ್ಸ್ ಟ್ರೋಫಿ ಫೈನಲ್ ಪಂದ್ಯದಲ್ಲಿ ನ್ಯೂಝಿಲೆಂಡ್ ತಂಡವನ್ನು ಬಗ್ಗು ಬಡಿದು ರೋಹಿತ್ ಶರ್ಮಾ ನೇತೃತ್ವದ ಭಾರತ ತಂಡ ಟ್ರೋಫಿ ಮುಡಿಗೇರಿಸಿಕೊಂಡಿತ್ತು. ಪುಟ 2

## ಮಗಳನ್ನು ಗಲ್ಲಿಗೇರಿಸಿ

ಮೀರತ್: "ನನ್ನ ಮಗಳನ್ನು ಗಲ್ಲಿಗೇರಿಸಿ ಆಕೆಗೆ ಬದುಕುವ ಅರ್ಹತೆ ಇಲ್ಲ" ಎಂದು ಆರೋಪಿ ಮಹಿಳೆ ಮುಸ್ಕಾನ್ ಪೋಷಕರು ಕಣ್ಣೀರಿಟ್ಟಿದ್ದಾರೆ. ಉತ್ತರ ಪ್ರದೇಶದ ಮೀರತ್‌ನಲ್ಲಿ ಮಹಿಳೆಯೊಬ್ಬಳು ಪ್ರಿಯಕರನ ಸಹಾಯದಿಂದ ಪತಿಯನ್ನು ಕೊಂದು 15 ತುಂಡುಗಳಾಗಿ ಕತ್ತರಿಸಿ ಡ್ರಮ್‌ನಲ್ಲಿಟ್ಟು ಸಿಮೆಂಟ್ ಹಾಕಿ ಸೀಲ್ ಮಾಡಿರುವ ಘಟನೆ ನಡೆದಿತ್ತು.ಈ ಕುರಿತು ಆಕೆಯ ಪೋಷಕರು ಪ್ರತಿಕ್ರಿಯೆ ಪುಟ 2

## ಸ್ಯಾಂಕಿ ಕೆರೆಯಲ್ಲಿ 'ಕಾವೇರಿ ಆರತಿ'; ಹೈ ಅನುಮತಿ

**ಬೆಂಗಳೂರು:** ಕೆರೆಗಳ ಸಂರಕ್ಷಣೆಗೆ ಸಂಬಂಧಿಸಿದ ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ ಕಾಯಿದೆಯ ನಿಯಮಗಳು ಉಲ್ಲಂಘನೆಯಾಗದಂತೆ ಬೆಂಗಳೂರು ನಗರದ ಸ್ಯಾಂಕಿ ಟ್ಯಾಂಕ್‌ನ ಬಫರ್ ಝೋನ್‌ನಲ್ಲಿ ಕಾವೇರಿ ಆರತಿ ಕಾರ್ಯಕ್ರಮ ಆಯೋಜಿಸಲು ಹೈಕೋರ್ಟ್ ಅನುಮತಿ ನೀಡಿದೆ. ಪುಟ 2

## ದ್ವೇಷದ ರಾಜಕಾರಣ ಕುಮಾರಸ್ವಾಮಿ ಡಿಎನ್‌ಎಯಲ್ಲಿದೆ: ಡಿಸಿಎಂ

**ಬೆಂಗಳೂರು:** "ದ್ವೇಷ ರಾಜಕಾರಣ ಎಂಬುದು ಅವರ (ಕೇಂದ್ರ ಸಚಿವ ಕುಮಾರಸ್ವಾಮಿ) ಡಿಎನ್ ಎ ಯಲ್ಲಿದೆ. ಕೇತಗಾನಹಳ್ಳಿ ಜಮೀನು ವಿಚಾರವಾಗಿ ಕೇಸ್ ದಾಖಲಿಸಿರುವುದು ಎಸ್.ಆರ್ ಹಿರೇಮಠ್ ಅವರು. ಕೋರ್ಟ್ ಆದೇಶದಂತೆ ಅಧಿಕಾರಿಗಳು ಕೆಲಸ ಮಾಡಿದ್ದು, ನಾವು ಹೇಗೆ ದ್ವೇಷ ರಾಜಕಾರಣ ಮಾಡಿದ್ದೇವೆ" ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಪ್ರಶ್ನಿಸಿದರು.

ವಿಧಾನಸೌಧದ ಆವರಣದಲ್ಲಿ ಮಾಧ್ಯಮಗಳ ಪ್ರಶ್ನೆಗಳಿಗೆ ಶಿವಕುಮಾರ್ ಅವರು ಗುರುವಾರ ಪ್ರತಿಕ್ರಿಯಿಸಿದರು.

ಕೇಂದ್ರ ಸಚಿವ ಕುಮಾರಸ್ವಾಮಿ ಕೇತಗಾನಹಳ್ಳಿ ಜಮೀನು ಒತ್ತುವರಿ ತೆರವು ದ್ವೇಷದ ರಾಜಕಾರಣ ಎಂಬ ಆರೋಪದ ಬಗ್ಗೆ ಕೇಳಿದಾಗ, "ಈ ವಿಚಾರವಾಗಿ ನಾವು ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದ್ದೇವಾ? ಈ ವಿಚಾರವಾಗಿ ಎಸ್.ಆರ್ ಹಿರೇಮಠ್ ಅವರು ಪ್ರಕರಣ ದಾಖಲಿಸಿದ್ದಾರೆ. ನನ್ನ ಮೇಲೂ ಹಿರೇಮಠ್ ಅವರು ಅನೇಕ ಕೇಸ್ ದಾಖಲಿಸಿದ್ದರು. ಅವರ ಅರ್ಜಿ ಮೇರೆಗೆ ನ್ಯಾಯಾಲಯ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದು, ಅಧಿಕಾರಿಗಳು ಕೋರ್ಟ್ ಆದೇಶದಂತೆ ಕೆಲಸ ಮಾಡುತ್ತಿದ್ದಾರೆ. ಇದರಲ್ಲಿ ದ್ವೇಷದ ರಾಜಕಾರಣ



ಏನಿದೆ?" ಎಂದು ತಿಳಿಸಿದರು.

ಕುಮಾರಸ್ವಾಮಿ ಮರ್ಯಾದೆಯಾಗಿ ಇದ್ದರೆ ಕ್ಷೇಮ

"ನನ್ನ ವಿರುದ್ಧ ಮೈಸೂರಿನಲ್ಲಿ ಅವರು (ಕುಮಾರಸ್ವಾಮಿ) ಏನೆಲ್ಲಾ ಮಾತನಾಡಿದರು, ಅವರ ತಂದೆ ನನ್ನ ವಿರುದ್ಧ ಏನೆಲ್ಲಾ ಮಾತನಾಡಿದ್ದಾರೆ. ನನ್ನ ಮೇಲೆ, ನನ್ನ ಪತ್ನಿ, ನನ್ನ ತಂಗಿ ಹಾಗೂ ಸಹೋದರನ ಮೇಲೆ ಏನೆಲ್ಲಾ ಕೇಸ್ ಹಾಕಿದ್ದರು. ಪುಟ 2

ನನಗೂ ಬಳ್ಳಾರಿಗೂ ಸಂಬಂಧವಿಲ್ಲ ಆದರೂ

## ಕೈಗಾರಿಕಾ ಸಚಿವರಿಗೆ ರೈತರ ಮನವಿ ಸಲ್ಲಿಕೆ

**ಬೆಂಗಳೂರು:** ಕೈಗಾರಿಕಾ ಉದ್ದೇಶಗಳಿಗಾಗಿ ಶಿಡ್ಲಘಟ್ಟ ತಾಲ್ಲೂಕಿನ ಜಂಗಮಕೋಟೆ ಹೋಬಳಿಯ 13 ಗ್ರಾಮಗಳ ವ್ಯಾಪ್ತಿಯಲ್ಲಿ ಸರಕಾರವು ಸ್ವಾಧೀನ ಪಡಿಸಿಕೊಳ್ಳಲಿರುವ ಜಮೀನಿನ ಮಾಲೀಕರಿಗೆ ಒಂದೇ ಕಂತಿನಲ್ಲಿ ಸಂಪೂರ್ಣ ಪರಿಹಾರ ವಿತರಿಸಬೇಕು ಮತ್ತು ಈ ರೈತ ಕುಟುಂಬಗಳ ಒಬ್ಬ ಸದಸ್ಯರಿಗೆ ಉದ್ಯೋಗ ಕೊಡಬೇಕು ಎಂದು 'ಜಂಗಮಕೋಟೆ ಹೋಬಳಿ ಕೆಐಎಡಿಬಿ ಜಮೀನುಗಳ ರೈತಪರ ಹೋರಾಟ ಸಮಿತಿ'ಯ ಮುಖಂಡರು ಗುರುವಾರ ಮನವಿ ಸಲ್ಲಿಸಿದ್ದಾರೆ.

ರೈತರ ಮನವಿಯನ್ನು ಸ್ವೀಕರಿಸಿದ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ ಬಿ ಪಾಟೀಲರು, ಸೂಕ್ತ ಕ್ರಮದ ಭರವಸೆ ನೀಡಿದರು. ಈ ಬಗ್ಗೆ ಕೆಐಎಡಿಬಿ ಸಿಇಒ ಅವರ ಜತೆ ಮಾತನಾಡಿ,



ರೈತರ ಜತೆ ಸಭೆ ನಡೆಸುವಂತೆ ಸೂಚಿಸಿದರು. ಪುಟ 2

## ಡಾ.ಪರಮೇಶ್ವರ್- ಕುಮಾರಸ್ವಾಮಿ ರಹಸ್ಯ ಚರ್ಚೆ!

**ಬೆಂಗಳೂರು:** ಗೃಹ ಸಚಿವ ಡಾ.ಜಿ.ಪರಮೇಶ್ವರ್ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರನ್ನು ಗೌಪ್ಯವಾಗಿ ಭೇಟಿ ಮಾಡಿ ಮಾತುಕತೆ ನಡೆಸಿರುವುದು ರಾಜಕೀಯ ವಲಯದಲ್ಲಿ ಭಾರೀ ಚರ್ಚೆಗೆ ಎಡೆ ಮಾಡಿದೆ.

ಕುಮಾರಸ್ವಾಮಿ ಹಾಗೂ ಡಾ.ಪರಮೇಶ್ವರ್ ಆತ್ಮೀಯ ಸ್ನೇಹಿತರಾಗಿದ್ದರೂ ಪ್ರಸಕ್ತ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಇವರಿಬ್ಬರ ಮುಖಾಮುಖಿ ಭೇಟಿ ಕೆಲವರಲ್ಲಿ ಆಶ್ಚರ್ಯ ಮೂಡಿಸಿದೆ.

**ಪದೇ ಪದೇ ಭೇಟಿ:** ಕುಮಾರಸ್ವಾಮಿ ಅವರು ತುಮಕೂರು ರಸ್ತೆಯ ಜಿಂದಾಲ್ ಪ್ರಕೃತಿ ಚಿಕಿತ್ಸಾ ಕೇಂದ್ರದಲ್ಲಿ ದಾಖಲಾಗಿದ್ದ ವೇಳೆ ಹಾಗೂ ನಂತರ ಪಂಚತಾರಾ ಹೋಟೆಲ್ ಒಂದರಲ್ಲಿ ಡಾ.ಪರಮೇಶ್ವರ್ ಭೇಟಿಯಾಗಿದ್ದಾರೆ.


ಭೇಟಿ ಅಷ್ಟೇ ಅಲ್ಲದೆ, ಈ ಇಬ್ಬರು ನಾಯಕರು ದೂರವಾಣಿ ಮೂಲಕವೂ ಚರ್ಚೆ ನಡೆಸಿದ್ದಾರೆ ಎಂದು ಉನ್ನತ ಮೂಲಗಳು ತಿಳಿಸಿವೆ. ಪುಟ 2

## ಚಂಡೀಗಢ: ಸಿಮೆಂಟ್ ಬ್ಯಾರಿಕೇಡ್‌ಗಳ ತೆರವು

**ಚಂಡೀಗಢ:** ಶಂಭು ಗಡಿಯಿಂದ ಪ್ರತಿಭಟನಾನಿರತ ರೈತರ ತೆರವಿನ ಬೆನ್ನಲ್ಲೇ ಇಂದು ಹರಿಯಾಣ ಭದ್ರತಾ ಸಿಬ್ಬಂದಿ, ಪಂಜಾಬ್ ರೈತರು ದೆಹಲಿ ಪ್ರವೇಶಿಸುವುದನ್ನು ತಡೆಯಲು ನಿರ್ಮಿಸಿದ್ದ ಸಿಮೆಂಟ್ ಬ್ಯಾರಿಕೇಡ್‌ಗಳನ್ನು ತೆರವುಗೊಳಿಸಲು ಮುಂದಾಗಿದ್ದಾರೆ.

ಬೆಳಗ್ಗೆಯೇ ಕಾರ್ಯಾಚರಣೆಗೆ ಮುಂದಾದ ಪೊಲೀಸರು, ಕಳೆದೊಂದು ವರ್ಷದಿಂದ ಬಂದ್ ಆಗಿದ್ದ ಶಂಭು-ಅಂಬಾಲ ರಸ್ತೆ ತಡೆಗಳನ್ನು ತೆರವು ಮಾಡುತ್ತಿದ್ದಾರೆ.

ಪಂಜಾಬ್‌ನ ಪ್ರತಿಭಟನಾನಿರತ ರೈತರ ದೆಹಲಿ ಚಲೋ ಕಾರ್ಯಕ್ರಮ ತಡೆಯಲು ದೆಹಲಿ ಕಡೆಗೆ ಸಾಗುವ ಮಾರ್ಗದಲ್ಲಿ ರೈತರ ಪ್ರವೇಶವನ್ನು ತಡೆಯಲು ಪಂಜಾಬ್



ಗಡಿಗಳಲ್ಲಿ ಸಿಮೆಂಟ್ ಬ್ಲಾಕ್, ಕಬ್ಬಿಣದ ಮೊಳೆ ಮತ್ತು ಮುಳ್ಳು ತಂತಿಗಳಿಂದ ಭದ್ರಪಡಿಸಲಾಗಿತ್ತು.

ಬುಧವಾರ ಸಂಜೆ ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಜೊತೆಗಿನ ಸಭೆಯ ಬಳಿಕ ಪಂಜಾಬ್ ರೈತರು ಸಭೆ ನಡೆಸಿದ್ದರು. ಆ ಬಳಿಕ ಚಂಡೀಗಢಕ್ಕೆ ವಾಪಸಾಗುವ ವೇಳೆ ಪಂಜಾಬ್ ಪೊಲೀಸರು ಸರ್ವಾನ್ ಸಿಂಗ್ ಪಂಧೇರ್ ಮತ್ತು ಜಗಜಿತ್ ಸಿಂಗ್ ದಲ್ಲೆವಾಲ್ ಸೇರಿದಂತೆ ಹಲವು ರೈತ ನಾಯಕರನ್ನು ಮೊಹಾಲಿಯಲ್ಲಿ ಬಂಧಿಸಿದ್ದಾರೆ.

ಅಲ್ಲದೇ, ಕಳೆದೊಂದು ವರ್ಷದಿಂದ ಶಂಭು ಮತ್ತು ಖಾನೌರಿ ಸ್ಥಳಗಳಲ್ಲಿ ಪ್ರತಿಭಟನಾನಿರತ ರೈತರನ್ನೂ ಪೊಲೀಸರು ತೆರವುಗೊಳಿಸಿದರು. ಪ್ರತಿಭಟನೆಗಾಗಿ ನಿರ್ಮಿಸಲಾಗಿದ್ದ ತಾತ್ಕಾಲಿಕ ಟೆಂಟ್‌ಗಳು ಮತ್ತು ವೇದಿಕೆಗಳನ್ನು ಜೆಸಿಬಿ ಬಳಸಿ ಕೆಡವಿದ್ದಾರೆ. ಪುಟ 2

## ವೈದ್ಯ ವಿದ್ಯಾರ್ಥಿನಿಯ ಕೇಸ್: ಪೋಷಕರ ಕೈ ಸೇರಿದ ಮರಣ ಪ್ರಮಾಣ ಪತ್ರ

**ಕೋಲ್ಕತ್ತಾ:** ಕೋಲ್ಕತ್ತಾದ ಆರ್‌ಜಿ ಕರ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯಲ್ಲಿ ವೈದ್ಯ ವಿದ್ಯಾರ್ಥಿನಿ ಮೇಲೆ ಅತ್ಯಾಚಾರ ಮತ್ತು




ಕೊಲೆ ಪ್ರಕರಣ ನಡೆದು ಏಳು ತಿಂಗಳ ಬಳಿಕ ಇದೀಗಷ್ಟೇ ಆಕೆಯ ಮರಣ ಪ್ರಮಾಣ ಪತ್ರವನ್ನು ಅಧಿಕಾರಿಗಳು ಪೋಷಕರಿಗೆ ಒಪ್ಪಿಸಿದ್ದಾರೆ. ಪುಟ 2

# ನಕ್ಸಲ್ ನಿಗ್ರಹ ಪಡೆ ವಿಸರ್ಜನೆಗೆ ಆಕ್ಷೇಪ

**ಬೆಂಗಳೂರು:** ನಕ್ಸಲ್ ನಿಗ್ರಹ ಪಡೆಯನ್ನು ವಿಸರ್ಜಿಸುವ ಸರ್ಕಾರದ ತೀರ್ಮಾನ ಸರಿಯಲ್ಲ ಎಂದು ಬಿಜೆಪಿಯ ವೇದವ್ಯಾಸ ಕಾಮತ್ ವಿಧಾನಸಭೆಯಲ್ಲಿಂದು ಹೇಳಿದರು.

ಬಜೆಟ್ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ನಕ್ಸಲ್ ನಿಗ್ರಹ ದಳವನ್ನು ವಿಸರ್ಜಿಸುವ ಬಗ್ಗೆ ಬಜೆಟ್‌ನಲ್ಲಿ ಉಲ್ಲೇಖಿಸಲಾಗಿದೆ. ಕಾಯಿಲೆ ಯಾರಿಗೂ ಇಲ್ಲವೆಂದು ದವಾಖಾನೆ ಮುಚ್ಚಲು ಆಗುತ್ತದೆಯೇ, ಕ್ರೈಂ ಆಗಿಲ್ಲ ಎಂದು ಪೊಲೀಸ್ ಠಾಣೆ ಮುಚ್ಚುತ್ತೀರಾ, ನಾಲ್ಕು ಜನ ನಕ್ಸಲರು ಶರಣಾದರು ಎಂದು ನಕ್ಸಲ್ ನಿಗ್ರಹ ದಳವನ್ನು ಸ್ಥಗಿತಗೊಳಿಸುವುದು ಸರಿಯಲ್ಲ ಎಂದರು.

ನಕ್ಸಲರು ಹಲವರನ್ನು ಕೊಂದಿದ್ದಾರೆ. ಆ ಕುಟುಂಬಗಳ ನೋವು ಸರ್ಕಾರಕ್ಕೆ ಕಾಣುತ್ತಿಲ್ಲವೇ, ನಕ್ಸಲರನ್ನು ಸಮರ್ಥಿಸಿಕೊಳ್ಳುವುದು ಸರಿಯಲ್ಲ ಎಂದು ಅವರು ಹೇಳಿದರು.

ಕಳೆದ 2 ಬಜೆಟ್‌ಗಳಲ್ಲಿ ಕರಾವಳಿಯ ಉಡುಪಿ, ಮಂಗಳೂರು ಜಿಲ್ಲೆಗಳಿಗೆ ಸರ್ಕಾರ ಚಂಬು ಕೊಟ್ಟಿದೆ. ಬಜೆಟ್‌ನಲ್ಲಿ ಘೋಷಿಸಿರುವ ಕಾರ್ಯಕ್ರಮಗಳಲ್ಲಿ ಕನಿಷ್ಠ ಶೇ. 2 ರಷ್ಟಾದರೂ ಜಾರಿಗೊಳಿಸಿ ಎಂದ ಅವರು, ಈ ಬಜೆಟ್‌ನ ಕಾರ್ಯಕ್ರಮಗಳು ಜಾರಿಯಾಗಲ್ಲ ಎಂದು ಹೇಳಿದರು.

ಕಲ್ಯಾಣ ಕರ್ನಾಟಕ ಭಾಗದ ಜನ ಸಂಕಷ್ಟದಲ್ಲಿದ್ದಾರೆ. ರಾಜ್ಯ ಸರ್ಕಾರ ಈ ಭಾಗದ ಅಭಿವೃದ್ಧಿಗೆ ಹೆಚ್ಚಿನ ಅನುದಾನ ಕೊಡಬೇಕು. ದಕ್ಷಿಣ ಕರ್ನಾಟಕದವರು ಐಷರಾಮಿ ಜೀವನ ಮಾಡುತ್ತಾರೆ. ನಾವು ಅವರ ಮನೆಯ ಪಾತ್ರೆ ತೊಳೆಯುವ ಕೆಲಸ ಮಾಡುತ್ತಿದ್ದೇವೆ ಎಂದು ಬಿಜೆಪಿಯ ಶರಣು ಸಲಗಾರ ವಿಧಾನಸಭೆಯಲ್ಲಿಂದು ಹೇಳಿದರು. ಬಜೆಟ್ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಮೊನ್ನೆ ಸದನದಲ್ಲಿ ದಕ್ಷಿಣ ಕರ್ನಾಟಕ ಭಾಗದ ಸದಸ್ಯರೊಬ್ಬರು ಎಲ್ಲ ಅನುದಾನ ಕಲ್ಯಾಣ ಕರ್ನಾಟಕಕ್ಕೆ ಹೋಗುತ್ತಿದೆ ಎಂದು ಹೇಳಿದ್ದಾರೆ. ಇದು ಸರಿಯಲ್ಲ, ನಮ್ಮ ಕಡೆಯ ಜನರ ಜೀವನ ನೋಡಲಿ. ನಮ್ಮ ಜನ ಎಷ್ಟು ಕಷ್ಟದಲ್ಲಿದ್ದಾರೆ ಎಂಬುದು ಗೊತ್ತಾಗುತ್ತದೆ ಎಂದು ಸಿಟ್ಟಿನಿಂದ ಹೇಳಿದರು.

# ವಿದ್ಯುತ್ ನೌಕರರ ಸಂಘದಿಂದ ಮಹಿಳಾ ದಿನಾಚರಣೆಯ "ಸ್ತ್ರೀ ಸಂಭ್ರಮ" ಕಾರ್ಯಕ್ರಮ



ಬೆಂಗಳೂರು; ಕರ್ನಾಟಕ ವಿದ್ಯುತ್ ಪ್ರಸರಣ ನಿಗಮವನ್ನು ಖಾಸಗೀಕರಣ ಮಾಡಲು ಪ್ರಯತ್ನಿಸುತ್ತಿರುವ ರಾಜ್ಯ ಸರ್ಕಾರದ ದೋರಣೆಯ ವಿರುದ್ಧ ಹೋರಾಟ ನಡೆಸಬೇಕಿದೆ ಈ ನಿಟ್ಟಿನಲ್ಲಿ ನಿಗಮದ ಮಹಿಳಾ ನೌಕರರು ಮುಂಚೂಣಿಯಲ್ಲಿರಬೇಕು ಎಂದು ಕೆಪಿಟಿಸಿಎಲ್ ನೌಕರರ ಸಂಘದ ಅಧ್ಯಕ್ಷ ಬಲರಾಮ್ ಹೇಳಿದರು.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನೌಕರರ ಸಂಘದ ಆವರಣದಲ್ಲಿ ನಡೆದ ಸ್ತ್ರೀ ಸಂಭ್ರಮ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು,ವಿದ್ಯುತ್ ಪ್ರಸರಣ ನಿಗಮದಲ್ಲಿ 35ಸಾವಿರ ಹುದ್ದೆಗಳು ಖಾಲಿ ಇವೆ,ಇವುಗಳನ್ನು ಭರ್ತಿ ಮಾಡಲು ರಾಜ್ಯ ಸರ್ಕಾರದ ಮೇಲೆ ಒತ್ತಡ ಹೇರಬೇಕಿದೆ,ಇದೇ ಮೊದಲ ಬಾರಿಗೆ ನಿಗಮದಿಂದ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಹಮ್ಮಿಕ ೊಳ್ಳಲಾಗಿದ್ದು,ಮಹಿಳೆಯರು ಸಂಘದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ಮಹಿಳಾ ನೌಕರರ ಹಿತಾಸಕ್ತಿ ಕಾಪಾಡುವಲ್ಲಿ ಪ್ರಮುಖ ಪಾತ್ರ ವಹಿಸಬೇಕೆಂದು ಹೇಳಿದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಸಿಐಟಿಯು ಅಧ್ಯಕ್ಷೆ ವರಲಕ್ಷ್ಮೀ, ವಿದ್ಯುತ್ ನಿಗಮದಲ್ಲಿ ಸಾವಿರಾರು ಮಹಿಳೆಯರು ಕಾರ್ಯನಿರ್ವಹಿಸುತ್ತಿದ್ದು,ತಮ್ಮ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳಲು ಮುಂಚೂಣಿಯಲ್ಲಿರಬೇಕೆಂದು ಕರೆ ನೀಡಿದರು.

ಪ್ರಧಾನ ಕಾರ್ಯದರ್ಶಿ ಶಿವರಾಮ್ ಮಾತನಾಡಿ, ಮಹಿಳೆಯರು ಪ್ರತಿ ಕ್ಷೇತ್ರದಲ್ಲಿ ಮುಂದಿದ್ದು ಯಾವುದೇ ಹಿಂಜರಿಕೆ ಇಲ್ಲದೇ ವಿದ್ಯುತ್ ಹಮ್ಮಿಕೊಳ್ಳಲಾಗಿದೆ ಸಹ ಮಹಿಳಾ ನೌಕರರ ಹಿತಾಸಕ್ತಿ ಕಾಪಾಡಲು ಮುಂದೆ ಬರಬೇಕೆಂದು ಹೇಳಿದರು.

ಹಿರಿಯ ಉಪಾಧ್ಯಕ್ಷ ಹೆಚ್.ಆರ್.ಅಶ್ವತ್ಥಪ್ಪ, ಖಚಾಂಚಿ ವರದರಾಜು,ಕಾರ್ಯಾಧ್ಯಕ್ಷ ಡಾಕ್ಯಾ ನಾಯಕ್,ಸಹ ಕಾರ್ಯದರ್ಶಿ ಪಿ.ಶಿವಕುಮಾರ್ ಮತ್ತಿತರರು ಭಾಗವಹಿಸಿದ್ದರು.

# ಪೋಪ್ ಫ್ರಾನ್ಸಿಸ್ ಆರೋಗ್ಯದಲ್ಲಿ ಚೇತರಿಕೆ

**ವ್ಯಾಟಿಕನ್ ಸಿಟಿ:** ಪೋಪ್ ಫ್ರಾನ್ಸಿಸ್ ಅವರು ಚೇತರಿಸಿಕೊಂಡಿದ್ದಾರೆ. ಅವರಿಗೆ ನೀಡಿದ್ದ ಆಮ್ಲಜನಕದ ಮಾಸ್ಕ್ ಬಳಕೆಯನ್ನು ಸ್ಥಗಿತಗೊಳಿಸಲಾಗಿದ್ದು, ಅವರು ಸಾಮಾನ್ಯ ಉಸಿರಾಟ ನಡೆಸುತ್ತಿದ್ದಾರೆ ಎಂದು ವ್ಯಾಟಿಕನ್ ತಿಳಿಸಿದೆ. 88 ವರ್ಷದ ಫ್ರಾನ್ಸಿಸ್ ಅವರ ವೈದ್ಯಕೀಯ ಸ್ಥಿತಿ ಒಂದು ತಿಂಗಳಿಗೂ ಹೆಚ್ಚು ಕಾಲ ಆಸ್ಪತ್ರೆಯಲ್ಲಿದ್ದ ನಂತರ ಸುಧಾರಿಸುತ್ತಿದೆ ಎಂದು ವರದಿಯಾಗಿದೆ.ಅರ್ಜೆಂಟೀನಾದ ಪೋಪ್ ಫೆಬ್ರವರಿ 14 ರಿಂದ ಎರಡೂ ಶ್ವಾಸಕೋಶಗಳಲ್ಲಿ ನ್ಯುಮೋನಿಯಾದಿಂದ ಬಳಲುತ್ತಿದ್ದು, ರೋಮ್‌ನ ಗೆಮೆಲ್ಲಿ ಆಸ್ಪತ್ರೆಯಲ್ಲಿದ್ದಾರೆ, ಆದರೆ ಅವರ ಜೀವಕ್ಕೆ ಅಪಾಯವಿದೆ ಎಂಬ ಹಿಂದಿನ ಆತಂಕಗಳ ನಂತರ ವ್ಯಾಟಿಕನ್ ಇತ್ತೀಚಿನ ಪ್ರಗತಿಯನ್ನು ವರದಿ . ಪೋಪ್ ಅವರ ವೈದ್ಯಕೀಯ ಪರಿಸ್ಥಿತಿಗಳು ಸುಧಾರಿಸುತ್ತಿರುವುದು ದೃಢಪಟ್ಟಿದೆ ಎಂದು ವ್ಯಾಟಿಕನ್ ವೈದ್ಯಕೀಯ ಬುಲೆಟಿನ್ ನಲ್ಲಿ ಬರೆದಿದೆ. ಅವರು ಆಕ್ರಮಣಶೀಲವಲ್ಲದ ಯಾಂತ್ರಿಕ ವಾತಾಯನವನ್ನು ಸ್ಥಗಿತಗೊಳಿಸಿದ್ದಾರೆ ಮತ್ತು ಹೆಚ್ಚಿನ ಹರಿವಿನ ಆಮ್ಲಜನಕ ಚಿಕಿತ್ಸೆಯ ಅಗತ್ಯವನ್ನು ಕಡಿಮೆ ಮಾಡಿದ್ದಾರೆ ಎಂದು ಅದು ಹೇಳಿದೆ.

# ಯಾವುದು ಚಾದರ್ ಸುಟ್ಟಿಲ್ಲ, ಮತಾಂಧರಿಂದ ಗಲಭೆ

**ನಾಗ್ಪುರ:** ಕೋಮುಗಲಭೆಗೆ ಕಾರಣವಾದ ನಾಗ್ಪುರದಲ್ಲಿ ನಡೆದ ಬಲಪಂಥೀಯ ಪ್ರತಿಭಟನೆಯ ಸಂದರ್ಭದಲ್ಲಿ ಯಾವುದೇ ಧಾರ್ಮಿಕ ಪಠ್ಯವನ್ನು ಹೊಂದಿರುವ ಬಟ್ಟೆಯನ್ನು ಸುಡಲಾಗಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ.

ಇದಲ್ಲದೆ, ಕೋಮು ಅಶಾಂತಿಯನ್ನು ಪ್ರಚೋದಿಸುವ ಮತ್ತು ನಗರದ ಕಾನೂನು ಮತ್ತು ಸುವ್ಯವಸ್ಥೆಯನ್ನು ಭಂಗಗೊಳಿಸುವ ಗುರಿಯನ್ನು ಹೊಂದಿರುವ ನೂರಾರು ಪ್ರಚೋದನಕಾರಿ ಆನ್‌ಲೈನ್ ಪೋಸ್ಟ್‌ಗಳನ್ನು ಪೊಲೀಸರು ಭೇದಿಸಿದ್ದಾರೆ.

ಪ್ರಾಥಮಿಕ ತನಿಖೆಯ ಪ್ರಕಾರ, ಮೊಘಲ್ ಚಕ್ರವರ್ತಿಯ ಸಮಾಧಿಯನ್ನು ತೆಗೆದುಹಾಕುವಂತೆ ಒತ್ತಾಯಿಸಿ ವಿಶ್ವ ಹಿಂದೂ ಪರಿಷತ್ (ವಿಎಚ್ ಪಿ) ಮತ್ತು ಬಜರಂಗದಳ ನಡೆಸಿದ ಪ್ರತಿಭಟನೆಯ ಸಮಯದಲ್ಲಿ ಕುರಾನ್ ಪದ್ಯಗಳನ್ನು ಹೊಂದಿರುವ ಬಟ್ಟೆಯನ್ನು (ಚಾದರ್) ಸುಡಲಾಗಿದೆ ಎಂಬ ವದಂತಿಗಳು ಮಾರ್ಚ್ 17 ರಂದು ನಾಗುರದಲ್ಲಿ ಹಿಂಸಾಚಾರಕ್ಕೆ ಕಾರಣವಾದವು. ಈ ಪ್ರಕರಣದಲ್ಲಿ ಒಟ್ಟು ಏಳು ಜನರನ್ನು ಬಂಧಿಸಲಾಗಿದ್ದು, ಹಿಂಸಾಚಾರದ ಮರುದಿನ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ.ಕೋಮು ಅಶಾಂತಿಯನ್ನು ಪ್ರಚೋದಿಸುವ ಉದ್ದೇಶದಿಂದ ಸಾಮಾಜಿಕ ಮಾಧ್ಯಮ ಪ್ಲಾಟ್‌ಫಾರ್ಮ್‌ಗಳಲ್ಲಿನ ಪೋಸ್ಟ್‌ಗಳು ಮತ್ತು ವೀಡಿಯೊಗಳು ಸೇರಿದಂತೆ 140 ಕ್ಕೂ ಹೆಚ್ಚು ಆಕ್ಷೇಪಾರ್ಹ ವಿಷಯಗಳನ್ನು ಮಹಾರಾಷ್ಟ್ರ ಸೈಬರ್ ಸೆಲ್ ನಾಗುರ ಪೊಲೀಸರ ಸಮನ್ವಯದೊಂದಿಗೆ ಗುರುತಿಸಿದೆ. ಇದೀಗ ಆಕ್ಷೇಪಾರ್ಹ ಪೋಸ್ಟ್ ಮಾಡಿದವರಿಗೆ ನೋಟಿಸ್ ಕಳುಹಿಸಲಾಗಿದೆ

## ಮೊದಲ ಪುಟದಿಂದ

# ವಿದ್ಯುತ್ ದರ ಹೆಚ್ಚಳ

ಅನ್ವಯವಾಗುವಂತೆ ಆದೇಶ ಹೊರ ಬಿದ್ದಿದೆ. ಆ ಪ್ರಕಾರ 2025–26 – 36 ಪೈಸೆ, 2026–27 – 35 ಪೈಸೆ, 2027–28 – 34 ಪೈಸೆ ಪ್ರತಿ ಯೂನಿಟ್‌ಗೆ ಹೆಚ್ಚಳವಾಗಲಿದೆ.

ವಿದ್ಯುತ್ ದರ ಏರಿಕೆಗೆ ಸಂಬಂಧಿಸಿದಂತೆ ಸಮಾಜಾಯಿಷಿ ನೀಡಿರುವ ಸರ್ಕಾರ ಇದರಿಂದ ಸಾಮಾನ್ಯ ಜನರಿಗೆ ತೊಂದರೆ ಆಗುವುದಿಲ್ಲ.

ಗೃಹಜ್ಯೋತಿ ಯೋಜನೆಯಿಂದಾಗಿ ನಷ್ಟ ಆಗಿಲ್ಲ. ಗೃಹಜ್ಯೋತಿ ನಷ್ಟದಿಂದ ವಿದ್ಯುತ್ ದರ ಏರಿಕೆ ಮಾಡಲಾಗಿಲ್ಲ.

ನಾವು 200 ಯೂನಿಟ್ ವಿದ್ಯುತ್ ಉಚಿತ ಕೊಟ್ಟಿದ್ದೇವೆ. 200 ಯೂನಿಟ್ ಮೇಲೆ ಬಳಸಿದವರಿಗೆ ದರ ಏರಿಕೆ ಅನ್ವಯವಾಗುತ್ತದೆ ಎಂದು ಸಚಿವ ಶರಣಪ್ರಕಾಶ್ ಪಾಟೀಲ ತಿಳಿಸಿದ್ದಾರೆ. ಸರ್ಕಾರದ ನಿರ್ಧಾರಕ್ಕೆ ಸಾರ್ವಜನಿಕರು ಹಾಗೂ ಪ್ರತಿಪಕ್ಷಗಳಿಂದ ತೀವ್ರ ವಿರೋಧ ವ್ಯಕ್ತವಾಗಿದೆ.

ದರ ಏರಿಕೆ ಸಂಬಂಧ ಮಾತನಾಡಿರುವ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ ವಿಜಯೇಂದ್ರ, ಇದೊಂದು ಬೆಲೆ ಏರಿಕೆಯ ಗ್ಯಾರಂಟಿ. ಇದು ದರಿದ್ರ ಕಾಂಗ್ರೆಸ್ ಸರ್ಕಾರ ಎಂದರೆ, ಸಿಟಿ ರವಿ ಮಾತನಾಡಿ, ಮುಂದಿನ ದಿನಗಳಲ್ಲಿ ಉಸಿರಾಡುವ ಗಾಳಿಗೂ ಟ್ಯಾಕ್ಸ್ ಹಾಕುತ್ತಾರೆ ಎಂದು ಲೇವಡಿ ಮಾಡಿದರು.

# ರೈತರ ಮನವಿ ಸಲ್ಲಿಕೆ

ಪಿಎಸ್‌ಎಲ್ ಕಂಪನಿಯ ಹೆಸರಿನಲ್ಲಿ ಕೆಲವು ಮಧ್ಯವರ್ತಿಗಳು ಮುಗ್ಧ ರೈತರಿಗೆ ಹೆಚ್ಚಿನ ಹಣ ಕೊಡುವ ನಂಬಿಕೆ ಹುಟ್ಟಿಸಿ, ಕೇವಲ 1–2 ಲಕ್ಷ ರೂ. ಮಾತ್ರ ನೀಡಿ ಮೋಸ ಮಾಡಿದ್ದಾರೆ. ವಾಸ್ತವದಲ್ಲಿ ಈ ಜಮೀನು ಕೆಐಎಡಿಬಿಗೆ ಸೇರಿದ್ದು, ರೈತರು ಪರಿಹಾರದಿಂದ ವಂಚಿತರಾಗಿದ್ದಾರೆ. ಆದ್ದರಿಂದ ಸರಕಾರವು ಈ ಜಮೀನಿನ ರೈತರಿಗೂ ನೇರವಾಗಿ ಪರಿಹಾರ ಸಂದಾಯ ಮಾಡಬೇಕು ಎಂದು ನಿಯೋಗವು ಮನವಿ ಮಾಡಿಕೊಂಡಿದೆ. ನಡುಪಿನಾಯಕನಹಳ್ಳಿ ಮತ್ತು ಯಣ್ಣಂಗೂರು ಗ್ರಾಮಗಳ ರೈತರಿಗೆ ಇನ್ನೂ ನೋಟಿಸ್ ನೀಡಿಲ್ಲ ಎಂದು ನಿಯೋಗವು ತಮ್ಮ ಗಮನಕ್ಕೆ ತಂದಿದೆ. ಈ ಬಗ್ಗೆಯೂ ಕೆಐಎಡಿಬಿ ತ್ವರಿತ ಗಮನ ಹರಿಸಲಿದೆ. ಸಂತ್ರಸ್ತ ರೈತರು ಪರಿಹಾರದ ವಿಷಯದಲ್ಲಿ ಆತಂಕಕ್ಕೆ ಒಳಗಾಗಬೇಕಾಗಿಲ್ಲ ಎಂದು ಅವರು ಭರವಸೆ ನೀಡಿದ್ದಾರೆ. ರೈತರ ನಿಯೋಗದಲ್ಲಿ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆಯ ತಾಲ್ಲೂಕು ಅಧ್ಯಕ್ಷ ಎನ್ ಮುನೇಗೌಡ, ಬಿ ಎಂ ವೆಂಕಟೇಶ, ಸಂತೋಷ್, ಚನ್ನಪ್ಪ, ಈರಪ್ಪ, ಚಂದ್ರಪ್ಪ ಮುಂತಾದ ಮುಖಂಡರಿದ್ದರು.

# ರಹಸ್ಯ ಚರ್ಚೆ!

**ನಾಯಕತ್ವ ಪೈಪೋಟಿ:** ಮುಖ್ಯಮಂತ್ರಿ ಸಿದ್ದರಾಮಯ್ಯ ನಂತರ ನಾಯಕತ್ವಕ್ಕಾಗಿ ಆಡಳಿತಾರೂಢ ಕಾಂಗ್ರೆಸ್‌ನಲ್ಲಿ ಪೈಪೋಟಿ ನಡೆದಿದೆ. ಈ ಸಂದರ್ಭದಲ್ಲಿ ಕೆಲವರ ವರ್ಚಸ್ಸನ್ನು ಹಾಳು ಮಾಡುವ ಪ್ರಯತ್ನವೂ ನಡೆದಿದೆ ಎಂಬ ಆರೋಪಗಳು ಕೇಳಿಬಂದಿವೆ. ಇದರ ನಡುವೆ ಡಾ.ಪರಮೇಶ್ವರ್, ಕುಮಾರಸ್ವಾಮಿ ಅವರನ್ನು ಭೇಟಿ ಮಾಡಿ ರಾಜಕೀಯ ವಿಷಯಗಳನ್ನು ಹಂಚಿಕೊಂಡಿದ್ದಾರೆ.

ಮುಖ್ಯಮಂತ್ರಿ ಅವಕಾಶ: ನೀವು ಮುಖ್ಯಮಂತ್ರಿ ಆಗುವ ಅವಕಾಶ ಎರಡು ಬಾರಿ ಕಳೆದುಕೊಂಡಿದ್ದೀರಿ, ಮತ್ತೊಮ್ಮೆ ಅಂತಹ ಅವಕಾಶ ಬಂದರೆ ನಿಮ್ಮ ಬೆನ್ನಿಗೆ ನಿಲ್ಲುವುದಾಗಿ ಡಾ.ಪರಮೇಶ್ವರ್ ಅವರಿಗೆ ಕುಮಾರಸ್ವಾಮಿ ಅಭಯ ನೀಡಿದ್ದಾರಂತೆ. ರಾಜಕೀಯ ಹೆಜ್ಜೆಗಳನ್ನು ಇಡುವಾಗ ಬಹಳ ಎಚ್ಚರ ವಹಿಸಿ, ನಾನೂ ಕೆಲವರನ್ನು ನಂಬಿ ಆಯ ತಪ್ಪಿದ್ದೇನೆ, ಆದರೆ, ಜನರು ಹಾಗೂ ಕಾರ್ಯಕರ್ತರು ನನ್ನ ಕೈಬಿಡಲಿಲ್ಲ. ನೀವು ವಿದ್ಯಾವಂತರು, ಸುಸಂಸ್ಕೃತರು ರಾಜ್ಯದ ನಾಯಕತ್ವ ನಿಭಾಯಿಸುವ ಎಲ್ಲಾ ಅರ್ಹತೆ ಇದೆ, ನಿಮಗೆ ಇರುವ ಅವಕಾಶ ಕಳೆದುಕೊಳ್ಳಬೇಡಿ.ಎದೆಗುಂದ ಬೇಡಿ: ಹೋರಾಟದಿಂದ ನಿಮ್ಮನ್ನು ಹಿಂದೆ ಸರಿಸಲು ರಾಜಕೀಯ ಮೇಲಾಟಗಳು ನಡೆಯುವುದು ಸಹಜ, ಅದಕ್ಕೆ ಎದೆಗುಂದ ಬೇಡಿ. ರಾಜಕೀಯವಾಗಿ ಸಂಕಷ್ಟಕ್ಕೆ ಸಿಲುಕಿದರೆ ನಾನು ನಿಮ್ಮ ಜೊತೆ ಇರುತ್ತೇನೆ ಎಂದು ಅಭಯ ನೀಡಿದ್ದಾರಂತೆ.

# 25 ಮಂದಿ ವಿರುದ್ಧ ಪ್ರಕರಣ

ಎಫ್‌ಐಆರ್‌ನಲ್ಲಿ ಹೆಸರಿಸಲಾದ ಸೆಲೆಬ್ರಿಟಿಗಳು ಮತ್ತು ಪ್ರಭಾವಿಗಳಲ್ಲಿ ಪ್ರಣೀತಾ, ನಿಧಿ ಅಗರ್‌ವಾಲ್, ಅನನ್ಯ ನಾಗಲ್ಲ, ಸಿರಿ ಹನುಮಂತು, ಶ್ರೀಮುಖಿ, ವರ್ಷಿಣಿ ಸೌಂದರರಾಜನ್, ವಸಂತಿ ಕೃಷ್ಣನ್, ಶೋಭಾ ಶೆಟ್ಟಿ, ಅಮೃತಾ ಚೌದರಿ, ನಯನಿ ಪಾವನಿ, ನೇಹಾ ಪಠಾಣ್, ಪಾಂಡು, ಪದ್ಮಾವತಿ, ಸನ್ನಿ ಯಾ, ವಿಷ್ಣು, ಸನ್ನಿಯಾ ಪ್ರಿಯಿ, ನಾನು ಶ್ಯಾಮಲಾ, ಟೇಸ್ಟಿ ತೇಜ ಮತ್ತು ಬಂಡಾರು ಶೇಷಾಯನಿ ಸುಪ್ರಿತಾ ಸೇರಿದ್ದಾರೆ.

ಈ ಪ್ಲಾಟ್‌ಫಾರ್ಮ್‌ಗಳು ಸೆಲೆಬ್ರಿಟಿಗಳು ಮತ್ತು ಪ್ರಭಾವಿಗಳ ಸಹಾಯದಿಂದ ಸಾಮಾಜಿಕ ಮಾಧ್ಯಮ ಜಾಹೀರಾತುಗಳ ಮೂಲಕ ತಮ್ಮ ಅಪ್ಲಿಕೇಶನ್‌ಗಳು ಮತ್ತು ವೆಬ್‌ಸೈಟ್‌ಗಳನ್ನು ಪ್ರಚಾರ ಮಾಡುತ್ತವೆ ಎಂದು ಎಫ್‌ಐಆರ್ ನಲ್ಲಿ ಉಲ್ಲೇಖಿಸಲಾಗಿದೆ."ಈ ಅಕ್ರಮ ವೇದಿಕೆಗಳಲ್ಲಿ ಸಾವಿರಾರು ಲಕ್ಷ ರೂಪಾಯಿಗಳು ಭಾಗಿಯಾಗಿವೆ ಮತ್ತು ಇದು ಅನೇಕ ಕುಟುಂಬಗಳನ್ನು, ವಿಶೇಷವಾಗಿ ಮಧ್ಯಮ ವರ್ಗ ಮತ್ತು ಕೆಳ ಮಧ್ಯಮ ವರ್ಗದ ಕುಟುಂಬಗಳನ್ನು ಸಂಕಷ್ಟಕ್ಕೆ ದೂಡುತ್ತಿದೆ" ಎಂದು ಆರೋಪಿಸಲಾಗಿದೆ.

# ಬ್ಯಾರಿಕೇಡ್‌ಗಳ ತೆರವು

ಚಂಡೀಗಢದಲ್ಲಿ ನಡೆದ ಕೇಂದ್ರ ಮತ್ತು ರೈತರ ನಡುವಿನ 7ನೇ ಸುತ್ತಿನ ಮಾತುಕತೆಯಲ್ಲಿ ಕೇಂದ್ರ ನಿಯೋಗದ ಪರವಾಗಿ ಗ್ರಾಹಕ ವ್ಯವಹಾರಗಳ ಸಚಿವ ಪ್ರಲ್ಹಾದ್ ಜೋಶಿ ಮತ್ತು ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ ಹಾಜರಿದ್ದರು. ಈ ಸಭೆಯಲ್ಲಿ ಬೆಳೆಗಳ ಎಂಎಸ್‌ಪಿ ಸೇರಿದಂತೆ ಹಲವು ವಿಚಾರಗಳ ಕುರಿತು ಚರ್ಚಿಸಲಾಯಿತು.

ಸಭೆಯ ಬಳಿಕ ರೈತರು ಮೊಹಾಲಿ ಪ್ರವೇಶಿಸುತ್ತಿದ್ದಂತೆ, ಪೊಲೀಸರು ಅವರನ್ನು ತಡೆದು ಹೊರಹಾಕಲು ಮುಂದಾದರು. ರೈತರನ್ನು ಪ್ರತಿಭಟನಾ ಸ್ಥಳದಿಂದ ಹೊರಹಾಕಿರುವ ಕ್ರಮ ಸಮರ್ಥಿಸಿಕೊಂಡ ಪಂಜಾಬ್ ಹಣಕಾಸು ಸಚಿವ ಹರ್ಪಾಲ್ ಸಿಂಗ್ ಚೀಮಾ, ದೀರ್ಘಕಾಲದಿಂದ ಎರಡು ಹೆದ್ದಾರಿಗಳು ಬಂದ್ ಆಗಿರುವುದರಿಂದ ಕೈಗಾರಿಕೆಗಳು ಮತ್ತು ವ್ಯವಹಾರಗಳಿಗೆ ಹೊಡೆತ ಬಿದ್ದಿದೆ. ಎಎಪಿ ಉದ್ಯೋಗ ಸೃಷ್ಟಿಗೆ ಬದ್ಧವಾಗಿದೆ. ಆದರೆ, ಇದು ವ್ಯಾಪಾರ ಮತ್ತು ಕೈಗಾರಿಕೆಗಳು ಸುಗಮವಾಗಿ ನಡೆದರೆ ಮಾತ್ರ ಸಾಧ್ಯ ಎಂದರು.

# ಕುಮಾರಸ್ವಾಮಿ ಡಿಎನ್‌ಎಯಲ್ಲಿದೆ

ಆರೋಪ ಮಾಡಿರಲಿಲ್ಲವೇ. ನನ್ನ ಮೇಲೆ ತನಿಖೆ ಮಾಡಿಸಿಲ್ಲವೇ? ಅವರ ಜತೆ ಸರ್ಕಾರ ಮಾಡಿದ್ದೇವೆ ಎಂದು ನಾವು ಸುಮ್ಮನೆ ಇದ್ದೇವೆ. ಅವರು ಮರ್ಯಾದೆಯಾಗಿ ಇದ್ದರೆ ಕ್ಷೇಮ" ಎಂದು ಹರಿಹಾಯ್ದರು.

ನಮ್ಮ ಜಿಲ್ಲೆಯ ಜನರಿಗೆ ಒಳ್ಳೆಯದು ಬಯಸೋದು ತಪ್ಪಾ? "ರಾಮನಗರ ಜಿಲ್ಲೆ ಮರುನಾಮಕರಣ ಮಾಡಬಾರದು ಎಂದು ಕೇಂದ್ರಕ್ಕೆ ಒತ್ತಡ ಹಾಕಿದ್ದಾರೆ. ನಮಗೂ ಕಾನೂನು ಗೊತ್ತಿದೆ. ಸಂವಿಧಾನದಲ್ಲಿ ನಾವು ಯಾರನ್ನೂ ಕೇಳುವ ಅಗತ್ಯವಿಲ್ಲ. ನಾವು ಮಾಹಿತಿ ನೀಡಬೇಕು ಎಂದು ಹೇಳಿ ಪ್ರಸ್ತಾವನೆ ಕಳುಹಿಸಿದ್ದೇವೆ. ದೆಹಲಿಯಲ್ಲಿರುವ ಕೆಲ ಮಂತ್ರಿಗಳು ಈ ವಿಚಾರದಲ್ಲಿ ಷಡ್ಯಂತ್ರ ನಡೆಸಿದ್ದಾರೆ. ನಾವು ಅದಕ್ಕೆಲ್ಲ ಜಗ್ಗುವುದಿಲ್ಲ. ಜಿಲ್ಲೆ ಮರುನಾಮಕರಣ ಮಾಡುವುದು ಹೇಗೆ, ಜಿಲ್ಲೆಯನ್ನು ಹೇಗೆ ಬದಲಾಯಿಸಬೇಕು ಎಂದು ಗೊತ್ತಿದೆ, ನಾವು ರಾಮನಗರವನ್ನು ಬೆಂಗಳೂರು ದಕ್ಷಿಣ ಎಂದು ಮಾಡುತ್ತೇವೆ" ಎಂದು ತಿಳಿಸಿದರು. "ರಿಯಲ್ ಎಸ್ಟೇಟ್ ಉದ್ದೇಶಕ್ಕೆ ಈ ಮರುನಾಮಕರಣ ಮಾಡಲಾಗುತ್ತಿದೆ ಎಂಬ ಟೀಕೆ ಬಗ್ಗೆ ಕೇಳಿದಾಗ, "ಹೌದೌದು, ರಿಯಲ್ ಎಸ್ಟೇಟ್ ಉದ್ದೇಶಕ್ಕೆ ಮಾಡುತ್ತಿದ್ದೇವೆ. ನಮ್ಮ ಕನಕಪುರ, ರಾಮನಗರ, ಚನ್ನಪಟ್ಟಣ, ಮಾಗಡಿ ಜನರಿಗೆ ಅನುಕೂಲ ಆಗಬಾರದೆ? ನೀವು ಅಲ್ಲಿಂದ ಇಲ್ಲಿಗೆ ಯಾಕೆ ಬಂದಿರಿ? ನಮ್ಮ ಜನ ಬೆಂಗಳೂರು ಜಿಲ್ಲೆಯವರು. ಅವರು ಬದುಕಬೇಕು. ನಮ್ಮ ಜಿಲ್ಲೆಯ ಜನರ ಆಸ್ತಿ ಹೋಗಿದೆ. ಅವರಿಗೆ ಒಳ್ಳೆಯದಾಗಲಿ ಎಂಬ ಆಸೆ ನಮ್ಮದು. ಅದರಲ್ಲಿ ತಪ್ಪೇನಿದೆ?" ಎಂದು ಪ್ರಶ್ನಿಸಿದರು.

ಕೇಂದ್ರ ಜಲ ಸಚಿವರ ಭೇಟಿ ಬಗ್ಗೆ ಮಾಹಿತಿ ನೀಡಿದ ಶಿವಕುಮಾರ್ ಅವರು, "ಪೆನ್ನಾರ್ ನದಿ ನೀರಿನ ವಿಚಾರವಾಗಿ ನ್ಯಾಯಾಲಯದ ಆದೇಶದಂತೆ ಕೇಂದ್ರ ಸರ್ಕಾರವು ಕರ್ನಾಟಕ ಹಾಗೂ ತಮಿಳುನಾಡು ನಡುವೆ ಸಂಧಾನ ಸೂತ್ರ ಸಭೆ ನಡೆಸಲು 2–3 ದಿನಾಂಕ ನೀಡಿತ್ತು. ಬೆಳಗಾವಿ ಅಧಿವೇಶನದ ಸಂದರ್ಭದಲ್ಲಿ ನಾವು ದಿನಾಂಕ ಮರುನಿಗದಿಗೆ ಮನವಿ ಮಾಡಿದ್ದೆ. ಈಗ ಕೇಂದ್ರ ಸರ್ಕಾರ ನ್ಯಾಯಾಲಯಕ್ಕೆ ವರದಿ ನೀಡಬೇಕಿರುವ ಕಾರಣ ಮಾ. 18ರಂದು ಸಭೆ ಮಾಡಲು ಆಹ್ವಾನ ನೀಡಿದ್ದರು. ಕೊನೆ ಗಳಿಗೆಯಲ್ಲಿ ನಾವು ಪ್ರತ್ಯೇಕವಾಗಿ ನಮ್ಮ ಪ್ರಸ್ತಾವನೆ ಮುಂದಿಡುತ್ತೇವೆ. ಕರ್ನಾಟಕದ ಮುಂದೆ ಕೂತು ಚರ್ಚೆ ಮಾಡುವುದಿಲ್ಲ ಎಂದು ಹೇಳಿತು ಎಂಬ ಸುದ್ದಿ ಹರಿದಾಡುತ್ತಿದೆ. ಆದರೆ ಈ ಸಭೆಯನ್ನು ಮುಂದೂಡಿದ್ದೇವೆ ಎಂದು ಸಚಿವರು ಕರೆ ಮಾಡಿ ಅಧಿಕೃತವಾಗಿ ತಿಳಿಸಿದ್ದಾರೆ. ತಮಿಳುನಾಡಿನ ಜೊತೆ ಪ್ರತ್ಯೇಕವಾಗಿ ಕೇಂದ್ರ ಸಚಿವರು ಮಾತನಾಡಲಿದ್ದಾರೆ. ಅವರು ತಮ್ಮ ರಾಜಕೀಯ ಉದ್ದೇಶದಿಂದ ಈ ನಿರ್ಧಾರಕ್ಕೆ ಬಂದಿರಬಹುದು. ನಾನು ಈ ಸಭೆಗೆ ಹೋಗುವ ಮುನ್ನ ಸಚಿವ ಸಂಪುಟದಲ್ಲಿ ಈ ವಿಚಾರವನ್ನು ಚರ್ಚೆ ಮಾಡಿ ಸರ್ಕಾರದ ನಿಲುವು ತಿಳಿಸಿದ್ದೆ" ಎಂದರು.

ಶಂಕುಸ್ಥಾಪನೆಗೆ ಆಹ್ವಾನ

ಹೈಕಮಾಂಡ್ ನಾಯಕರ ಭೇಟಿ ಬಗ್ಗೆ ಕೇಳಿದಾಗ, "ಮಹಾತ್ಮಾ ಗಾಂಧೀಜಿಯವರು ಕಾಂಗ್ರೆಸ್ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿ ನೂರು ವರ್ಷಗಳು ಪೂರೈಸಿರುವ ಹಿನ್ನೆಲೆಯಲ್ಲಿ ರಾಜ್ಯದಲ್ಲಿ 100 ಕಾಂಗ್ರೆಸ್ ಕಚೇರಿ ನಿರ್ಮಾಣಕ್ಕೆ ಮುಂದಾಗಿದ್ದು, ಇದರ ಶಂಕುಸ್ಥಾಪನೆಗಾಗಿ ದಿನಾಂಕ ನೀಡುವಂತೆ ನಮ್ಮ ಹೈಕಮಾಂಡ್ ನಾಯಕರನ್ನು ಭೇಟಿ ಮಾಡಿ ಆಹ್ವಾನ ನೀಡಿದ್ದೇನೆ. ರೇಸ್ ಕೋರ್ಸ್ ರಸ್ತೆಯಲ್ಲಿನ ಕಚೇರಿ ಸೇರಿದಂತೆ ಬೆಂಗಳೂರಿನಲ್ಲಿ ಒಟ್ಟು 3 ಕಡೆ ಶಂಕುಸ್ಥಾಪನೆ ನೆರವೇರಲಿದೆ. ಬೆಂಗಳೂರಿನ ಕಚೇರಿಗಳನ್ನು ಖುದ್ದಾಗಿ ಶಂಕುಸ್ಥಾಪನೆ ಮಾಡಲಾಗುವುದು, ಉಳಿದ ಕಡೆಗಳ ಕಚೇರಿಯನ್ನು ವರ್ಚುವಲ್ ಮೂಲಕ ಶಂಕುಸ್ಥಾಪನೆ ಮಾಡಲಾಗುವುದು. ಸಂಸತ್ ಅಧಿವೇಶನ ಮುಕ್ತಾಯದ ನಂತರ ದಿನಾಂಕ ನೀಡುವುದಾಗಿ ತಿಳಿಸಿದ್ದಾರೆ" ಎಂದು ಹೇಳಿದರು. ಯುವ ಕಾಂಗ್ರೆಸ್ ಕಾರ್ಯಕ್ರಮದಲ್ಲಿ ಪ್ರೀತಿಯಿಂದ ಮಂಡ್ಯ ಭಾಗದ ಕೆಲವು ನಾಯಕರನ್ನು ಛತ್ರಿ ಎಂದು ಕರೆದಿರುವುದನ್ನು ಬಿಜೆಪಿ ಅಧ್ಯಕ್ಷ ವಿಜಯೇಂದ್ರ ಅಧಿಕಾರದ ಮದ ಎಂದು ಟೀಕಿಸಿರುವ ಬಗ್ಗೆ ಕೇಳಿದಾಗ, "ನನಗೆ ಮದ ಏರಿದ್ದರೆ, ಇಳಿಸಲಿ. ನನಗೆ ಬೇಕಾದವರನ್ನು ನಾನು ಪ್ರೀತಿಯಿಂದ ಏನು ಬೇಕಾದರೂ ಕರೆಯುತ್ತೇನೆ. ಅದರಲ್ಲಿ ಇವರದೇನೂ? ಕೆಲವರು ತಮ್ಮ ಆಪ್ತರನ್ನು ಕಳ್ಳ ನನ್ನ ಮಗನೆ... ಅಂತ ಅನ್ನೋದು ಸೇರಿದಂತೆ ಇನ್ನು ಹಲವು ರೀತಿಯಲ್ಲಿ ಕರೆಯುತ್ತಾರೆ. ಅದು ನಮ್ಮ ಮತ್ತು ಅವರ ನಡುವಣ ಬಾಂಧವ್ಯದ ವಿಚಾರ. ಯಾವ ಛತ್ರಿನೂ ಇಲ್ಲ, ಏನೂ ಇಲ್ಲ" ಎಂದು ಸ್ಪಷ್ಟನೆ ನೀಡಿದರು.

**ಪಕ್ಷದ ತೀರ್ಮಾನಕ್ಕೆ ಬದ್ಧ:** ಪಕ್ಷದ ಪದಾಧಿಕಾರಿಗಳ ಸಭೆಯಲ್ಲಿ ಕೆಪಿಸಿಸಿ ಅಧ್ಯಕ್ಷ ಹುದ್ದೆ ಬಿಟ್ಟುಕೊಡುವ ವಿಚಾರ ಪ್ರಸ್ತಾಪಿಸಿದ್ದೀರಿ ಎಂದು ಕೇಳಿದಾಗ, "ಈ ವಿಚಾರವಾಗಿ ಪಕ್ಷ ತೀರ್ಮಾನ ಮಾಡಲಿದೆ. ನಾನು ನನ್ನ ಕರ್ತವ್ಯ ಮಾಡಿದ್ದೇನೆ. ನಾನು ಸೇರಿದಂತೆ ಇಲ್ಲಿ ಯಾರೂ ಶಾಶ್ವತವಲ್ಲ. ನನ್ನ ಕಾಲಾವಧಿಯಲ್ಲಿ ಕಾಂಗ್ರೆಸ್ ಕಚೇರಿ ನಿರ್ಮಾಣ ಕಾರ್ಯ ಪೂರ್ಣಗೊಳ್ಳಬೇಕು. ನಾವು ಬೇರೆ ಜವಾಬ್ದಾರಿಗಳನ್ನು ನಿಭಾಯಿಸಬೇಕು. ಪಕ್ಷ ಯಾವಾಗ ಈ ಬಗ್ಗೆ ನಿರ್ಧಾರ ಕೈಗೊಳ್ಳುತ್ತದೆಯೋ ಅದಕ್ಕೆ ನಾವು ಬದ್ಧವಾಗಿದ್ದೇವೆ. ಅದು ಇವತ್ತೋ, ನಾಳೆಯೋ, ಐದು ವರ್ಷಗಳ ನಂತರವೋ, 10 ವರ್ಷಗಳ ನಂತರವೋ ಗೊತ್ತಿಲ್ಲ. ಪಕ್ಷಕ್ಕೆ ಹೇಗೆ ನ್ಯಾಯ ಒದಗಿಸಿಕೊಡಬಹುದೋ ನಾನು ನನ್ನ ಪ್ರಯತ್ನ ಮಾಡಿದ್ದೇನೆ. ನಾನು ಯಾವುದೇ ಆತುರದಲ್ಲಿ ಇಲ್ಲ, ಪಕ್ಷದ ತೀರ್ಮಾನದಂತೆ ನಡೆಯುವೆ" ಎಂದು ತಿಳಿಸಿದರು.

**ಎಲ್ಲಾ ವರ್ಗದವರಿಗೂ ನ್ಯಾಯ ಒದಗಿಸಬೇಕು:** ಅಲ್ಪಸಂಖ್ಯಾತರಿಗೆ ಗುತ್ತಿಗೆಯಲ್ಲಿ 4% ಮೀಸಲಾತಿ ನೀಡಿರುವ ಬಗ್ಗೆ ಬಿಜೆಪಿ ಪ್ರತಿಭಟನೆಗೆ ಮುಂದಾಗಿದೆ ಎಂದು ಕೇಳಿದಾಗ, "ಸಮಾಜದ ಎಲ್ಲಾ ವರ್ಗದವರಿಗೆ ನ್ಯಾಯ ಒದಗಿಸುವುದು ನಮ್ಮ ಕರ್ತವ್ಯ. ನಾವು ಎಲ್ಲರನ್ನು ಸಮಾನವಾಗಿ ನೋಡುತ್ತೇವೆ. ಶೋಷಿತ ಸಮುದಾಯಗಳ ಜತೆ ಕಾಂಗ್ರೆಸ್ ಸರ್ಕಾರ ಕೈ ಜೋಡಿಸಿ ಅವರಿಗೆ ಶಕ್ತಿ ತುಂಬುವ ಕೆಲಸ ಮಾಡಲಿದೆ" ಎಂದರು.

**ಪೊಲೀಸರಿಗೆ ದೂರು ನೀಡಲಿ:** ಸಚಿವರ ಹನಿ ಟ್ರ್ಯಾಪ್ ವಿಚಾರದ ಬಗ್ಗೆ ಕೇಳಿದಾಗ, "ಈ ವಿಚಾರವಾಗಿ ಪೊಲೀಸ್ ಠಾಣೆಗೆ ಹೋಗಿ ದೂರು ನೀಡಲಿ. ಇದರ ಬಗ್ಗೆ ತನಿಖೆ ಮಾಡಿಸೋಣ" ಎಂದರು.ನನ್ನ ಹತ್ಯೆಗೆ ಸಂಚು ನಡೆಯುತ್ತಿದೆ ಎಂಬ ಮುನಿರತ್ನ ಅವರ ಹೇಳಿಕೆ ವಿಚಾರವಾಗಿ ಕೇಳಿದಾಗ, "ಸ್ಪೀಕರ್ ಅವರ ಜತೆ ಮಾತನಾಡಿ ಅವರಿಗೆ ಚಿಕಿತ್ಸೆ ಕೊಡಿಸುವಂತೆ ಮನವಿ ಮಾಡುತ್ತೇನೆ" ಎಂದು ತಿಳಿಸಿದರು.

ವಿದ್ಯುತ್ ದರ 36 ಪೈಸೆ ಏರಿಕೆ ಬಗ್ಗೆ ಕೇಳಿದಾಗ, "ನನಗೆ ಈ ವಿಚಾರ ಗೊತ್ತಿಲ್ಲ. ಇಂಧನ ಸಚಿವರ ಬಳಿ ಮಾತನಾಡುತ್ತೇನೆ" ಎಂದು ತಿಳಿಸಿದರು.

# ಮರಣ ಪ್ರಮಾಣ ಪತ್ರ

ಆರ್‌ಜಿ ಕರ್ ಆಸ್ಪತ್ರೆ ವೈದ್ಯಕೀಯ ಸೂಪರಿಂಟೆಂಡೆಂಟ್ ಮತ್ತು ಉಪ ಪ್ರಾಂಶು ಪಾಲರ (ಎಂಎಸ್‌ವಿಪಿ) ಜೊತೆಗೆ ಆರೋಗ್ಯ ಕಾರ್ಯದರ್ಶಿ ಬುಧವಾರ ಮೃತಪಟ್ಟ ವಿದ್ಯಾರ್ಥಿನಿಯ ಮನೆಗೆ ತೆರಳಿ ಪೋಷಕರಿಗೆ ಮರಣ ಪ್ರಮಾಣ ಪತ್ರ ನೀಡಿದರು.

ಕಳೆದ ವರ್ಷದ ಆಗಸ್ಟ್ 9ರಂದು ಘಟನೆ ನಡೆದಿದ್ದು, ಅಂದಿನಿಂದಲೂ ಪೋಷಕರು ತಮ್ಮ ಮಗಳ ಮರಣ ಪತ್ರಕ್ಕಾಗಿ ಸಾಕಷ್ಟು ಮನವಿ ಮಾಡಿದ್ದರು.

"ನಮ್ಮ ಮಗಳ ಮೂಲ ಮರಣ ಪ್ರಮಾಣ ಪತ್ರಕ್ಕಾಗಿ ನಾವು ಹೋರಾಟ ಮಾಡುತ್ತಿದ್ದೆವು. ಕಳೆದ ಜನವರಿಯಲ್ಲೂ ಕೂಡ ಈ ಸಂಬಂಧ ಇಮೇಲ್ ಮಾಡಿದ್ದೆವು. ಅದು ಒಂದು ಇಲಾಖೆಯಿಂದ ಮತ್ತೊಂದು ಇಲಾಖೆಗೆ ಹೋಗಬೇಕಾದ ಕಾರಣ ಸೂಕ್ತ ಸಹಕಾರ ಸಿಗಲಿಲ್ಲ. ಇದೀಗ ಆರೋಗ್ಯ ಕಾರ್ಯದರ್ಶಿ ದಿಫೀರ್ ಎಂದು ಮನೆಗೆ ಬಂದು ಮರಣ ಪ್ರಮಾಣದ ಮೂಲ ಪ್ರತಿ ಒದಗಿಸಿದ್ದಾರೆ" ಎಂದು ಪೋಷಕರು ತಿಳಿಸಿದ್ದಾರೆ.2024ರ ಆಗಸ್ಟ್ 9ರಂದು ಕೋಲ್ಕತ್ತಾದಲ್ಲಿನ ಪ್ರಸಿದ್ಧ ಆರ್‌ಜಿ ಕರ್ ವೈದ್ಯಕೀಯ ಆಸ್ಪತ್ರೆ ಮತ್ತು ಕಾಲೇಜಿನಲ್ಲಿ ಸ್ನಾತಕೋತ್ತರ ತರಬೇತಿನಿರತ ವೈದ್ಯೆ ವಿದ್ಯಾರ್ಥಿನಿ ಮೇಲೆ ಅತ್ಯಾಚಾರವೆಸಗಿ ಕೊಲೆ ಮಾಡಲಾಗಿತ್ತು. ಈ ಘಟನೆಗೆ ದೇಶಾದ್ಯಂತ ಆಕ್ರೋಶ ವ್ಯಕ್ತವಾಗಿತ್ತು.

# ಬೇಡ, ಎಚ್ಚರಿಕೆ ವಹಿಸಿ

ಈ ಶ್ರೇಷ್ಠ ಸಾಧನೆಯನ್ನು ಗೌರವಿಸುವ ಸಲುವಾಗಿ ಇದೀಗ 58 ಕೋಟಿ ರೂ. ನಗದು ಬಹುಮಾನ ಘೋಷಿಸಲಾಗಿದ್ದು, ಈ ಮೊತ್ತವನ್ನು ಆಟಗಾರರು, ತರಬೇತಿ ಮತ್ತು ಸಹಾಯಕ ಸಿಬ್ಬಂದಿಗಳು ಹಂಚಿಕೊಳ್ಳಲಿದ್ದಾರೆ.

ಈ ಹಿಂದೆ 2024 ರಲ್ಲಿ ಟಿ20 ವಿಶ್ವಕಪ್ ಗೆದ್ದಿದ್ದ ಭಾರತ ತಂಡಕ್ಕೆ ಬಿಸಿಸಿಐ 125 ಕೋಟಿ ರೂ. ಬಹುಮಾನ ಮೊತ್ತ ನೀಡಿತ್ತು. ಈ ಬಹುಮಾನ ಮೊತ್ತವನ್ನು ಆಟಗಾರರು ಹಾಗೂ ಸಿಬ್ಬಂದಿಗಳಿಗೆ ಹಂಚಲಾಗಿದೆ. ಇಲ್ಲಿ ಟೀಮ್ ಇಂಡಿಯಾ ಆಟಗಾರರಿಗೆ ಹಾಗೂ ಕೋಚ್ ರಾಹುಲ್ ದ್ರಾವಿಡ್ ಅವರಿಗೆ ತಲಾ 5 ಕೋಟಿ ರೂ. ನೀಡಲಾಗಿದೆ. ಇನ್ನುಳಿದ ಸಿಬ್ಬಂದಿಗಳಿಗೆ ತಲಾ 2.5 ಕೋಟಿ ರೂ. ನಿಗದಿ ಮಾಡಲಾಗಿತ್ತು. ಇದೇ ಮಾದರಿಯಲ್ಲಿ ಈ ಬಾರಿ 58 ಕೋಟಿ ರೂ. ಅನ್ನು ಟೀಮ್ ಇಂಡಿಯಾ ಸದಸ್ಯರಿಗೆ ಹಂಚಲಾಗುತ್ತದೆ.

# ಮಗಳನ್ನು ಗಲ್ಲಿಗೇರಿಸಿ

ನೀಡಿದ್ದು, ಆಕೆಗೆ ಬದುಕುವ ಯಾವ ಯೋಗ್ಯತೆಯೂ ಇಲ್ಲ, ಆಕೆಯನ್ನು ಗಲ್ಲಿಗೇರಿಸಿ ಎಂದು ಮನವಿ ಮಾಡಿದ್ದಾರೆ. ಹಾಗೆಯೇ ನ್ಯಾಯಕ್ಕಾಗಿ ಸೌರಭ್ ಕುಟುಂಬದ ಹೋರಾಟದಲ್ಲಿ ನಾವು ಅವರಿಗೆ ಬೆಂಬಲ ನೀಡುತ್ತೇವೆ ಎಂದು ಹೇಳಿದ್ದಾರೆ. ಪ್ರಕರಣದ ತನಿಖೆಯು ಸೌರಭ್ ರಜಪೂತ್ ಅವರ ಪತ್ನಿ ಮುಸ್ಕಾನ್ ರಸ್ತೋಗಿ ಮತ್ತು ಆಕೆಯ ಪ್ರಿಯಕರ ಸಾಹಿಲ್ ಶುಕ್ಲಾ ನಡುವಿನ ವಿವಾಹೇತರ ಸಂಬಂಧವನ್ನು ಬೆಳಕಿಗೆ ತಂದಿತು. ಸೌರಭ್ ತಮ್ಮ ಮಗಳನ್ನು ಕಣ್ಣುಮುಚ್ಚಿ ನಂಬುತ್ತಿದ್ದ, ಪ್ರತಿ ಹಂತದಲ್ಲೂ ಆಕೆಗೆ ಬೆಂಬಲ ನೀಡುತ್ತಿದ್ದ. ನಮ್ಮ ಮಗಳೇ ಸಮಸ್ಯೆಯಾಗಿದ್ದಳು. ಅವಳು ಅವನನ್ನು ಅವನ ಕುಟುಂಬದಿಂದ ಬೇರ್ಪಡಿಸಿದಳು. ಮತ್ತು ಈಗ ಅವಳು ಹೀಗೆ ಮಾಡಿದ್ದಾಳೆ. ಅವನು ಎಲ್ಲವನ್ನೂ ಪಣಕ್ಕಿಟ್ಟು, ತನ್ನ ಹೆತ್ತವರನ್ನು, ಅವರ ಕೋಟಿಗಟ್ಟಲೆ ಮೌಲ್ಯದ ಆಸ್ತಿಯನ್ನು ಬಿಟ್ಟುಹೋದ. ಈಗ ಆತನನ್ನೇ ಕೊಲೆ ಮಾಡಿದ್ದಾಳೆ.

# 'ಕಾವೇರಿ ಆರತಿ'; ಅನುಮತಿ

ನಗರದ ಕೆರೆಗಳ ಸಂರಕ್ಷಣೆ ಕುರಿತಂತೆ ಸಲ್ಲಿಸಲಾಗಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಗೆ ಸಂಬಂಧಿಸಿದಂತೆ ಗೀತಾ ಮಿಶ್ರಾ ಎಂಬವರು ಸಲ್ಲಿಸಿದ ಮಧ್ಯಂತರ ಅರ್ಜಿಯ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ಮತ್ತು ನ್ಯಾಯಮೂರ್ತಿ ಕೆ.ವಿ.ಅರವಿಂದ್ ಅವರಿದ್ದ ನ್ಯಾಯಪೀಠ ಈ ಆದೇಶ ನೀಡಿತು.

ಕಾರ್ಯಕ್ರಮದ ಸಂದರ್ಭದಲ್ಲಿ ಸಾರ್ವಜನಿಕ ಸುವ್ಯವಸ್ಥೆ ಮತ್ತು ಕಾನೂನಿನಲ್ಲಿನ ಎಲ್ಲ ನಿಯಮಗಳನ್ನು ಕಟ್ಟುನಿಟ್ಟಾಗಿ ಕಾಪಾಡಬೇಕು. ಜೊತೆಗೆ, ಯಾವುದೇ ರೀತಿಯ ವಾಣಿಜ್ಯ ಚಟುವಟಿಕೆಗಳಿಗೆ ಅವಕಾಶ ನೀಡಬಾರದು ಎಂದು ನ್ಯಾಯಪೀಠ ಆದೇಶದಲ್ಲಿ ತಿಳಿಸಿದೆ.

ಕಾವೇರಿ ಆರತಿ ಕಾಯಕ್ರಮ ಸಾಂಸ್ಕೃತಿಕವಾಗಿದ್ದು, ಯಾವುದೇ ರೀತಿಯಲ್ಲಿಯೂ ವಾಣಿಜ್ಯ ಚಟುವಟಿಕೆ ಅಲ್ಲ. ಈ ಸಂದರ್ಭದಲ್ಲಿ ಯಾವುದೇ ರೀತಿಯ ವಾಣಿಜ್ಯ ಚಟುವಟಿಕೆಗಳು, ಆಹಾರ ಪದಾರ್ಥಗಳ ಮಾರಾಟ ಮಾಡುವುದಿಲ್ಲ. ಈ ರೀತಿಯ ಆರತಿಯನ್ನು ಈ ಹಿಂದೆಯೂ ಇದೇ ಕೆರೆಯಲ್ಲಿ ಆಯೋಜಿಸಲಾಗಿದ್ದು, ಇದು ಮೊದಲ ಬಾರಿಗೆ ಮಾಡಿರುವುದಲ್ಲ ಎಂಬುದಾಗಿ ಸರ್ಕಾರ ಮತ್ತು ಜಲ ಮಂಡಳಿ ವಕೀಲರು ಭರವಸೆ ನೀಡಿದ್ದಾರೆ. ಅದರಂತೆ ಅನುಮತಿ ನೀಡುತ್ತಿರುವುದಾಗಿ ಪೀಠ ಹೇಳಿದೆ.

ಕೆರೆಗಳ ಸಂರಕ್ಷಣೆಗೆ ಪ್ರೋತ್ಸಾಹಿಸುವುದು ಮತ್ತು ಅಭಿವೃದ್ಧಿ ಸಾರ್ವಜನಿಕ ಜಾಗೃತಿ ಮೂಡಿಸುವುದಕ್ಕೆ ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ ಕಾಯಿದೆಯಲ್ಲಿ ಅವಕಾಶವಿದೆ ಎಂಬುದಾಗಿ ಜಲಮಂಡಳಿ ಪರ ವಕೀಲರ ವಾದ ಪುರಸ್ಕರಿಸಿದ ಪೀಠ, ಕಾಯಿದೆಯಲ್ಲಿ ವಿವರಿಸಿರುವಂತೆ ಕೆರೆಗಳ ಸಂರಕ್ಷಣೆಗೆ ವಿರುದ್ಧವಾಗಿರುವಂತಹ ಯಾವುದೇ ರೀತಿಯ ಚಟುವಟಿಕೆಗಳಿಗೆ ಅವಕಾಶ ನೀಡದಂತೆ ಕಾರ್ಯಕ್ರಮ ಆಯೋಜಿಸಲು ಅವಕಾಶ ನೀಡಿ ಆದೇಶಿಸಿತು.

ಇದೇ ಸಂದರ್ಭದಲ್ಲಿ ಮಧ್ಯಂತರ ಅರ್ಜಿಗೆ ಸಂಬಂಧಿಸಿದಂತೆ ಸೂಕ್ತ ರೀತಿಯಲ್ಲಿ ಮನವಿ ಮಾಡದೆ, ವಾದ ಅಂಶಗಳನ್ನೂ ನೀಡದೆ ಕಾವೇರಿ ಆರತಿ ಆಯೋಜನೆ ಮಾಡುತ್ತಿದ್ದ ಬೆಂಗಳೂರು ಜಲ ಮಂಡಳಿಯನ್ನು ಪ್ರತಿವಾದಿಯನ್ನಾಗಿಸದೆ, ಅರ್ಜಿಯ ಪ್ರತಿಯನ್ನೂ ನೀಡದ ಅರ್ಜಿದಾರರ ಪರ ವಕೀಲರ ಕ್ರಮಕ್ಕೆ ನ್ಯಾಯಪೀಠ ತೀವ್ರ ತೀವ್ರ ಸಮಾಧಾನ ವ್ಯಕ್ತಪಡಿಸಿತು. ಇದಕ್ಕೂ ಮುನ್ನ ವಾದ ಮಂಡಿಸಿದ ಅರ್ಜಿದಾರರ ಪರ ವಕೀಲರು, ಗಂಗಾ ಆರತಿ ಮಾದರಿಯಲ್ಲಿ ನಗರದ ಸ್ಯಾಂಕಿ ಕೆರೆಯಲ್ಲಿ ಕಾವೇರಿ ಆರತಿ ಹಮ್ಮಿಕೊಳ್ಳುವುದಕ್ಕೆ ಅರ್ಜಿದಾರರಿಂದ ಯಾವುದೇ ಆಕ್ಷೇಪಣೆ ಇಲ್ಲ. ಆದರೆ, ಈ ಕಾರ್ಯಕ್ರಮಕ್ಕೆ ಕೆರೆಯ ಬಫರ್ ಝೋನ್‌ನಲ್ಲಿ ಕಾನೂನುಬಾಹಿರವಾಗಿ ತಾತ್ಕಾಲಿಕವಾಗಿ ನಿರ್ಮಾಣವಾಗಲಿವೆ. ಇದಕ್ಕೆ ಅವರ ಆಕ್ಷೇಪಣೆ ಇದೆ ಎಂದು ಪೀಠಕ್ಕೆ ತಿಳಿಸಿದರು. ಸ್ಯಾಂಕಿ ಕೆರೆಯ ಬಫರ್ ಝೋನ್‌ಲ್ಲಿ ಈ ರೀತಿಯ ಕಾಯಕ್ರಮಗಳನ್ನು ಹಮ್ಮಿಕೊಳ್ಳುವುದು ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದ ಕಾಯಿದೆಗೆ ತದ್ವಿರುದ್ಧ. ಅಲ್ಲದೆ, ಈ ಕಾರ್ಯಕ್ರಮಕ್ಕೆ ವೇದಿಕೆ ಸೇರಿದಂತೆ ತಾತ್ಕಾಲಿಕ ನಿರ್ಮಾಣ ಕಾರ್ಯ ನಡೆಯುತ್ತಿದೆ. ಇದರಿಂದ ಕೆರೆಯಲ್ಲಿನ ಹಕ್ಕಿಗಳಿಗೆ ತೀವ್ರ ತರದ ತೊಂದರೆಯಾಗುತ್ತದೆ ಎಂದು ಅವರು ಪೀಠಕ್ಕೆ ವಿವರಿಸಿದರು.

# ಬೆಲೆ ಏರಿಕೆಯ ಗ್ಯಾರಂಟಿ:

ಏರಿಕೆಯಿಂದ ಜನ ಕಂಗೆಟ್ಟಿದ್ದಾರೆ. ಫ್ರೀ ವಿದ್ಯುತ್ ಅಂತಾರೆ ಜನರಿಗೆ ದರ ಏರಿಕೆಯ ಬರೆ ಎಳೆಯುತ್ತಾರೆ. ರಾಜ್ಯದಲ್ಲಿರೋದು ದರಿದ್ರ ಕಾಂಗ್ರೆಸ್ ಎಂದು ಕಿಡಿಕಾರಿದರು. ವಿಧಾನಸಭೆಯಲ್ಲಿ ನಾವು ಈ ಬಗ್ಗೆ ಪ್ರಶ್ನೆ ಮಾಡುತ್ತೇವೆ. ಸರ್ಕಾರದ ವಿರುದ್ಧ ಹೋರಾಟ ಮಾಡುತ್ತೇವೆ ಎಂದು ಬಿವೈ ವಿಜಯೇಂದ್ರ ವಾಗ್ದಾಳಿ ನಡೆಸಿದರು

# ನಾಳೆಯಿಂದ ಎಸ್ಸೆಸ್ಸೆಲ್ಸಿ ಪರೀಕ್ಷೆ

ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷಾ ಸಿಬ್ಬಂದಿ ಮತ್ತು ಜಾಗೃತ ದಳ ಅಧಿಕಾರಿಗಳನ್ನು ಹೊರತುಪಡಿಸಿ, ಸಾರ್ವಜನಿಕರಿಗೆ, ಸಂಘ ಸಂಸ್ಥೆಗಳಿಗೆ ಪ್ರವೇಶ ಇರುವುದಿಲ್ಲ.

ಕಳೆದ ವರ್ಷದಿಂದ ಪ್ರತಿ ಕೊಠಡಿಯಲ್ಲಿ ಸಿಸಿ ಟಿವಿ ಅಳವಡಿಸಲಾಗಿದೆ. ವೆಬ್ ಕಾಸ್ಟಿಂಗ್‌ನಲ್ಲಿ 3 ಹಂತದಲ್ಲಿ ವೀಕ್ಷಣೆ ಮಾಡಲಾಗುತ್ತದೆ. ಈ ಬಾರಿ ಕೃತಕ ತಂತ್ರಜ್ಞಾನ ಬಳಸಿ ಫೇಸ್ ಡಿಟೆಕ್ಷನ್ ಮಾಡಲಾಗುತ್ತಿದೆ. ಆದ್ದರಿಂದ ಎಲ್ಲ ವಿದ್ಯಾರ್ಥಿಗಳು ಕೊಠಡಿಯಲ್ಲಿ ಶಿಸ್ತನ್ನು ಕಾಪಾಡಿಕೊಳ್ಳಬೇಕು.

ಮುಖ್ಯ ಅಧೀಕ್ಷಕರು ಕ್ಯಾಮರಾ ಹೊಂದಿರದ ಸಾಮಾನ್ಯ ಮೊಬೈಲ್ ಮಾತ್ರ ಇರಿಸಿಕೊಳ್ಳಬಹುದು. ಎಲ್ಲಾ ಪರೀಕ್ಷಾ ಸಿಬ್ಬಂದಿಗಳು ಮತ್ತು ವಿದ್ಯಾರ್ಥಿಗಳು ಮೊಬೈಲ್, ಸ್ಮಾರ್ಟ್ ವಾಚ್ ಬಳಕೆ ನಿಷೇಧ. ಎಲೆಕ್ಟ್ರಾನಿಕ್ ಸಾಮಾಗ್ರಿಗಳನ್ನು ಒಯ್ಯುವುದು ಮತ್ತು ಬಳಸುವುದನ್ನು ನಿಷೇಧಿಸಿದೆ. ಪರೀಕ್ಷಾ ಕೇಂದ್ರದೊಳಗೆ ಅನಧಿಕೃತ ವ್ಯಕ್ತಿಗಳ ಪ್ರವೇಶ, ಚಿತ್ರೀಕರಣ ಮುಂತಾದವುಗಳನ್ನು ಸಂಪೂರ್ಣವಾಗಿ ನಿಷೇಧಿಸಿದೆ.

ನಿಷೇಧಿತ ವಲಯದಲ್ಲಿ ಯಾವುದೇ ರೀತಿಯ ಸ್ಫೋಟಕ ವಸ್ತುಗಳನ್ನು ಕೊಂಡು ಹೋಗುವುದನ್ನು ಹಾಗೂ ಇನ್ನಿತರ ಮಾರಕ ಆಯುಧಗಳನ್ನು ಹೊಂದುವುದನ್ನು ನಿಷೇಧಿಸಿದೆ. ನಿಷೇಧಿತ ವಲಯದಲ್ಲಿ ಪರೀಕ್ಷೆಗೆ ಸಂಬಂಧಿಸಿದ ಯಾವುದೇ ವಿಷಯಗಳನ್ನು, ಮಾಹಿತಿಯನ್ನು ರವಾನಿಸುವ, ತಿಳಿಸುವ ಸಲುವಾಗಿ ಸಂಜ್ಞೆಗಳನ್ನು ಮಾಡುವುದುಮುಂತಾದ ಕ್ರಿಯೆಗಳಲ್ಲಿ ತೊಡಗುವುದನ್ನು ಸಂಪೂರ್ಣವಾಗಿ ನಿಷೇಧಿಸಿದೆ.


ಪರೀಕ್ಷೆ ಪ್ರಾರಂಭವಾಗುವ ಒಂದು ಗಂಟೆ ಮುಂಚಿತವಾಗಿ ಹಾಗೂ ಪರೀಕ್ಷೆ ಮುಗಿಯುವ ವರೆಗೆ ಪರೀಕ್ಷಾ ಕೇಂದ್ರಗಳ 200 ಮೀಟರ್ ವ್ಯಾಪ್ತಿಯಲ್ಲಿರುವ ಜೆರಾಕ್ಸ್ ಅಂಗಡಿಗಳು ಕಾರ್ಯನಿರ್ವಹಿಸುವುದನ್ನು ಮತ್ತು ಈ ವ್ಯಾಪ್ತಿಯಲ್ಲಿ ಧ್ವನಿವರ್ಧಕ ಬಳಕೆಯನ್ನು ನಿಷೇಧಿಸಿದೆ.ಈ ಸಮಯದಲ್ಲಿ ವಿದ್ಯಾರ್ಥಿಗಳು ಪರೀಕ್ಷಾ ಪ್ರವೇಶ ಪತ್ರವನ್ನು ತೋರಿಸಿ ಬಿಎಂಟಿಸಿ ಸಾಮಾನ್ಯ ಬಸ್ಗಳಲ್ಲಿ ಉಚಿತವಾಗಿ ಪ್ರಯಾಣಿಸಲು ಅವಕಾಶ ಕಲ್ಪಿಸಲಾಗಿದೆ.

**ಸಿಸಿ ಕ್ಯಾಮೆರಾ ಕಡ್ಡಾಯ..!:** ಈ ಬಾರಿ ಪರೀಕ್ಷೆ ನಡೆಯುವುದನ್ನು ವೆಬ್ ಕ್ಯಾಸ್ಟಿಂಗ್ ಮೂಲಕ ವೀಕ್ಷಿಸಲಾಗುವುದು. ಆದ್ದರಿಂದ ಪ್ರತಿ ಪರೀಕ್ಷಾ ಕೇಂದ್ರದಲ್ಲಿ ಸಿ.ಸಿ. ಕ್ಯಾಮರಾ ಅಳವಡಿಕೆ ಕಡ್ಡಾಯವಾಗಿದೆ. ಯಾವ ಕೇಂದ್ರದಲ್ಲಿ ಇಲ್ಲವೋ ಮಾಹಿತಿ ನೀಡಿ ಈಗಲೇ ಸಿಸಿ ಕ್ಯಾಮೆರಾ ಅಳವಡಿಸಬೇಕು. ಪರೀಕ್ಷಾ ಕೇಂದ್ರಗಳ ಅಧೀಕ್ಷಕರು ಈ ಬಗ್ಗೆ ಪರಿಶೀಲಿಸಿ ಖಾತ್ರಿಪಡಿಸಿಕೊಳ್ಳಬೇಕು .

**ಉಚಿತ ಬಸ್ ಪಾಸ್..!:** ಪರೀಕ್ಷೆ ಸಮಯದಲ್ಲಿ ವಿದ್ಯಾರ್ಥಿಗಳು ಪರೀಕ್ಷಾ ಪ್ರವೇಶ ಪತ್ರವನ್ನು ತೋರಿಸಿ ಬಿಎಂಟಿಸಿ ಹಾಗೂ ಕೆಎಸ್‌ಆರ್‌ಟಿಸಿ ಸಾಮಾನ್ಯ ಬಸ್‌ಗಳಲ್ಲಿ ಉಚಿತವಾಗಿ ಪ್ರಯಾಣಿಸಲು ಅವಕಾಶ ಕಲ್ಪಿಸಲಾಗಿದೆ. ಮೊದಲ ದಿನವಾದ ನಾಳೆ ಪ್ರಥಮ ಭಾಷೆಗಳಾದ ಕನ್ನಡ, ತೆಲುಗು, ಹಿಂದಿ, ಮರಾಠಿ, ತಮಿಳು, ಉರ್ದು, ಇಂಗ್ಲಿಷ್ ಪರೀಕ್ಷೆಗಳು ಬೆಳಿಗ್ಗೆ 10ರಿಂದ 1.15ರವರೆಗೆ ನಡೆಯಲಿವೆ.

ಮಾ. 24–ಗಣಿತ, 26–ದ್ವಿತೀಯ ಭಾಷೆಗಳಾದ ಇಂಗ್ಲಿಷ್, ಕನ್ನಡ, 29–ಸಮಾಜ ವಿಜ್ಞಾನ, ಏಪ್ರಿಲ್ 1–ಅರ್ಥಶಾಸ್ತ್ರ, ಎಂಜಿನಿಯರಿಂಗ್ ವಿಷಯಗಳು, 2–ವಿಜ್ಞಾನ ಹಾಗೂ ರಾಜ್ಯಶಾಸ್ತ್ರ, ಹಿಂದೂಸ್ತಾನಿ, ಕರ್ನಾಟಕ ಸಂಗೀತ, 4–ತೃತೀಯ ಭಾಷೆಗಳಾದ ಹಿಂದಿ, ಕನ್ನಡ, ಇಂಗ್ಲಿಷ್, ಅರೇಬಿಕ್, ಪರ್ಷಿಯನ್, ಉರ್ದು, ಸಂಸ್ಕೃತ, ಕೊಂಕಣಿ, ತುಳು ಹಾಗೂ ಎನ್‌ಎಸ್‌ಕ್ಯೂಎಫ್ ವಿಷಯಗಳು.

# ಜಿಲ್ಲೆಯಲ್ಲಿ ಬಿಜೆಪಿ ಪಕ್ಷ ಬಲಿಷ್ಠವಾಗಿದೆ: ಆನಂದ ಸ್ವಾಮಿ



ಮಾಗಡಿ:ಜಿಲ್ಲೆಯಲ್ಲಿ ಬಿಜೆಪಿ ಪಕ್ಷವನ್ನು ಸದೃಢವಾಗಿ ಕಟ್ಟಲಾಗುವುದು ಎಂದು ಬಿಜೆಪಿ ಪಕ್ಷದ ಜಿಲ್ಲಾಧ್ಯಕ್ಷ ಆನಂದ ಸ್ವಾಮಿ ಹೇಳಿದರು.

ಪಟ್ಟಣದ ಬಿಜೆಪಿ ಕಚೇರಿಯಲ್ಲಿ ತಾಲೂಕು ಬಿಜೆಪಿ ಪಕ್ಷ ಏರ್ಪಡಿಸಿದ ಅಭಿನಂದನಾ ಕಾರ್ಯಕ್ರಮದಲ್ಲಿ ಅಭಿನಂದನೆ ಸ್ವೀಕರಿಸಿ ಮಾತನಾಡಿದ ಅವರು, ಸದಸ್ಯತ್ವ ಅಭಿಯಾನ, ಸದಸ್ಯರ ನೊಂದಣಿ, ತಾಲ್ಲೂಕು ಅಧ್ಯಕ್ಷ ಚುನಾವಣೆಗಳನ್ನು ಸಮರ್ಥವಾಗಿ ನಿಭಾಯಿಸಿಕೊಂಡು ಬಂದಿರುವುದರಿಂದ ಜಿಲ್ಲೆಯಲ್ಲಿ ಬಿಜೆಪಿ ಪಕ್ಷ ಬಲಿಷ್ಠವಾಗಿದೆ ಇದರಿಂದ ಡಾ.ಸಿ.ಎನ್. ಮಂಜುನಾಥ್ ಅವರು ಸಂಸದರಾಗಲು ಸಾಧ್ಯವಾಯಿತು. ಮುಂಬರುವ ಜಿ.ಪಂ. ತಾ.ಪಂ. ಗ್ರಾಮಪಂಚಾಯ್ತಿ ಹಾಗೂ ವಿಧಾನಸಭಾ ಚುನಾವಣೆಗಳಲ್ಲಿ ಜೆಡಿಎಸ್–ಬಿಜೆಪಿ ಪಕ್ಷ ಒಂದಾಗಿ ಕಾಂಗ್ರೆಸ್ ಪಕ್ಷವನ್ನು ಎದುರಿಸಿ ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ಜೆಡಿಎಸ್–ಬಿಜೆಪಿ ಮೈತ್ರಿ ಅಭ್ಯರ್ಥಿಗಳನ್ನು ಗೆಲ್ಲಿಸಲು ಇಂದಿನಿಂದಲೇ ರಣತಂತ್ರ ರೂಪಿಸಲಾಗುವುದು. ಮಾಗಡಿ ತಾಲೂಕಿನಲ್ಲೂ ಬಿಜೆಪಿ ಪಕ್ಷದಿಂದ ಶಾಸಕರಾಗಿದ್ದರು ಮುಂದೆ ಬಿಜೆಪಿ ಪಕ್ಷದ ಶಾಸಕರಾಗಲು ಕಾರ್ಯಕರ್ತರು ಶ್ರಮಿಸುವಂತೆ ಮನವಿ ಮಾಡಿದರು.

ರಾಜ್ಯದಲ್ಲಿ ಬಿಜೆಪಿ ಪಕ್ಷ ಅಧಿಕಾರ ಇದ್ದವೇಳೆ ಜಿಲ್ಲೆಯಲ್ಲಿ ನೀರಾವರಿ ಯೋಜನೆ, ಶಾಲಾ, ಕಾಲೇಜು, ರಸ್ತೆ, ಕೆಂಪೇಗೌಡ ವೀರಸಮಾಧಿ ನಿರ್ಮಾಣ ಸೇರಿದಂತೆ ಸಾಕಷ್ಟು ಶಾಶ್ವತ ಅಭಿವೃದ್ಧಿ ಕಾಮಗಾರಿಗಳಿಗೆ ನೂರಾರು ಕೋಟಿ ಅನುದಾನ ನೀಡಿದೆ ಈ ಬಗ್ಗೆ ಪ್ರತಿಯೊಬ್ಬ ಬಿಜೆಪಿ ಪಕ್ಷದ ಕಾರ್ಯಕರ್ತರು ಪ್ರತಿ ಮನೆ,ಮನೆಗಳಿಗೆ ತಿಳಿಸಿ ಸ್ಥಳಿಯ ಚುನಾವಣೆಗಳಲ್ಲಿ ಪಕ್ಷದ ಅಭ್ಯರ್ಥಿಗಳನ್ನು ಗೆಲ್ಲಿಸುವಂತೆ ತಿಳಿಸಿದರು.

ಸಾಮಾನ್ಯ ಕಾರ್ಯಕರ್ತನಾದ ನನಗೆ ಜಿಲ್ಲೆಯ ಅಧ್ಯಕ್ಷನಾಗಿ ಜವಬ್ದಾರಿ ವಹಿಸಿದ ಮೇಲೆ ಬಿಜೆಪಿ ಪಕ್ಷದ ಸಂಘಟನೆಗೆ ಹೆಚ್ಚು ಒತ್ತು ನೀಡಿದರಿಂದ ಮತ್ತೆ ಎರಡನೇ ಭಾರಿಗೆ ರಾಜ್ಯಾಧ್ಯ ವಿಜಯೇಂದ್ರ ಅವರು ಆಯ್ಕೆಮಾಡಿದ್ದಾರೆ. ಇದಕ್ಕೆ ಸಹಕಾರ ನೀಡಿದ ಜಿಲ್ಲೆಯ ಎಲ್ಲಾ ಮುಖಂಡರಿಗೆ ಅಭಿನಂಧಿಸುವುದಾಗಿ ತಿಳಿಸಿದರು.

ತಾಲೂಕು ಬಿಜೆಪಿ ಅಧ್ಯಕ್ಷ ವೀರಭದ್ರಪ್ಪ ಮಾತನಾಡಿ, 12 ಸಾವಿರ ಸದಸ್ಯತ್ವ ಅಭಿಯಾನ ಹಾಗೂ 192 ಬೂತ್ ಕಮಿಟಿ ರಚನೆ ಮಾಡಿ ಜಿಲ್ಲೆಯಲ್ಲಿ ಮಾಗಡಿ ತಾಲೂಕು ಮೊದಲ ಸ್ಥಾನದಲ್ಲಿದೆ, ಲೋಕಸಭಾ ಚುನಾವಣೆ ವೇಳೆ ಜೆಡಿಎಸ್ ಪಕ್ಷ ಸಹಕಾರದಿಂದ ತಾಲೂಕಿನಲ್ಲಿ 30 ಸಾವಿರ ಬಹುಮತ ಪಡೆಯಲಾಯಿತು ಆ ಮತಗಳನ್ನು ಮುಂದುವರೆಸಿಕೊಂಡು ಹೋಗುವ ಜವಬ್ದಾರಿ ವಹಿಸಿದರೆ ಸಾಕು. ಮುಂದಿನ ಸ್ಥಳಿಯ ಚುನಾವಣೆಗಳಲ್ಲಿ ಜೆಡಿಎಸ್ ಗೆ ಬಿಜೆಪಿ ಅನಿವಾರ್ಯ ಬಿಜೆಪಿಗೆ ಜೆಡಿಎಸ್ ಅನಿವಾರ್ಯವಾಗಿದೆ, ತಾ.ಪಂ. ಜಿ.ಪಂ. ಗ್ರಾ.ಪಂ ಚುನಾವಣೆಗಳಲ್ಲಿ 50 ರಷ್ಟು ಬಿಜೆಪಿ ಕಾರ್ಯಕರ್ತರಿಗೆ ಟಿಕೇಟು ನೀಡುವಂತೆ ಸಂಬಂಧ ಪಟ್ಟವರಲ್ಲಿ ಮನವಿ ಮಾಡುವಂತೆ ನಮ್ಮ ನಾಯಕರಿಗೆ ಒತ್ತಡ ಏರಲಾಗಿದೆ, 6 ಜಿ.ಪಂ.ಗಳಲ್ಲಿ ಜೆಡಿಎಸ್ ಸಹಕಾರ ನೀಡಿದರೆ 2 ಜಿ.ಪಂ.ಗಳಲ್ಲಿ ಬಿಜೆಪಿ ಅಭ್ಯರ್ಥಿಗಳು ಗೆಲ್ಲಲ್ಲು ಕಾರ್ಯತಂತ್ರ ರೂಪಿಸಲಾಗಿದೆ ಎಂದರು.

ಯಾವ ಗ್ರಾಮಗಳಲ್ಲಿ ಶುದ್ದಕುಡಿಯುವ ನೀರಿನ ಘಟಕಗಳು, ಹೈಮಾಸ್ಟ್ ಲೈಟ್, ರಸ್ತೆ, ಚರಂಡಿ ಇಲ್ಲ ಅಂಥಹಕಡೆ ನಿರ್ಮಿಸಿ ಮೂಲಭೂತ ಸೌಲಭ್ಯ ಸಂಸದರು ನೀಡುತ್ತಿರುವುದರಿಂದ ಮುಂದಿನ ಚುನಾವಣೆ ಗೆದ್ದು ಕಾಂಗ್ರೆಸ್ ಗೆ ಸರಿಸಮಾನವಾಗಿ ಚುನಾವಣೆ ಎದುರಿಸುತ್ತೇವೆ ಎಂದರು.

ಮುಖಂಡ ಕೆ.ಆರ್. ಪ್ರಸಾದ್ ಗೌಡ, ಉಪಾಧ್ಯಕ್ಷ ಚಿಕ್ಕೇಗೌಡ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ್, ತಾಲೂಕು ಮಹಿಳಾ ಮೋರ್ಚಾ ಅಧ್ಯಕ್ಷ ವೇಧ ವೆಂಕಟೇಶ್, ಎಂ.ಆರ್. ರಾಘವೇಂದ್ರ, ರೈತಮೋರ್ಚಾ ಅಧ್ಯಕ್ಷ ಹನುಮಂತೇಗೌಡ, ಒಬಿಸಿ ಅಧ್ಯಕ್ಷ ಕುಮಾರು, ಉಪಾಧ್ಯಕ್ಷೆ ಗೀತಾಂಜಲಿ, ಕಾರ್ಯದರ್ಶಿ ಬಜ್ಜ ಜಯರಾಮ, ಬಿಡದಿ ಪ್ರಸನ್ನ, ವೀರಾಪುರ ದನುಶ್, ಕಣ್ಣೂರು ನಾಗರಾಜು, ಕುದೂರು ಭಾರತಿ, ಆನಂದ್, ಆಂಜು ಇತರರು ಇದ್ದರು.

# ವಕೀಲರ ಸಂಘಕ್ಕೆ ಅಧ್ಯಕ್ಷರ ಆಯ್ಕೆ



**ಕೊರಟಗೆರೆ:** ತಾಲೂಕು ವಕೀಲರ ಸಂಘದ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಎಂ.ಎಲ್. ಸಂತೋಷ್, ಉಪಾಧ್ಯಕ್ಷರಾಗಿ ಹನುಮಂತರಾಜು, ಪ್ರಧಾನ ಕಾರ್ಯದರ್ಶಿ ಮಂಜುನಾಥ ಖಜಾಂಚಿ ಅರುಂಧತಿ, ಜಂಟಿಕಾರ್ಯದರ್ಶಿ ಕೃಷ್ಣಪ್ಪ ಆಯ್ಕೆಯಾದರೆ ಎಂದು ಚುನಾವಣಾಧಿಕಾರಿ ಯಾಗಿದ್ದ ಹಿರಿಯ ವಕೀಲ ನಾಗೇಂದ್ರಪ್ಪ ಘೋಷಣೆ ಮಾಡಿದರು.

ವಕೀಲರ ಸಂಘದ ಅಧ್ಯಕ್ಷ ಸ್ಥಾನಕ್ಕೆ ಜಿ.ಡಿ.ದೇವರಾಜು, ಟಿ.ಕೃಷ್ಣಮೂರ್ತಿ, ಎಂ.ಎಲ್.ಸಂತೋಷ್‌ಸ್ಪರ್ಧೆ ಮಾಡಿದ್ದು, ದೇವರಾಜು 18 ಮತ ಪಡೆದರೆಎಂ. ಎಲ್ ಸಂತೋಷ್ ಅವರು 19 ಮತ ಪಡೆದು ಜಯಶೀಲರಾಗಿದ್ದಾರೆ. ಜಂಟಿ ಕಾರ್ಯದರ್ಶಿ ಸ್ಥಾನಕ್ಕೆ ಸಂತೋಷಲಕ್ಷ್ಮೀಅವರು15 ಮತ ಮತ್ತುಕೃಷ್ಣಪ್ಪ ಅವರು22 ಮತಪಡೆದು ಕೃಷ್ಣಪ್ಪಅವರುಜಂಟಿ ಕಾರ್ಯದರ್ಶಿಯಾಗಿ ಆಯ್ಕೆಯಾಗಿದ್ದಾರೆ. ಇನ್ನೂಳಿದಂತೆ ಉಪಾಧ್ಯಕ್ಷ, ಪ್ರಧಾನಕಾರ್ಯದರ್ಶಿ ಮತ್ತುಖಜಾಂಚಿ ಸ್ಥಾನಗಳು ಅವಿರೋಧವಾಗಿ ಆಯ್ಕೆ ಮಾಡಲಾಗಿದೆ.

ನೂತನಅಧ್ಯಕ್ಷ ಎಂ.ಎಲ್.ಸಂತೋಷ್ ಮಾತನಾಡಿ ವಕೀಲರ ನಾನಾ ಕುಂದುಕೊರತೆಗಳು ಇದ್ದು, ಎಲ್ಲರ ಸಹಕಾರ ಪಡೆದುಎರಡು ವರ್ಷಗಳ ಕಾಲ ಅಧ್ಯಕ್ಷನಾಗಿಆಯ್ಕೆಯಾಗಿದ್ದೇನೆ. ನಮ್ಮ ವಕೀಲರ ಸಮಸ್ಯೆಗಳನ್ನ ಬಗೆಹರಿಸಲುಎಲ್ಲರ ಪರವಾಗಿ ಕೆಲಸ ಮಾಡುತ್ತೇನೆ. ನನಗೆ ಮತ ಹಾಕಿದಎಲ್ಲಾ ನನ್ನ ವೃತ್ತಿಬಾಂದವರಿಗೆ ಧನ್ಯವಾಗಳನ್ನ ತಿಳಿಸಿದರು.

ಪ್ರಧಾನ ಕಾರ್ಯದರ್ಶಿ ಎಂ.ಎಚ್.ಮಂಜುನಾಥ್ ಮಾತನಾಡಿ ವಕೀಲ ಸಮಸ್ಯೆ ಹಾಗೂ ಕುಂದುಕೊರತೆಗಳ ಬಗ್ಗೆ ಗಮನ ಹರಿಸಿ ಮುಂದಿನ ದಿನಗಳಲ್ಲಿ ಈ ನಮ್ಮ ಜೆಎಂಎಫ್‌ಸಿ ಕೋರ್ಟ್‌ನ್ನ ಮೇಲ್ದರ್ಜೆಗೆತರಲುಎಲ್ಲರು ಪ್ರಮಾಣಿಕ ಪ್ರಯತ್ನ ಮಾಡಬೇಕು.ನೂತನವಾಗಿಆಯ್ಕೆಯಾದಎಲ್ಲರಿಗೂ ಧನ್ಯವಾದಗಳು ಎಂದು ಹೇಳಿದರು.

ಚುನಾವಣೆ ವೇಳೆಯಲ್ಲಿ ಪ್ರಧಾನ ಕಾರ್ಯದರ್ಶಿ ಎಂ.ಎಚ್.ಮಂಜುನಾಥ್ ಮಾಜಿಅಧ್ಯಕ್ಷ ಬಿ.ಎಲ್.ನಾಗರಾಜು, ಹಿರಿಯ ವಕೀಲರಾದಎ. ಎಂ.ಕೃಷ್ಣಮೂರ್ತಿ, ಪುಟ್ಟರಾಜಯ್ಯ, ಮಧುಸೂಧನ್, ಅನಿಲ್‌ಕುಮಾರ್, ತಿಮ್ಮರಾಜು, ರಾಮಚಂದ್ರಯ್ಯ, ನರಸಿಂಹರಾಜು ಶಿವಕುಮಾರ್, ಮಲ್ಲಿಕಾರ್ಜುನಯ್ಯ, ನಾಗೇಂದ್ರಪ್ಪ, ಸಂತೋಷಲಕ್ಷ್ಮೀ, ಶಿಲ್ಪಾ, ಕೆಂಪರಾಜಮ್ಮ, ಬೃಂಧಾ, ಮಂಜುಳ, ಜ್ಯೋತಿ, ಸುನೀಲ್, ಶಿವರಾಜು, ತಿಮ್ಮೇಶ್, ನಾಗರಾಜು, ಅನಂತರಾಜು, ಸೇರಿದಂತೆಇತರರುಇದ್ದರು.

# ಎಲ್ಲಾ ವಿದ್ಯಾರ್ಥಿಗಳಿಗೆ ಬಹುಮಾನ ವಿತರಣೆ




**ಮುಳಬಾಗಿಲು:** ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ 125 ಅಂಕಗಳನ್ನು ಗಳಿಸಿದ ತಾಲ್ಲೂಕಿನ ಎಲ್ಲಾ ವಿದ್ಯಾರ್ಥಿಗಳಿಗೆ ಬಹುಮಾನ ವಿತರಣೆ ಮಾಡಲಾಗುತ್ತದೆ ಎಂದು ಕರುನಾಡ ಕನ್ನಡ ಸಂಘದ ಅಧ್ಯಕ್ಷ ಈ.ಶ್ರೀನಿವಾಸ ಗೌಡ ಹೇಳಿದರು.

ತಾಲ್ಲೂಕಿನ ಕುರುಡುಮಲೆ ಕ್ರಾಸ್‌ನಲ್ಲಿರುವ ಕುವೆಂಪು ಗ್ರಾಮೀಣ ನರ್ಸರಿ, ಹಿರಿಯ ಮತ್ತು ಪ್ರೌಢ ಶಾಲೆಯಲ್ಲಿ ಕರುನಾಡ ಕನ್ನಡ ಸಂಘದ ವತಿಯಿಂದ ಶಾಲೆಗೊಂದು ಕನ್ನಡ ಕಾರ್ಯಕ್ರಮ ಸಲುವಾಗಿ ಡಿವಿಜಿ ಅವರ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಕನ್ನಡ ಭಾಷೆಯನ್ನು ಬೆಳೆಸುವ ನಿಟ್ಟಿನಲ್ಲಿ ನಮ್ಮ ಸಂಘ ಇಂತಹ ತೀರ್ಮಾನವನ್ನು ಕಾರ್ಯರೂಪಕ್ಕೆ ತರಲಿದೆ ಎಂದು ತಿಳಿಸಿದರು.

ಕರುನಾಡ ಕನ್ನಡ ಸಂಘದ ಪ್ರಧಾನ ಕಾರ್ಯದರ್ಶಿ ಎಂ.ವಿ.ಜನಾರ್ದನ್ ಮಾತನಾಡಿ, ಸಾಹಿತ್ಯದಲ್ಲಿ ಪ್ರೌಢಿಮೆಯನ್ನು ಸಾಧಿಸಲು ಸತತವಾಗಿ ಪರಿಶ್ರಮ ಇರಬೇಕು. ಅಂತಹವರಲ್ಲಿ ಡಿವಿಜಿ ಅವರು ಸೇರಿಕೊಳ್ಳುತ್ತಾರೆ. ನಾವು ತುಂಬಾ ಆಹ್ಲಾದಕರ ಜೀವನವನ್ನು ನಡೆಸಿದ್ದೇವೆ. ಏಕೆಂದರೆ ಮೊಬೈಲ್, ಟಿ.ವಿ ಇಲ್ಲ. ಸಂವಹನವನ್ನು ಮಾಡಲು ಜನ ಸಂಪರ್ಕವನ್ನು ಮಾಡಬೇಕಿತ್ತು. ಇದೀಗ ಟೆಕ್ನಾಲಜಿ ಅಭಿವೃದ್ಧಿ ಆದಷ್ಟು ಜನರ ಮದ್ಯೆ ದೂರವೂ ಸಾಗುತ್ತಿದೆ ಎಂದರು.

ಗುತ್ತಿಗೆದಾರರ ಉತ್ತನೂರು ಅರುಣ್ ಕುಮಾರ್ ಮಾತನಾಡಿ, ತಾಲ್ಲೂಕಿನಲ್ಲಿ ಡಿವಿಜಿ ಹುಟ್ಟಿ ಬೆಳೆದು ದೇಶದ ಉದ್ದಗಲಕ್ಕೂ ಸಾಹಿತ್ಯವನ್ನು ಪಸರಿಸಿದ್ದಾರೆ. ಅದೇ ರೀತಿ ಉತ್ತನೂರು ಗ್ರಾಮದಲ್ಲಿ ರಾಜಮ್ಮ ಜನಿಸಿ ಸಾಹಿತ್ಯ ಕ್ಷೇತ್ರಕ್ಕೆ ಕೊಡುಗೆ ನೀಡಿದ್ದಾರೆ. ಅಂತಹವರು ನಮ್ಮೆಲ್ಲರಿಗೂ ಸ್ಪೂರ್ತಿ ಆಗಬೇಕು ಎಂದು ತಿಳಿಸಿದರು.

ಇಲ್ಲಿನ ಶಾಲೆ ಖಾಸಗಿ ಶಾಲೆಯಾಗಿದ್ದು, ಗ್ರಾಮೀಣ ಪ್ರದೇಶಗಳಲ್ಲಿನ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡುತ್ತಿದೆ. ಆದ್ದರಿಂದ ಶಾಲೆಯ ಅಭಿವೃದ್ಧಿಗೆ 5 ಸಾವಿರ ಹಣವನ್ನು ನೀಡಿದರು. ಎಲ್ಲರೂ ಮುಂದಿನ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಬೇಕೆಂದು ವಿದ್ಯಾರ್ಥಿಗಳಿಗೆ ಶುಭ ಆರೈಸಿದರು.

ಪ್ರಬಂಧ ಸ್ಪರ್ಧೆಯಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳಿಗೆ ಬಹುಮಾನ, ಪ್ರಶಸ್ತಿ, ಪುಸ್ತಕಗಳನ್ನು ನೀಡಿ ಅಭಿನಂದಿಸಲಾಯಿತು.

ರಾಷ್ಟ್ರ ಪ್ರಶಸ್ತಿ ವಿಜೇತ ನಿವೃತ್ತ ಶಿಕ್ಷಕ ವೆಂಕಟರವಣಪ್ಪ, ಕರುನಾಡ ಕನ್ನಡ ಸಂಘದ ಕಾರ್ಯದರ್ಶಿ ನಂದಕಿಶೋರ್, ಕಾನೂನು ಸಲಹೆಗಾರ್ತಿ ದೀಕ್ಷ, ಪತ್ರಿಕಾ ಕಾರ್ಯದರ್ಶಿ ಅತ್ತಿಕುಂಟೆ ಎಸ್.ಸುಬ್ರಮಣಿ, ಶ್ರೀರಾಮ್, ಕುವೆಂಪು ಗ್ರಾಮೀಣ ನರ್ಸರಿ, ಹಿರಿಯ ಮತ್ತು ಪ್ರೌಢ ಶಾಲೆಯ ಕಾರ್ಯದರ್ಶಿ ಗಣೇಶ್, ಮುಖ್ಯ ಶಿಕ್ಷಕ ನಾಗರಾಜ್, ಸಿ.ಆರ್.ಪಿ ರಾಜ್ ಕುಮಾರ್, ಶಿಕ್ಷಕರಾರ ಟಿ.ಆರ್.ವನಜಾಕ್ಷಿ, ನವೀನ್ ಪ್ರಸಾದ್, ಬಾಬು, ಹೆಚ್.ಗಿರೀಶ್, ಎಸ್.ಮಾಲತಿ, ನಾಗಮಣಿ, ವರಲಕ್ಷ್ಮಿ, ರಾಜೇಶ್, ಎಂ.ವಿ.ವೆಂಕಟೇಶಪ್ಪ, ಭಾಗ್ಯಲಕ್ಷ್ಮೀ ಮತ್ತಿತರರು ಇದ್ದರು.

# ಉತ್ತಮ ಫಲಿತಾಂಶದ ನಿರೀಕ್ಷೆ

**ನಾಗಮಂಗಲ:** ನಾಗಮಂಗಲ ತಾಲ್ಲೂಕಿನಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷಾ ಕೇಂದ್ರಗಳು ಸಿದ್ಧತೆಯಾಗಿದ್ದು 21ರಂದು ಆರಂಭಗೊಳ್ಳಲಿದ್ದು ವಿದ್ಯಾರ್ಥಿಗಳ ಅಧ್ಯಯನಶೀಲತೆಯಿಂದ ತಾಲ್ಲೂಕಿನಲ್ಲಿ ಉತ್ತಮ ಫಲಿತಾಂಶ ಬರುವ ನಿರೀಕ್ಷೆ ಇದೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಕೆ.ಯೋಗೇಶ್ ಮಾತನಾಡಿದರು.

ಅವರು ನಾಗಮಂಗಲ ತಾಲ್ಲೂಕು ಪದವಿ ಪೂರ್ವ ಕಾಲೇಜಿನಲ್ಲಿ ಪತ್ರಿಕಾಗೋಷ್ಠಿಯಲ್ಲಿ ಭಾಗವಹಿಸಿ ಮಾತನಾಡಿ, ಈ ಬಾರಿಯ ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ವಿದ್ಯಾರ್ಥಿಗಳಿಗೆ ಯಾವುದೇ ಆತಂಕವಿಲ್ಲದೆ ಪರೀಕ್ಷೆ ಎಂಬ ಭಯವನ್ನು ಹೋಗಲಾಡಿಸುವ ಪೂರಕ ವ್ಯವಸ್ಥೆ ಪ್ರೇರಣ ಶಿಬಿರಗಳನ್ನು ಏರ್ಪಡಿಸಿದ್ದು ವಿದ್ಯಾರ್ಥಿಗಳಿಗೆ ಪರೀಕ್ಷೆ ಉತ್ಸಾಹ ಹೆಚ್ಚಿಸುವ ಪ್ರಯತ್ನ ತಾಲೂಕಿನ ಎಲ್ಲಾ ಮುಖ್ಯ ಶಿಕ್ಷಕರುಗಳು ಶಿಕ್ಷಕರು ಶ್ರಮವಹಿಸಿದ್ದಾರೆ.

ಈ ಬಾರಿಯ ಪ್ರಸ್ತುತ ಸಾಲಿನಲ್ಲಿ 1344 ಗಂಡು ಮಕ್ಕಳು ಮತ್ತು 1098 ಹೆಣ್ಣುಮಕ್ಕಳು ಒಟ್ಟು 2442 ಮಕ್ಕಳು ತಾಲೂಕಿನಲ್ಲಿ ಪರೀಕ್ಷೆಯಲ್ಲಿ ಭಾಗವಹಿಸಲಿದ್ದು 165 ಸಿಬ್ಬಂದಿಗಳು ಆರು ಪರೀಕ್ಷಾ ಕೇಂದ್ರಗಳು 108 ಸಿಸಿ ಕ್ಯಾಮೆರಾ ಅಳವಡಿಕೆಯಾಗಿದ್ದು ಮೂರು ತಂಡಗಳು ಪರೀಕ್ಷಾ ಪರಿಶೀಲನ ತಂಡ 3 ಹಂತದಲ್ಲಿ ತಾಲೂಕು ದಂಡಾಧಿಕಾರಿಗಳ ನೇತೃತ್ವ.ತಾಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳ ನೇತೃತ್ವ. ತಾಲೂಕು ಕಾರ್ಯ ನಿರ್ವಹಣಾ ಅಧಿಕಾರಿಗಳ ನೇತೃತ್ವದಲ್ಲಿ ರಚಿಸಲಾಗಿದ್ದು.ಯಾವುದೇ ಆತಂಕವಿಲ್ಲದೆ ಪರೀಕ್ಷೆ ನಡೆಸಲಾಗುವುದು ವಿದ್ಯಾರ್ಥಿಗಳ ಹಿತದೃಷ್ಟಿ ಆರೋಗ್ಯ ಇಲಾಖೆ ಸಾರಿಗೆ ಇಲಾಖೆ ವಿದ್ಯುತ್ ಇಲಾಖೆಗೆ ಸಹಕಾರ ನೀಡುವುದಾಗಿ ತಿಳಿಸಿದ್ದು ವಿದ್ಯಾರ್ಥಿಗಳ ಬಗ್ಗೆ ಹೆಚ್ಚಿನ ನಿಗವಹಿಸಿ ಯಶಸ್ವಿಯಾಗಿ ಪರೀಕ್ಷೆಯನ್ನು ನಡೆಸಲಾಗುವುದೆಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಕಾಲೇಜು ಉಪ ಪ್ರಾಂಶುಪಾಲರಾದ ಮೊಹಮ್ಮದ್ ಜಾಕೀರ್ ಇಸಿ ಓ ಮಂಜುನಾಥ್ ಹಾಗೂ ಸಿಬ್ಬಂದಿ ವರ್ಗದವರು ಹಾಜರಿದ್ದರು



# ಎರಡು ದಿನಗಳ ಪಾದಯಾತ್ರೆ



**ಮಾಲೂರು:** ಕರ್ನಾಟಕ ರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ಪ್ರವೀಣ್ ಕುಮಾರ್ ಶೆಟ್ಟಿ ಅವರ ನೇತೃತ್ವದಲ್ಲಿ ದಿನಾಂಕ 21.03.2025 ಮತ್ತು 22.03.2025 ರಂದು ಮೇಕೆದಾಟು ಕುಡಿಯುವ ನೀರಿಗೆ ರಾಮನಗರದಿಂದ ಬೆಂಗಳೂರಿನ ವಿಧಾನಸೌಧದವರೆಗೆ ಎರಡು ದಿನಗಳ ಕಾಲ ಸಾವಿರಾರು ಕಾರ್ಯಕರ್ತರು ಪಾದಯಾತ್ರೆಯೊಂದಿಗೆ ಮುಖ್ಯಮಂತ್ರಿಗಳಿಗೆ ಮತ್ತು ನೀರಾವರಿ ಸಚಿವರಿಗೆ ಮನವಿಯನ್ನು ನೀಡುವ ಮೂಲಕ ಒತ್ತಾಯಿಸಲಾಗುವುದು ಎಂದು ತಾಲ್ಲೂಕು ಅಧ್ಯಕ್ಷ ಶಿವಾರ ನಾರಾಯಣಸ್ವಾಮಿ , ಕಾರ್ಯಾಧ್ಯಕ್ಷ ಎನ್.ರಾಮಕೃಷ್ಣಪ್ಪ ಹೇಳಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಅಯೋಜಿಸಿದ್ದ ಸುದ್ದಿ ಗೋಷ್ಠಿಯಲ್ಲಿ ಮಾತನಾಡಿದರು.

ತಮಿಳುನಾಡು ಮತ್ತು ಕರ್ನಾಟಕ ರಾಜ್ಯದ ನೀರಾವರಿ ಸಚಿವರು ಒಗ್ಗೂಡಿ ಮೇಕೆದಾಟು ನೀರಿನ ವಿಚಾರವನ್ನು ಚರ್ಚಿಸಿ ನ್ಯಾಯ ಕೊಡಿಸಲು ಮುಂದಾಗಬೇಕು ಎಂದು ಒತ್ತಾಯಿಸಲು ಮಾಲೂರಿನಿಂದ ತಾಲ್ಲೂಕು ಅಧ್ಯಕ್ಷ ಶಿವಾರನಾರಾಯಣಸ್ವಾಮಿ, ಕಾರ್ಯಾಧ್ಯಕ್ಷ ಎನ್. ರಾಮಕೃಷ್ಣಪ್ಪ ನೇತೃತ್ವದಲ್ಲಿ ನೂರಾರು ಸಂಖ್ಯೆಯಲ್ಲಿ ಭಾಗವಹಿಸಲಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಮೇಕೆದಾಟು ನೀರಿಗೆ ಬೆಂಬಲ ನೀಡುವಂತೆ ಮನವಿ ಮಾಡಿದರು.

ತಾಲೂಕು ಅಧ್ಯಕ್ಷ ಶಿವಾರ ನಾರಾಯಣಸ್ವಾಮಿ, ತಾಲೂಕು ಕಾರ್ಯಾಧ್ಯಕ್ಷ ಎನ್ ರಾಮಕೃಷ್ಣಪ್ಪ , ಪ್ರಧಾನ ಕಾರ್ಯದರ್ಶಿ ಎಂ ಎಸ್ ಮಣಿ , ಹಿರಿಯ ಸಲಹೆಗಾರಾದ ಜಿ ಸಿ ನಾರಾಯಣಸ್ವಾಮಿ, ಎ ಎನ್ ದಯಾನಂದ್, ಮಹಿಳಾ ತಾಲೂಕು ಅಧ್ಯಕ್ಷೆ ಅಮರಾವತಿ ತಾಲೂಕು ಉಪಾಧ್ಯಕ್ಷ ಚಿರಂಜೀವಿ ,ರೈತ ಘಟಕದ ಅಧ್ಯಕ್ಷರಾದ ರಮೇಶ್ ಕಾರ್ಮಿಕ ಘಟಕದ ಅಧ್ಯಕ್ಷ ಶಿವಕುಮಾರ್ , ತಾಲೂಕು ಖಜಾಂಚಿ ಸಿ ವಿ ಚಲಪತಿ, ನಗರ ಅಧ್ಯಕ್ಷ ರಮೇಶ್ ಮಂಜುನಾಥ್, ತಾಲೂಕು ಕಾರ್ಯದರ್ಶಿ ಮಂಜುನಾಥ್, ಆಟೋ ನಾರಾಯಣಸ್ವಾಮಿ ಗೌರಿಶಂಕರ್ ಹಾಜರಿದ್ದರು.

# ಗಂಗವಾರ ಚೌಡಪ್ಪನಹಳ್ಳಿ ಗ್ರಾಮ ಪಂಚಾಯಿತಿ ನೂತನ ಅಧ್ಯಕ್ಷರಾಗಿ ಶಿವರಾಜ್ ಅವಿರೋಧ ಆಯ್ಕೆ

**ದೇವನಹಳ್ಳಿ:** ತಾಲೂಕಿನ ಚನ್ನರಾಯಪಟ್ಟಣ ಹೋಬಳಿಯ ಗಂಗವಾರ ಚೌಡಪ್ಪನಹಳ್ಳಿ ಗ್ರಾಮ ಪಂಚಾಯಿತಿಯ ನೂತನ ಅಧ್ಯಕ್ಷರಾಗಿ ಶಿವರಾಜ್. ಕೆ ಮತ್ತು ಉಪಾಧ್ಯಕ್ಷೆಯಾಗಿ ಲಕ್ಷ್ಮಮ್ಮ ಉಮೇಶ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾ ಅಧಿಕಾರಿ ಘೋಷಿಸಿದರು.

ಈ ವೇಳೆಯಲ್ಲಿ ನೂತನ ಅಧ್ಯಕ್ಷ ಶಿವರಾಜ್. ಕೆ ಮಾತನಾಡಿ, ಪ್ರಸಕ್ತವಾಗಿ ಬೇಸಿಗೆ ಕಾಲವಾಗಿರುವ ಕಾರಣ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಎಲ್ಲಾ ಹಳ್ಳಿಗಳಿಗೂ ಕುಡಿಯುವ ನೀರು ಸಮರ್ಪಕವಾಗಿ ಕಲ್ಪಿಸುವ ಬಗ್ಗೆ ಹೆಚ್ಚಿನ ಗಮನ ಹರಿಸಲಾಗುತ್ತದೆ ಹಾಗೂ ಎಲ್ಲಾ ಸರ್ವ ಸದಸ್ಯರ ಸಹಮತದಿಂದ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಎಲ್ಲಾ ಗ್ರಾಮಗಳ ಜನರ ಕುಂದು ಕೊರತೆಗಳನ್ನು ಬಗೆಹರಿಸಿ ಹಳ್ಳಿಗಳ ಅಭಿವೃದ್ಧಿಯನ್ನು ಮಾಡಲಾಗುತ್ತದೆ ಎಂದು ಹೇಳಿದರು.



ಗಂಗವಾರ ಚೌಡಪ್ಪನಹಳ್ಳಿ ಗ್ರಾ.ಪಂ.ನೂತನ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಶಿವರಾಜ್. ಕೆ ಮತ್ತು ಉಪಾಧ್ಯಕ್ಷೆ ಲಕ್ಷ್ಮಮ್ಮ ಉಮೇಶ್ ರವರನ್ನು ಊರಿನ ಮುಖಂಡರು ಮತ್ತು ಗ್ರಾಮಸ್ಥರು ಬೃಹತ್ ಸೇಬಿನ ಹಾರದ ಮೂಲಕ ಅಭಿನಂದಿಸಿದರು.

ಇದೇ ಸಂದರ್ಭದಲ್ಲಿ ಮುಖಂಡರಾದ ಜೊನ್ನಹಳ್ಳಿ ವಕೀಲ ಮುನಿರಾಜು, ಸಿ.ಎಸ್. ರಾಜಣ್ಣ ಸೇರಿದಂತೆ ಗ್ರಾಮ ಪಂಚಾಯಿತಿ ಸದಸ್ಯರು ಗ್ರಾಮದ ಮುಖಂಡರು ಮತ್ತು ಗ್ರಾಮಸ್ಥರು ಭಾಗಿಯಾಗಿದ್ದರು.

# ಪುರಸಭಾ ಸ್ಥಾಯಿ ಸಮಿತಿ ಅಧ್ಯಕ್ಷರಾಗಿ ಕೋಮಲ ನಟರಾಜ್ ಆಯ್ಕೆ

**ದೇವನಹಳ್ಳಿ:** ಪುರಸಭೆಯ ಸ್ಥಾಯಿ ಸಮಿತಿ ನೂತನ ಅಧ್ಯಕ್ಷರಾಗಿ ಕೋಮಲ ನಟರಾಜ್ ಆಯ್ಕೆಯಾಗಿದ್ದಾರೆ.

ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಹಿನ್ನೆಲೆಯಲ್ಲಿ ತಾಲೂಕಿನ ಹಲವು ಮುಖಂಡರು ಮತ್ತು ಪುರಸಭೆಯ ಅಧ್ಯಕ್ಷರು ಉಪಾಧ್ಯಕ್ಷರು ಸದಸ್ಯರು ಅಭಿನಂದಿಸಿದರು.

ನೂತನ ಅಧ್ಯಕ್ಷೆ ಕೋಮಲ ನಟರಾಜ್ ಅಭಿನಂದನೆಯನ್ನು ಸ್ವೀಕರಿಸಿ ಮಾತನಾಡಿ ಪಟ್ಟಣದ ಸ್ವಚ್ಛತೆ ಮತ್ತು ನೈರ್ಮಲ್ಯವನ್ನು ಗಮನದಲ್ಲಿಟ್ಟುಕೊಂಡು ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗುವುದು ಹಾಗೂ ಬೇಸಿಗೆಯಾದ ಕಾರಣ ಪಟ್ಟಣದ ಎಲ್ಲಾ ವಾರ್ಡಿನ ಮನೆಗಳಿಗೂ ಸಮರ್ಪಕವಾಗಿ ನೀರನ್ನು ಪೂರೈಸಲಾಗುವುದು. ಮುಖ್ಯವಾಗಿ ಮುಂದಿನ ದಿನಗಳಲ್ಲಿ ನಿವೇಶನ ರಹಿತರಿಗೆ ನಿವೇಶನ ಕಲ್ಪಿಸುವ ಸಲುವಾಗಿ ಗಮನ ಹರಿಸಲಾಗುವುದು ಎಂದು ಹೇಳಿದರು.



ಇದೇ ಸಂದರ್ಭದಲ್ಲಿ ದೇವನಹಳ್ಳಿ ಪಟ್ಟಣದ ಪುರಸಭೆಯ ಸ್ಥಾಯಿ ಸಮಿತಿಯ ಮಾಜಿ ಅಧ್ಯಕ್ಷ ಹನುಮಂತಪ್ಪ, ಅಧ್ಯಕ್ಷ ಮುನಿಕೃಷ್ಣ ,ಉಪಾಧ್ಯಕ್ಷ ಜಿಎ. ರವೀಂದ್ರ ,ಸದಸ್ಯರಾದ ಕೊಡಿಮಂಚೇನಹಳ್ಳಿ ಎಸ್. ನಾಗೇಶ್ , ಆರ್.ರಘು ,ವೈ. ಆರ್ ರುದ್ರೇಶ್, ಬಾಲರಾಜು ಇತರ ಸದಸ್ಯರು ಮತ್ತು ಮುಖಂಡರು ಉಪಸ್ಥಿತರಿದ್ದರು.

# ಪ್ರದೀಪ್ ಈಶ್ವರ್ ಅವರ ಕೈ ಬಲ ಪಡಿಸಬೇಕಿದೆ

ಚಿಕ್ಕಬಳ್ಳಾಪುರ: ಬೆಂಗಳೂರಿನಲ್ಲಿ ನಡೆದ ಕೈವಾರ ತಾತಯ್ಯ ಜಯಂತಿ ಸಂಧರ್ಭದಲ್ಲಿ ಶಾಸಕ ಪ್ರದೀಪ್ ಈಶ್ವರ್ ಹಾಗೂ ಸಮುದಾಯದ ಮುಖಂಡರ ನಡುವೆ ಮಾತಿನ ಸಂಘರ್ಷ ಸಂಭಂದಪಟ್ಟಾಗಿ ಇಂದು ನಗರದ ಪತ್ರಕರ್ತರ ಭವನದಲ್ಲಿ ಬಲಿಜ ಸಮುದಾಯದ ಮುಖಂಡರು ಪತ್ರಿಕಾಗೋಷ್ಠಿ ನಡೆಸಿದರು.

ಮುಖಂಡರಾದವೆಂಕಟನಾರಾಯಣಪ್ಪ,ಡ್ಯಾನ್ಸ್ ಶ್ರೀನಿವಾಸ್,ವಿ. ಸುರೇಶ್,ಜೋಳದ ಕಿಟ್ಟಿ ರವರು ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ನಡೆದ ಘಟನೆ ಉದ್ದೇಶ ಪೂರ್ವಕವಾಗಿ ಶಾಸಕರನ್ನು ಪ್ರಚೋದಿಸಲಾಗಿದೆ ಎಂದರು.




ವೆಂಕಟನಾರಾಯಣಪ್ಪ ಮಾತನಾಡಿ ಬಲಿಜ ಜನಾಂಗದ ಅನುಕೂಲಕ್ಕಾಗಿ 2ಎ ಮೀಸಲಾತಿ ತಂದೆ ತರುತ್ತೀನೆ ಎಂದು ಮುಂದಾಗಿರುವ ಶಾಸಕ ಪ್ರದೀಪ್ ಈಶ್ವರ್ ಅವರ ಕೈ ಬಲ ಪಡಿಸಬೇಕು ಮತ್ತು ಅವರಿಗೆ ಪ್ರೋತ್ಸಾಹಿಸಬೇಕಾಗಿದೆ. ಬೆಂಗಳೂರಿನ ಕಾರ್ಯಕ್ರಮದಲ್ಲಿ ಕೆಲ ಕಿಡಿಗೇಡಿಗಳು ಶಾಸಕರ ಭಾಷಣದ ವೇಳೆ ಉದ್ದೇಶಪೂರ್ವಕವಾಗಿ ಅವರನ್ನು ಪ್ರಚೋದಿಸಲು ಮುಂದಾಗಿದ್ದು ಅವರಿಗೆ ಶೊಭೆ ತರಲ್ಲ,ವೇದಿಕೆಯಲ್ಲಿ ಇದ್ದ ಮುಖಂಡರು ಕೂಡ ಭಾಷಣದಲ್ಲಿ ಅಡ್ಡಪಡಿಸಿದ್ದವರನ್ನು ಸಮಜಾಯಿಸಲು ಮುಂದಾಗಿಲ್ಲ ಅಂದಿನ ಘಟನೆಯ ಕುರಿತು ಸಮುದಾಯದ ಬಗ್ಗೆ ಸಮಾಜದಲ್ಲಿ ತಪ್ಪು ಸಂದೇಶ ರವಾನೆಯಾಗಿದೆ ಇನ್ನು ಅಂದಿನ ಕಾರ್ಯಕ್ರಮದಲ್ಲಿ ಸಂಸದರಾದ ಪಿ.ಸಿ.ಮೋಹನ್ ಹಾಗೂ ಶಾಸಕ ಪ್ರದೀಪ್ ಈಶ್ವರ್ ನಡುವೆ ಯಾವುದೇ ರೀತಿಯ ಘಟನೆ ನಡೆದಿಲ್ಲ ಇಬ್ಬರು ಬೇರೆ ಬೇರೆ ಪಕ್ಷದವರಾದರು ಜನಾಂಗದ ವಿಷಯ ಬಂದಾಗ ಒಗ್ಗಟ್ಟಿನ ಪ್ರದರ್ಶನ ನೀಡುವರು. ಯಾರೂ ಕಿಡಿಗೇಡಿಗಳು ಉದ್ದೇಶಪೂರ್ವಕವಾಗಿ ಕಾರ್ಯಕ್ರಮದಲ್ಲಿ ಗದ್ದಲ ಸೃಷ್ಟಿ ಆಗಿತ್ತು. ಯಾರು ಅದನ್ನು ಕಿವಿಕೊಡಬಾರದು ಸಮುದಾಯಧವರು ಒಗ್ಗಟ್ಟು ಪ್ರದರ್ಶಿಸಬೇಕು ಎಂದರು.ಬಲಿಜ ಸಮುದಾಯಕ್ಕೆ ಸೇರಿದ ರಾಜ್ಯದಲ್ಲಿ ಏಕೈಕ ಸಂಸದ ಪಿ.ಸಿ.ಮೋಹನ್ ಹಾಗೂ ಏಕೈಕ ಶಾಸಕ ಪ್ರದೀಪ್ ಈಶ್ವರ್ ಇಬ್ಬರು ನಮ್ಮ ಜನಾಂಗಕ್ಕೆ ಎರಡು ಕಣ್ಣು ಇದ್ದಹಾಗೆ ಸಮುದಾಯಕ್ಕೆ 2ಎ ಮೀಸಲಾತಿ ತರಲು ಪ್ರಯತ್ನ ಮಾಡಬೇಕು ಎಂದರು.ಎಸ್.ಪಿ.ಶ್ರೀನಿವಾಸ್ ಮಾತನಾಡಿ ಈ ಹಿಂದೆ ಸಂಸದ ಪಿ.ಸಿ.ಮೋಹನ್ ರವರ ಜತೆಗಿದ್ದ ಸುರೇಶ್ ಎನ್ನುವ ಒಬ್ಬ ವ್ಯಕ್ತಿ ಶಾಸಕರ ಭಾಷಣದ ವೇಳೆ ಸಂಸದ ಪಿ.ಸಿ.ಮೋಹನ್ ಹಾಗೂ ಶಾಸಕ ಪ್ರದೀಪ್ ಈಶ್ವರ್ ನಡುವೆ ವೈಮನಸ್ಸು ಉಂಟುಮಾಡಲು ಉದ್ದೇಶಪೂರ್ವಕವಾಗಿ ಗದ್ದಲ ಸೃಷ್ಟಿಸಿ ಜನಾಂಗದಲ್ಲಿ ಒಡಕು ಉಂಟು ಮಾಡಲು ಪ್ರಯತ್ನಿಸಿದ್ದು ಸಂಸದರ ಮೇಲೆ ದ್ವೇಷಕ್ಕೆ ಈ ಕೃತ್ಯ ಎಸಗಿದ್ದಾನೆ ಇನ್ನು ಶಾಸಕರು ಸಂಸದ ಕೊಡುಗೆಗಳ ಬಗ್ಗೆ ಹಾಡಿ ಹೊಗಲಿದ್ದಾರೆ ವಾಸ್ತವವಾಗಿ ಶಾಸಕರ ಹಾಗೂ ಸಂಸದರ ನಡುವೆ ಏನು ನಡೆದಿಲ್ಲ ಜನಾಂಗದ ಮಾತು ಬಂದಾಗ ಎಲ್ಲರೂ ಒಟ್ಟಿಗೆ ಇದ್ದೇವೆ,ಇನ್ನು ವಿಧಾನಸಭೆಯಲ್ಲಿ ನಮ್ಮ ಜನಾಂಗಕ್ಕೆ ಪ್ರತಿನಿಧಿಸುವ ಏಕೈಕ ಶಾಸಕ ಪ್ರದೀಪ್ ಈಶ್ವರ್ ಜನಾಂಗದ ಪರವಾಗಿ ಗಟ್ಟಿಯಾಗಿ ನೇರವಾಗಿ ಮಾತಾಡುತ್ತಾರೆ. ಇನ್ನು ರಾಜ್ಯಮಟ್ಟದ ಜನಾಂಗದ ನಾಯಕರಲ್ಲಿ ಯಾವುದೇ ಭಿನ್ನಾಭಿಪ್ರಾಯ ಇಲ್ಲಶಾಸಕರಾದ ಪ್ರದೀಪ್ ಈಶ್ವರ್ ಬಲಿಜ ಜನಾಂಗಕ್ಕೆ 2ಎ ತರಲು ಪ್ರಯತ್ನ ಮಾಡುತ್ತಿದ್ದಾರೆ ಎಂದರು.

ಕಾಂಗ್ರೆಸ್ ಮುಖಂಡ ಡ್ಯಾನ್ಸ್ ಶ್ರೀನಿವಾಸ್ ಮಾತನಾಡಿ, ಚಿಕ್ಕಬಳ್ಳಾಪುರದಲ್ಲಿ ರಾಜ್ಯದಲ್ಲೇ ಅದ್ದೂರಿ ಕೈವಾರ ಜಯಂತಿ ಆಚರಿಸಿ ಬೆಂಗಳೂರಿಗೆ ಹೋಗಿದ್ದ ಶಾಸಕ ಪ್ರದೀಪ್ ಈಶ್ವರ್ ಅವರಿಗೆ ಅಲ್ಲಿ ಸರಿಯಾಗಿ ನಡೆಸಿಕೊಂಡಿಲ್ಲ, ಬೇಕೆಂದು ಗಲಾಟೆಯಾಗುವಂತೆ ಮಾಡಿದ್ದಾರೆ. ಇದರಲ್ಲಿ ಶಾಸಕ ಪ್ರದೀಪ್ ಈಶ್ವರ್ ಅವರ ತಪ್ಪೇನಿಲ್ಲ ಎಂದು ಹೇಳಿದರು. ಸುದ್ದಿಗೋಷ್ಠಿಯಲ್ಲಿ ಕಾಂಗ್ರೇಸ್ ಪ್ರಧಾನ ಕಾರ್ಯದರ್ಶಿ ಪ್ರೆಸ್ ಸೂರಿ, ಜೋಳದ ಕಿಟ್ಟಿ, ಇದ್ದರು.

# ಸರಸ್ವತಮ್ಮ ನಿಧನ

**ಶಿಡ್ಲಘಟ್ಟ:** ತಾಲ್ಲೂಕಿನ ಮೇಲೂರು ಗ್ರಾಮದ ಸರಸ್ವತಮ್ಮ(89) ವಯೋ ಸಹಜ ಕಾರಣದಿಂದ ಮಂಗಳವಾರ ರಾತ್ರಿ ಸ್ವಗೃಹದಲ್ಲಿ ನಿಧನರಾಗಿದ್ದಾರೆ. ಮೇಲೂರು ಗ್ರಾ.ಪಂ.ಮಾಜಿ ಅಧ್ಯಕ್ಷ ಪುತ್ರ ಆರ್.ಎ. ಉಮೇಶ್ ಸೇರಿದಂತೆ ಒಬ್ಬ ಪುತ್ರಿ, ಮೂವರು ಪುತ್ರರು, ಬಂಧು ಬಳಗವನ್ನು ಅಗಲಿದ್ದಾರೆ.




ಅವರ ತೋಟದಲ್ಲಿ ಬುಧವಾರ ಅಂತ್ಯಕ್ರಿಯೆ ಯನ್ನು ನೆರವೇರಿಸಲಾಯಿತು.

ಶಾಸಕರಾದ ಬಿ.ಎನ್.ರವಿ ಕುಮಾರ್, ನಗರಸಭೆ ಅಧ್ಯಕ್ಷ ಎಂ.ವಿ.ವೆಂಕಟಸ್ವಾಮಿ,ವಕ್ಕಲೇರಿ ರಾಮು, ಅಪ್ಪೇಗೌಡನಹಳ್ಳಿ ಲಕ್ಷ್ಮೀನಾರಾಯಣ ರೆಡ್ಡಿ, ಸೀಕಲ್ ಆನಂದಗೌಡ, ಕೆ.ಸುರೇಂದ್ರಗೌಡ, ಸರ್ಕಾರಿ ನೌಕರರ ಸಂಘದ ರಾಜ್ಯ ಕಾರ್ಯದರ್ಶಿ ಕೆ.ಎನ್.ಸುಬ್ಬಾರೆಡ್ಡಿ, ಉದ್ಯಮಿ ಸಂದೀಪ್ ಕೃಷ್ಣನ್, ಗುತ್ತಗೆದಾರ ಐಯ್ಯನ್ ಗೌಡ ಪಾಟೀಲ್, ಪೂಲಕುಂಟಹಳ್ಳಿ ರಘುನಾಥರೆಡ್ಡಿ, ನಂದನವನಂ ಶ್ರೀರಾಮರೆಡ್ಡಿ ಇನ್ನಿತರೆ ಪ್ರಮುಖರು ಅಂತಿಮ ದರ್ಶನ ಪಡೆದರು.

# ಗುಬ್ಬಚ್ಚಿಗಳ ಸಂತಾನ ಕ್ಷೀಣಿಸುತ್ತಿರುವುದು ಆಘಾತಕಾರಿ ವಿಚಾರ

**ಚೌಡಸಂದ್ರ ಈ.ಕರಗಪ್ಪ**

**ಶಿಡ್ಲಘಟ್ಟ:** ಮನೆಗಳು ಕಾಂಕ್ರೀಟ್ ಆದ ಕಾರಣ ಗುಬ್ಬಚ್ಚಿಗಳು ಮನೆಗೆ ಬರುವುದು ಕಡಿಮೆಯಾಗಿದೆ. ಹೀಗಾಗಿ ಗುಬ್ಬಚ್ಚಿಗಳು ಸಂತಾನೋತ್ಪತ್ತಿ ಮಾಡಲು ಬೇಕಾದ ವಾತಾವರಣ ಇಲ್ಲದೆ ಕೆಲವು ವರ್ಷಗಳಲ್ಲಿ 60%ಕ್ಕೂ ಹೆಚ್ಚು ಗುಬ್ಬಚ್ಚಿಗಳು ನಾಶವಾಗುತ್ತಿವೆ ಎಂದು ಅಂಕಿ ಅಂಶಗಳು ಹೇಳುತ್ತಿವೆ ಇದು ಆಘಾತಕಾರಿ ವಿಚಾರ, ಈ ಪರಿಸ್ಥಿತಿಯನ್ನು ಬದಲಾಯಿಸುವ ಉದ್ದೇಶದಿಂದ "2010 ರಲ್ಲಿ ಮಾರ್ಚ್ 20 ರಂದು ವಿಶ್ವ ಗುಬ್ಬಚ್ಚಿ ದಿನವನ್ನಾಗಿ ವಿಶ್ವಸಂಸ್ಥೆ ಅಂಗೀಕರಿಸಿತು."



ಮಾರ್ಚ್– 20 ರಂದು ವಿಶ್ವ ಗುಬ್ಬಚ್ಚಿ ದಿನವನ್ನು ಆಚರಿಸಲಾಗುತ್ತದೆ ಗುಬ್ಬಚ್ಚಿಗಳು ಈಗ ಕ್ಷೀಣಿಸುತ್ತಿರುವ ಪ್ರಭೇದವಾಗಿದೆ ಅವುಗಳನ್ನು ರಕ್ಷಿಸುವ ಉದ್ದೇಶದಿಂದ ವಿಶ್ವ ಗುಬ್ಬಚ್ಚಿ ದಿನವನ್ನು ಆಚರಿಸಲಾಗುತ್ತದೆ.

ಗುಬ್ಬಚ್ಚಿ ಇದು ಒಂದು ಸಣ್ಣ ಜೀವಿಯಾದರೂ ಅದನ್ನು ಬದುಕಿಸುವವರ ಜೀವನ ವಸಂತವಾಗಿಯೇ ಇರುತ್ತದೆ ಗುಬ್ಬಚ್ಚಿಗಳನ್ನು ವೃದ್ಧಿಸಲು ಅವುಗಳನ್ನು ಮನೆಗೆ ಕರೆಯುವುದು ಹೇಗೆ ಗುಬ್ಬಚ್ಚಿಗಳು ತೋಟದಲ್ಲಿರುವ ಪೊದೆಗಳು, ಗಿಡಗಳು, ಮರಗಳಲ್ಲಿ ಗೂಡು ಕಟ್ಟುತ್ತವೆ ನಿಮ್ಮ ಮನೆ ಹತ್ತಿರ ಗುಬ್ಬಚ್ಚಿಗಳು ಬರುತ್ತಿವೆಯೇ ಎಂದು ಗಮನಿಸಿ ಬರುವ ಹಾಗಿದ್ದರೆ ಅವುಗಳಿಗೆ ಆಹಾರ ಇಡಿ ಪುಡಿ ಮಾಡಿದ ಅಕ್ಕಿ, ಸಣ್ಣ ಧಾನ್ಯಗಳನ್ನು ಇಡಬಹುದು.

ಅವು ಬರುವ ದಿಕ್ಕಿನಲ್ಲಿ ಅವುಗಳ ದಾಹ ತಣಿಸಲು ನೀರು ಇಡಿ ನೀರನ್ನು ಆಗಾಗ ಬದಲಾಯಿಸುತ್ತಿರಬೇಕು ಇಲ್ಲದಿದ್ದರೆ ಸೊಳ್ಳೆಗಳು ಹರಡಿ ನೀರಿನಲ್ಲಿ ಪಾಚಿ ಕಟ್ಟು ದಾರಿಯಾಗುತ್ತದೆ. ಒಂದು ಕಾಟನ್ ಬಾಕ್ಸ್ ಹಾಗು ಮರದ ಬಾಕ್ಸ್ ಗಳಿಗೆ ಗುಬ್ಬಚ್ಚಿ ಹೋಗುವಷ್ಟು ತೂತು ಮಾಡಿ ಎತ್ತರದಲ್ಲಿ ತೂಗುಹಾಕಿದ್ದಲ್ಲಿ ಗುಬ್ಬಚ್ಚಿಗಳು ಅದರಲ್ಲಿ ತಂಗಿ ವಾಸಿಸುವ ಸಾಧ್ಯತೆ ಇದೆ.

ಹಿಂದಿನ ಕಾಲದಲ್ಲಿ ಮನೆಗಳಲ್ಲಿ ಕಂಡುಬರುತ್ತಿದ್ದ ಜಗುಲಿ, ಮಾಳಿಗೆ, ತೊಲೆ, ಸೂರುಗಳ ಸಂದುಗಳಲ್ಲಿ, ಗಾಳಿಗಾಗಿ ಬಿಡುತ್ತಿದ್ದ ರಂಧ್ರಗಳಲ್ಲಿ ಗುಬ್ಬಚ್ಚಿಗಳು ಗೂಡು ಕಟ್ಟಿಕೊಂಡು ವಾಸಿಸುತ್ತಿದ್ದವು, ಗುಬ್ಬಚ್ಚಿಗಳು ಈಗ 5 ವರ್ಷಗಳಲ್ಲೇ



ಮಾರ್ಚ್ ಇಪ್ಪತ್ತು ರಂದು ಗುಬ್ಬಿ ದಿನಾಚರಣೆ ಗುಬ್ಬಿಗಳ ಸಂತತಿ ಇಳಿಮುಖವಾಗಲು ಇಂಟರ್ನೆಟ್ ಟವರುಗಳು ಹೊರಸೂಸುವ ಎಲೆಕ್ಟ್ರೋಮ್ಯಾಗ್ನೆಟಿಕ್ ತರಂಗಗಳು ಕಾರಣ ಎಂಬುದು ಬಹುಜನರ ಅಭಿಪ್ರಾಯ ಅದನ್ನು ತಜ್ಞರು ದೃಢೀಕರಿಸಬೇಕು,
ಪ್ರಕೃತಿಯಲ್ಲಿ ಪ್ರಾಣಿ ,ಪಕ್ಷಿ ,ಮರ,ಗಿಡ,ಕೀಟಗಳು ಕೂಡ ಪರಿಸರ ಬೆಳವಣಿಗೆಗೆ ಪೂರಕ ಆದ್ದರಿಂದ ಸರ್ಕಾರಗಳು ಇನ್ನು ಹೆಚ್ಚಿನ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡು ಇಂಟರ್ನೆಟ್ ಟವರ್ ಗಳಿಂದ ಹೊರಸೂಸುವ ತರಂಗಗಳು ಗುಬ್ಬಚ್ಚಿಗಳಿಗೆ ಹಾನಿಯಾಗದ ರೀತಿ ಕ್ರಮ ವಹಿಸಬೇಕು ಎಂದು ಪ್ರಗತಿಪರ ರೈತರಾದ ಮೇಲೂರು ಬಿ.ಎನ್.ಸಚಿನ್ ಹೇಳುತ್ತಾರೆ.

ಸಾಯುತ್ತಿವೆ ಇದಕ್ಕೆ ಕಾರಣ ಮಾನವನ ತಾಂತ್ರಿಕ ಬೆಳವಣಿಗೆ ಎಂದರೆ ತಪ್ಪಾಗಲಾರದು. ಮನೆ ಒಳಗೆ ಗಾಳಿ ಬರದ ಹಾಗೆ ಬಿಗಿಯಾದ ನಗರ ಪ್ರದೇಶದ ಮನೆಗಳಲ್ಲಿ ಗುಬ್ಬಚ್ಚಿಗಳು ಬದುಕಲು ಸಾಧ್ಯವಿಲ್ಲ ಎನ್ನುವುದನ್ನು ಅಲ್ಲಗಳೆಯುವಂತಿಲ್ಲ ,ನಗರ ಪ್ರದೇಶಗಳಲ್ಲಿ ಗಾಜಿನ ಕಿಟಕಿಗಳ ಅರ್ಥ ತಿಳಿಯದೆ ಅದಕ್ಕೆ ಡಿಕ್ಕಿ ಹೊಡೆದು ಸಾಯುವ ದುರಂತವೂ ಇದೆ ಹಳ್ಳಿಗಳಲ್ಲೂ ಮನೆಗಳು ಕಾಂಕ್ರೀಟ್ ಆದ ಕಾರಣ ಗುಬ್ಬಚ್ಚಿಗಳು ಮನೆಗೆ ಬರುವುದು ಕಡಿಮೆಯಾಗಿದೆ.

ಹದ್ದು, ಬೆಕ್ಕು, ಕೋತಿ ಹಾಗು ಹಾವುಗಳಿಗೆ ಎಟುಕದ ಜಾಗ ನೋಡಿ ಗುಬ್ಬಿ ಗೂಡು ಮಾಡಲು ಅನುಕೂಲ ಮಾಡಿಕೊಡಬೇಕು ಅಲ್ಲಿ ಬಿಸಿಲು,ಥಂಡಿ ಹೆಚ್ಚಾಗಿ ತಾಕಬಾರದು ಕಾಟನ್ ಬಾಕ್ಸ್, ಪಿವಿಸಿ ಪೈಪು, ಮರದ ಬಾಕ್ಸು ಮುಂತಾದವನ್ನು ಕೈಸಾಲೆಯ ಪೋರ್ಟಿಕೋ ಛಾವಣಿಗೆ ತೂಗುಬಿಡಬೇಕು ಅಂಗಳದಲ್ಲಿ ಒಂದಿಂಚು ಎತ್ತರದ ತಟ್ಟೆಯಲ್ಲಿ ಪ್ರತಿದಿನ ನೀರಿಡಬೇಕು ಕುಡಿಯುವುದಕ್ಕಿಂತಲೂ ಹೆಚ್ಚಾಗಿ ಗುಬ್ಬಿಗಳು ನೆಲದ ಮೇಲೆ ಮೇಯುವುದನ್ನು ಇಷ್ಟಪಡುತ್ತವೆ ಅಕ್ಕಿ ನುಚ್ಚು, ಅಕ್ಕಿ ಕಾಳು, ತಂಗಳನ್ನ ತಪ್ಪದೆ ಹಾಕುತ್ತಿರಬೇಕು ಪಲಾವು, ಚಿತ್ರಾನ್ನಗಳನ್ನೂ ಅವು ಇಷ್ಟಪಟ್ಟು ತಿನ್ನುತ್ತವೆ ಇವೆಲ್ಲಾ ಕ್ರಮಗಳನ್ನು ಅನುಸರಿಸಿದರೆ ಈಗಲೂ ನಾವು ಗುಬ್ಬಿಗಳ ಸಂತತಿ ಹೆಚ್ಚುವಂತೆ ಮಾಡಬಹುದು.

**ಗುಬ್ಬಚ್ಚಿಗಳು ಮನೆಗೆ ಬರುವುದು ಶುಭ ಶಕುನ ,ಒಳ್ಳೆಯದಾಗುತ್ತದೆ ಹಾಗು ಗುಬ್ಬಚ್ಚಿಗಳು ಬಂದು ತಂಗುವ ಮನೆಯಲ್ಲಿ ಸಂತಾನಾಭಿವೃದ್ಧಿಯಾಗುತ್ತದೆ ಎಂಬ ನಂಬಿಕೆಯೂ ಇತ್ತು ಕೆಲವು ನಂಬಿಕೆಗಳು ಒಳ್ಳೆಯದನ್ನು ಮಾಡುತ್ತವೆ ಎಂದು ನಮ್ಮ ಹಿರಿಯರು ಭಾವಿಸಿದ್ದರು ಎಂದು ವಿಜಯಪುರದ ಸುದರ್ಶನ್ ತಿಳಿಸಿದರು.**

**ಹೆಂಚಿನಮನೆ, ಗುಡಿಸಲು, ಮಣ್ಣಿನಮಾಳಿಗೆ ಮನೆಗಳ ಜಾಗಕ್ಕೆ ಆರ್‌ಸಿಸಿ ಕಟ್ಟಡಗಳು ಬಂದಮೇಲೆ ಗುಬ್ಬಿಗಳಿಗೆ ಗೂಡು ಕಟ್ಟಲು ಸಮಸ್ಯೆಯಾಯಿತು ಧಾನ್ಯಗಳ ಒಕ್ಕಣೆ ಕಣಗಳಲ್ಲಿ ಮನೆಯವರು ಮಾಡುವುದು ನಿಂತಮೇಲೆ ಅವುಗಳ ಆಹಾರಕ್ಕೆ ಕೊರತೆ ಎದುರಾಯಿತು,ವ್ಯವಸಾಯ ಕ್ಷೇತ್ರದಲ್ಲಿ ಕೀಟನಾಶಕಗಳ ಬಳಕೆ ಗುಬ್ಬಿಗಳ ಪಾಲಿಗೆ ಹೆಚ್ಚಿನ ಮಾರಕವಾಗಿ ಪರಿಣಮಿಸಿತು ಎಂದು ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು ಮಾಜಿ ಅಧ್ಯಕ್ಷ ರಾದ ಅಪ್ಪೇಗೌಡನಹಳ್ಳಿ ಎ.ಎಂ.ತ್ಯಾಗರಾಜ್ ವಿವರಿಸಿದರು.**

# ತಮಿಳುನಾಡಿನ ಕಡೆಗೆ ಕಪ್ಪು ಬಣ್ಣದ ನಕಲಿ ಹಣ ಸಾಗಾಟ

ಹನೂರು: ತಮಿಳುನಾಡಿನ ಕಡೆಗೆ ಕಪ್ಪು ಬಣ್ಣದ ನಕಲಿ ಹಣವನ್ನು ಕಾರಿನಲ್ಲಿ ಸಾಗಿಸುತ್ತಿದ್ದ ವ್ಯಕ್ತಿಯೊಬ್ಬನನ್ನು ಮಲೆ ಮಹದೇಶ್ವರ ಬೆಟ್ಟ ಪೊಲೀಸ್ ಠಾಣೆ ಅಧಿಕಾರಿಗಳು ಬಂಧಿಸಿದ್ದು ಮತ್ತೋರ್ವ ಪರಾರಿಯಾಗಿರುವ ಘಟನೆ ನಡೆದಿದೆ.

ಹನೂರು ತಾಲೂಕಿನ ದಂಟಳ್ಳಿ ಗ್ರಾಮದ ಶೇಖರ ಬಿನ್ ಲೇ.ಮಾದಪ್ಪ (40ವರ್ಷ) ಎಂಬ ಆರೋಪಿಯನ್ನು ಬಂಧಿಸಿದ್ದು. ಮತ್ತೋರ್ವ ಸಂತೆಮರಹಳ್ಳಿ ಗ್ರಾಮದ ಸುಕೇಶ ಎಂಬುವನು ಪರಾರಿಯಾಗಿದ್ದಾನೆ.

ಮಲೆ ಮಹದೇಶ್ವರ ಬೆಟ್ಟ ಪೊಲೀಸ್ ಠಾಣೆ ಪಿ.ಎಸ್.ಐ ರವಿ ಅವರ ನೇತೃತ್ವದ ತಂಡ ಮಹದೇಶ್ವರ ಬೆಟ್ಟದ ಅನೆ ತಲೆದಿಂಬು ಹತ್ತಿರ ವಾಹನಗಳನ್ನು ತಪಾಸಣೆ ಮಾಡುವಾಗ ಕೆ.ಎ–09 ಎಂ.ಕೆ–6849 ಬಿಳಿ ಬಣ್ಣದ ಕಾರನ್ನು ಸುತ್ತುವರಿದು ತಪಾಸಣೆ ಮಾಡಿದ್ದಾರೆ ಈ ವೇಳೆ ಶೇಖರ್ ಎಂಬಾತ ಸಿಕ್ಕಿಬಿದ್ದಿದ್ದು. ಸುಕೇಶ ಎಂಬವನು ಕಾರಿನಿಂದ ಇಳಿದು ಪರಾರಿಯಾಗಿದ್ದಾನೆ.

ನಂತರ ಕಾರನ್ನು ತಪಾಸಣೆ ನಡೆಸಿದಾಗ ಕಾರಿನ ಡಿಕ್ಕಿ ಒಳಗೆ ಒಂದು ಬ್ಯಾಗಿನಲ್ಲಿ 500 ರೂಪಾಯಿ ನೋಟುಗಳಿಗೆ ಹೋಲುವಂತೆ ಕಪ್ಪು ಬಣ್ಣದ ಪೇಪರ್ ಕಟ್ಟುಗಳಿದ್ದು ಒಟ್ಟು 370 ಕಟ್ಟುಗಳು ಇರುವುದು ಪತ್ತೆಯಾಗಿದೆ.

ಒಂದು ಕಟ್ಟಿನಲ್ಲಿ 100 ಹಾಳೆಗಳಿರುತ್ತವೆ, ಎರಡು ಖಾಲಿ ಬ್ಯಾಗ್‌ಗಳಿರುತ್ತವೆ, ನೋಟುಗಳು ಏಣಿಸುವ ಮಿಷಿನ್ ಇದ್ದು FOLLA ಕಂಪನಿಯ ಮಿಷನ್ ಸಿಕ್ಕಿದೆ. ಇದರಲ್ಲಿ 500 ರೂ ಬೆಲೆಯ ನೋಟುಗಳಿದ್ದು 1,11,500 ರೂಪಾಯಿ ಹಣ ದೊರೆತಿದೆ.

ಬಂಧಿತ ಆರೋಪಿ ಶೇಖರ್ ಎಂಬಾತನನ್ನು ವಿಚಾರಣೆಗೆ ಒಳಪಡಿಸಿದಾಗ ಪೇಪರ್‌ಗಳಿಂದ ನಾವುಗಳು ಕಪ್ಪು ಬಣ್ಣದ ಪೇರಪ್ ಕಟ್ಟಿಗೆ ಒಂದು ಎರಡು, ಅಸಲಿ ನೋಟುಗಳಿಗೆ ಕಪ್ಪು ಬಣ್ಣ ಬಳಿದು ಕಟ್ಟಿಗೆ ಸೇರಿಸಿ ಗ್ರಾಹಕರು ಬಂದಾಗ ಕಟ್ಟು ಪೂರ್ತಿ ಅಸಲಿ ನೋಟುಗಳೆಂದು ನಂಬಿಸುತ್ತೇವೆ.

ನಾವು ಸೇರಿಸಿದ ನೋಟುಗಳನ್ನು ಎಳೆದು ಬಣ್ಣ ತೆಗೆದು ಚಾಲಾವಣೆ ಮಾಡಲು ನೀಡಿ ಅವರಿಗೆ ನಂಬಿಕೆ ಬರುವಂತೆಮಾಡಿ ಕಪ್ಪು ಬಣ್ಣದ ಕಟ್ಟು ಅಸಲಿ ನೋಟುಗಳ ಕಂತೆ ಎಂದು ನಂಬಿಸಿ ಹಣ ಡಬ್ಲಿಂಗ್ ಮಾಡಿ ಗ್ರಾಹಕರಿಂದ ಅಸಲಿ ನೋಟುಗಳನ್ನು ವಸೂಲಿಮಾಡಿ ನಕಲಿ ನೋಟುಗಳೆಂದು ಕಪ್ಪು ಬಣ್ಣದ ಪೇಪರ್‌ಗಳನ್ನು ನೀಡಿ ಮೋಸಮಾಡುತ್ತೇವೆ, ಈ ದಿನ ಸಹ ತಮಿಳುನಾಡಿಗ ಹೋಗಿ ಅಲ್ಲಿ ನಕಲಿ ನೋಟುಗಳನ್ನು ನೀಡಿ ಅಸಲಿ ನೋಟುಗಳನ್ನು ಪಡೆಯಲು ತೆರಳುತಿದ್ದೇವು. ಸದರಿ ಕಪ್ಪು ಬಣ್ಣದ ಪೇಪರ್‌ಗಳನ್ನು ನನಗೆ ಮಾದೇಶ ಎಂಬುವನು ತಂದು ಕೊಟ್ಟಿದ್ದು ಎಂದು ತಿಳಿಸಿದ್ದಾನೆ.

ಪ್ರಕರಣ ಸಂಬಂಧ ಕಾರು ಮತ್ತು ನಕಲಿ ನೋಟುಗಳು ಹಾಗೂ ಏಣಿಸುವ ಈಓಐಖಂ ಕಂಪನಿಯ ಮಿಷನ್, ಹಾಗೂ 1,11,500 ರೂಪಾಯಿ ನಗದು ಹಣ ಮತ್ತು ಮೂರು ಖಾಲಿ ಬ್ಲಾಗ್‌ಗಳನ್ನು ವಶಕ್ಕೆ ಪಡೆದುಕೊಂಡಿದ್ದು. ಮಲೆ ಮಹದೇಶ್ವರ ಬೆಟ್ಟ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು ಮುಂದಿನ ಕ್ರಮ ಕೈಗೊಳ್ಳಲಾಗಿದೆ.

# ನಾಡಿನೆಲ್ಲೆಡೆ ರಂಗ ಸಂಸ್ಕೃತಿ ಪುನರುತ್ಥಾನಗೊಳ್ಳಬೇಕಿದೆ



**ಚಿಕ್ಕಬಳ್ಳಾಪುರ:** ನಾಡಿನೆಲ್ಲೆಡೆ ರಂಗ ಸಂಸ್ಕೃತಿ ಪುನರುತ್ಥಾನಗೊಳ್ಳಬೇಕಿದೆ ಎಂದು ಕರ್ನಾಟಕ ಜಾನಪದ ಅಕಾಡೆಮಿ ಅಧ್ಯಕ್ಷ ಗೊಲ್ಲಹಳ್ಳಿ ಶಿವಪ್ರಸಾದ್ ತಿಳಿಸಿದ್ದಾರೆ.

ಸಿದ್ದಾರ್ಥ ವೈರಾಗ್ಯಕ್ಕೆ ಹೋಗುವ ಸಂದರ್ಭವನ್ನು ಕುವೆಂಪು ಮಹಾರಾತ್ರಿ ಎಂದು ಕರೆದಿದ್ದಾರೆ.ಈ ನಾಟಕವನ್ನು ವೀಕ್ಷಣೆ ಮಾಡಿ ಅರ್ಥ ಮಾಡಿಕೊಳ್ಳಿ ಎಂದರು.

ಅವರು ಮಹಿಳಾ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಸಂಸ್ಕೃತಿಕ ನಾಟಕವನ್ನು ಉದ್ಘಾಟಿಸಿ ಮಾತನಾಡಿದ ಅವರು, ರಂಗ ಸಂಸ್ಕೃತಿ ಪುನರುತ್ಥಾನ ಕೊಳ್ಳಬೇಕು.ಮಾಯಾಲೋಕ ನಮ್ಮದಲ್ಲ. ಜಾನಪದ ಕಥೆಗಳು, ಕೇಳಿಕೆಯಂತಹ ಪರಂಪರೆ ನಮ್ಮದಾಗಬೇಕು.ಸತ್ಯದ ಕತ್ತು ಹಿಸುಕಿ ಕೊಲ್ಲುವ ಸಂದರ್ಭದಲ್ಲಿ ರಂಗಪ್ರಯೋಗ ಆಗುತ್ತಿರುವುದು ಶ್ಲಾಘನೀಯ. ವಿದ್ಯಾರ್ಥಿಗಳೇ ನಾಳೆಗಳು ನಿಮ್ಮ ಮೇಲಿದೆ. ವರ್ಷಕ್ಕೊಮ್ಮೆಯಾದರೂ ಮನಸ್ಸುಗಳನ್ನು ತೊಳೆದುಕೊಳ್ಳಿ ಎಂದರು.


ಇಂದಿರಾ ಕೃಷ್ಣಪ್ಪ ಮಾತನಾಡಿ ನಾಲ್ಕು ದಿನಗಳ ರಂಗೋತ್ಸವ ಯಶಸ್ವಿಯಾಗಲಿ.ಬಹುಮುಖ ಪ್ರತಿಭೆಯ ಗ.ನ.ಅಶ್ವತ್ಥ ಅವರ ನಿರ್ದೇಶನದ ಮಹಾರಾತ್ರಿ ಯಶಸ್ವಿಯಾಗಲಿ ಎಂದು ಹಾರೈಸಿದರು. ಶೇಕ್ಸ್ ಪಿಯರ್ ನಾಟಕ ರಂಗದ ಶ್ರೇಷ್ಠ ನಾಟಕಕಾರ.ಗ್ರಾಮೀಣ ಪ್ರದೇಶದಲ್ಲಿ ಸಣ್ಣಾಟ ದೊಡ್ಡಾಟ ಇಂದಿಗೂ ಜೀವಂತವಾಗಿದೆ. ಮಹಿಳಾ ಕಾಲೇಜಿನಲ್ಲಿ ನಾಟಕದ ಪರಂಪರೆ ಪ್ರಾರಂಭವಾಗಿರುವುದು ಸಂತೋಷ.ಪ್ರೊ.ಬಿ.ಕೃಷ್ಣಪ್ಪ ಟ್ರಸ್ಟ್ ನಾಟಕ ಪರಂಪರೆಗೆ ಪ್ರೋತ್ಸಾಹ ನೀಡುತ್ತಿದೆ ಎಂದರು.

ಕೋಡಿ ರಂಗಪ್ಪ ಮಾತನಾಡಿ ನಾಟಕ ಬಹುಜನ ಸಮಾರಾಧನೆ ಎಂದಿದ್ದಾರೆ.ಸತ್ಯ ಹರೀಶ್ಚಂದ್ರನ ನಾಟಕ ನೋಡಿ ಗಾಂಧೀಜಿ ಬದಲಾದರು.ಶತಮಾನಗಳ ಕಾಲ ಬುದ್ಧನನ್ನು ಪುಸ್ತಕಗಳಲ್ಲಿ ಬಚ್ಚಿಟ್ಟಿದ್ದರು.ಅಂಬೇಡ್ಕರ್ ಬಂದ ಮೇಲೆ ಜಗತ್ತಿಗೆ ಹೆಚ್ಚು ಪರಿಚಿತ ಆದರು.ಮಹಿಳಾ ಕಾಲೇಜು ವಿದ್ಯಾರ್ಥಿಗಳು ಸಹನಾ ಶೀಲ ರಾಗಬೇಕು.ಆಗ ಮಾತ್ರ ಸಾಧಕರಾಗಬಹುದು.ಬುದ್ಧನನ್ನು ಗ್ರಾಮೀಣ ಪ್ರದೇಶಕ್ಕೆ ಪರಿಚಯಿಸುವ ಕೆಲಸ ನಿರ್ದೇಶಕ ಗ.ನ. ಮಾಡಿದ್ದಾರೆ.

ಬುದ್ಧ ಇಂದು ತುಂಬಾ ಅಗತ್ಯವಿದೆ.8ರ ರಾತ್ರಿ ಕನ್ನಡ ಭವನದಲ್ಲಿ ಈ ನಾಟಕ ಪ್ರದರ್ಶನ ಆಗಲಿದೆ ಎಂದರು. ಹೆಣ್ಣು ಮಕ್ಕಳ ಸಬಲೀಕರಣ ಆದರೆ ದೇಶದ ಅಭಿವೃದ್ಧಿ ಆಗಲಿದೆ ಎಂದರು.

ಜಾನಪದ ಅಕಾಡೆಮಿ ಅಧ್ಯಕ್ಷ ಗೊಲ್ಲಹಳ್ಳಿ ಶಿವಪ್ರಸಾದ್, ಇಂದಿರಾ ಕೃಷ್ಣಪ್ಪ,ಗ.ನ. ಅಶ್ವತ್ಥ್,ಗೌತಮ ಬುದ್ಧ ಪೌಂಡೇಶನ್ ಗಂಗರಾಜು,ಕೋಡಿರಂಗಪ್ಪ,ಪದ್ಮಕುಮಾರಿ.. ರಾಮಕೃಷ್ಣ, ಸುಧಾವೆಂಕಟೇಶ್,ಚಾಂದ್ ಪಾಷ. ಡಾ.ಶಂಕರ್, ಪ್ರಾಂಶುಪಾಲ ಜಿ.ಡಿ.ಚಂದ್ರಯ್ಯ ಮತ್ತು ಇತರರು ಉಪಸ್ಥಿತರಿದ್ದರು.

# ನಗರಾಭಿವೃದ್ಧಿ ಪ್ರಾಧಿಕಾರದ ಸದಸ್ಯರ ಅಭಿನಂದಿಸಿದ ಉಮೇಶ್



**ಚಿಕ್ಕಬಳ್ಳಾಪುರ:** ಭಾರತೀಯ ರಾಷ್ಟ್ರೀಯ ಮಜ್ದೂರ್ ಕಾಂಗ್ರೆಸ್ ನ ಕರ್ನಾಟಕ ರಾಜ್ಯ ಕಾರ್ಯಾಧ್ಯಕ್ಷ ಉಮೇಶ್.ಜಿ ಮತನಾಡಿ ಚಿಕ್ಕಬಳ್ಳಾಪುರದ ಎಲ್ಲರ ನೆಚ್ಚಿನ ಶಾಸಕರಾದ ಪ್ರದೀಪ್ ಈಶ್ವರ್ ಅವರು ದಲಿತರ, ಹಿಂದುಳಿದ, ಅಲ್ಪಸಂಖ್ಯಾತರ ಹಾಗೂ ಎಲ್ಲ ಸಮುದಾಯದ ಪರ ನಿಂತಿರುವುದಕ್ಕೆ ಇದೊಂದು ಉದಾಹರಣೆ ಎಂದು ಹೇಳಿದರು.

ಅವರು ಚಿಕ್ಕಬಳ್ಳಾಪುರ ನಗರ ಯೋಜನಾ ಪ್ರಾಧಿಕಾರಕ್ಕೆ ನೂತನವಾಗಿ ನಾಮ ನಿರ್ದೇಶನವಾದ ಸದ್ಯಸರಿಗೆ ಅಭಿನಂದಿಸಿ ಮಾತನಾಡಿದರು.

ನಗರ ಯೋಜನಾ ಪ್ರಾಧಿಕಾರದ ನೂತನ ಸದಸ್ಯರಾದ ಪೆದ್ದಣ್ಣ, ವಿ.ಸುರೇಶ್, ನಾರಾಯಣಮ್ಮ ಮತ್ತು ಹಮೀಮ್ ರವರು ಕಾಂಗ್ರೆಸ್ ಪಕ್ಷದಲ್ಲಿ ಹಲವಾರು ವರ್ಷಗಳಿಂದ ತನ್ನದೇ ಆದ ಸೇವೆಗಳನ್ನು ಮಾಡುತ್ತಾ,ಪಕ್ಷಕ್ಕಾಗಿ ಹಗಲಿರುಳು ದುಡಿದ್ದಾರೆ ಇವರನ್ನು ಪಕ್ಷವು ಗುರುತಿಸಿ ಸೂಕ್ತ ಸ್ಥಾನ ನೀಡಲಾಗಿದೆ ಎಂದು ತಿಳಿಸಿದರು.

ಚಿಕ್ಕಬಳ್ಳಾಪುರದ ಉಸ್ತುವಾರಿ ಸಚಿವರಾದ ಎಂ.ಸಿ.ಸುಧಾಕರ್, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಕೇಶವ ರೆಡ್ಡಿ ಹಾಗೂ ಎಲ್ಲಾ ಕಾಂಗ್ರೆಸ್ ಮುಖಂಡರಿಗೆ ಧನ್ಯವಾದಗಳು. ಹಾಗೂ ವಿಶೇಷವಾಗಿ ಶಾಸಕ ಪ್ರದೀಪ್ ಈಶ್ವರ್ ರವರಿಗೆ ಅಬಿನಂದನೆಗಳು ಎಂದು ಉಮೇಶ್.ಜಿ ಅಬಿಪ್ರಾಯ ಪಟ್ಟರು.

ಈ ಸಂಧರ್ಭದಲ್ಲಿ ಪರ್ಲ್ ಫೌಂಡೇಶನ್ ಅಧ್ಯಕ್ಷರಾದ ರಜನೇಶ್ ಆರ್ಯನ್,ಜಾಲಾ ಹೋಬಳಿ ಅಧ್ಯಕ್ಷ ಮಂಜುನಾಥ, ವೆಂಕಟೇಶ್, ಗ್ರೀನ್ ಆಪಲ್ ಅಕಾಡೆಮಿ ಸಂಸ್ಥಾಪಕ ಮಂಜುನಾಥ, ಸಾದಿಕ್ ಮತ್ತು ಇತರರು ಉಪಸ್ಥಿತರಿದ್ದರು.

# ಅನಿರ್ದಿಷ್ಟ ಧರಣಿ ಕೈ ಬಿಡುವುದಿಲ್ಲ: ಶ್ರೀನಿವಾಸ್




**ಶಿಡ್ಲಘಟ್ಟ:** ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಜೀತ ವಿಮುಕ್ತರು ಜೀತ ವಿಮುಕ್ತ ಕರ್ನಾಟಕ ಸಂಘಟನೆಯ ನೇತೃತ್ವದಲ್ಲಿ ತಾಲ್ಲೂಕಿನ ದಿಬ್ಬೂರಹಳ್ಳಿಯಿಂದ ನಗರದ ತಾಲೂಕು ಕಚೇರಿಯವರೆಗೂ ಪಾದಯಾತ್ರೆ ನಡೆಸಿದರು.

ತಾಲ್ಲೂಕು ಕಚೇರಿ ಆವರಣದಲ್ಲಿ ಅರ್ನಿಷ್ಟ ಧರಣಿಯನ್ನು ಆರಂಭಿಸಿದ್ದಾರೆ. ತಾಲ್ಲೂಕು ಕಚೇರಿ ಆವರಣದಲ್ಲಿ ನಡೆಯುತ್ತಿರುವ ಜೀತ ವಿಮುಕ್ತರ ಅರ್ನಿಷ್ಟ ಧರಣಿಯನ್ನು ಉದ್ದೇಶಿಸಿ ಜೀತ ವಿಮುಕ್ತ ಕರ್ನಾಟಕದ ತಾಲ್ಲೂಕು ಸಂಚಾಲಕ ಪಿ.ಶ್ರೀನಿವಾಸ್ ಮಾತನಾಡಿ, ಜೀತ ವಿಮುಕ್ತರಿಗೆ ಭೂಮಿ, ವಸತಿ ಮತ್ತು ಸಮಗ್ರ ಪುನರ್ವಸತಿ ಸವಲತ್ತುಗಳನ್ನು ಕಲ್ಪಿಸಲು ಒತ್ತಾಯಿಸಿ ಅರ್ನಿಷ್ಟ ಧರಣಿಯನ್ನು ಆರಂಭಿಸಿದ್ದೇವೆ ಎಂದರು.

ಜೀತದಿಂದ ಬಿಡುಗಡೆ ಮಾಡಿ ಆದೇಶಿಸಿರುವ ಉಪ ವಿಭಾಗಾದಿಕಾರಿಗಳೆ ಸ್ಥಳಕ್ಕೆ ಬಂದು ನಮ್ಮ ಹಕ್ಕೊತ್ತಾಯವನ್ನು ಕೇಳಿಸಿಕೊಂಡು ಪರಿಹಾರ ನೀಡಬೇಕು, ಅದುವರೆಗೂ ನಮ್ಮ ಹೋರಾಟವನ್ನು ಕೈ ಬಿಡುವ ಪ್ರಶ್ನೆಯೆ ಇಲ್ಲ ಎಂದು ಹೇಳಿದರು.

ರಾಜ್ಯದಲ್ಲಿ 7500 ಜನ ಜೀತದಿಂದ ಬಿಡಗಡೆಗೊಂಡಿದ್ದಾರೆ ಆದರೆ ಸರ್ಕಾರವು ಇವರಿಗೆ ಇದುವರೆಗೆ ಯಾವುದೇ ರೀತಿಯ ಪುನರ್ವಸತಿ ಕಲ್ಪಿಸಿಲ್ಲವೆಂದು ದೂರಿದರು.

ತಾಲ್ಲೂಕಿನಲ್ಲಿ ಇದವರೆಗೂ 432 ಮಂದಿಯನ್ನು ಸರಕಾರವೇ ಜೀತದಿಂದ ಬಿಡುಗಡೆ ಮಾಡಿದೆ ಇದುವರೆಗೂ ಪಾರ್ಕಸ್ ನ ಮಾಶಾಸನ ಹೊರತುಪಡಿಸಿ ಕಾನೂನು ಪ್ರಕಾರ ಯಾವುದೇ ಸೌಲಭ್ಯ ಮತ್ತು ಪುನರ್ವಸತಿ ಕಲ್ಪಿಸಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಜೀತದಿಂದ ವಿಮುಕ್ತರಾದವರಿಗೆ ಕಾನೂನಿನಡಿ ಯಾವುದೆ ಸವಲತ್ತುಗಳನ್ನು ಒದಗಿಸದ ಕಾರಣ ಮತ್ತೆ ಅವರು ಜೀತಕ್ಕೆ ಹೋಗುವಂತಿಲ್ಲ,ಸ್ವಾಭಿಮಾನದ ಬದುಕು ನಡೆಸಲೂ ಆಗದೆ ಅತಂತ್ರ ಸ್ಥಿತಿಯಲ್ಲಿಪರದಾಡು ವಂತಾಗಿದೆ. ಇದಕ್ಕೆ ಸರಕಾರ ಮತ್ತು ಜಿಲ್ಲಾಡಳಿತವು ಜೀತ ವಿಮುಕ್ತರ ಬಗ್ಗೆ ತೋರುವ ಅಸಡ್ಡೆ ಕಾರಣ ಎಂದು ದೂರಿದರು. ಜೀತಕ್ಕೆ ಇಟ್ಟುಕೊಂಡವರ ವಿರುದ್ಧ ಕೇಸು ದಾಖಲಿಸಿ ಎಫ್‌ಐಆರ್ ದಾಖಲಿಸುವ ಕಾನೂನನ್ನು ಕೈ ಬಿಡಬೇಕು, ಜೀತದಿಂದ ಬಿಡುಗಡೆ ಆಗಿರುವವರಿಗೆ ಕನಿಷ್ಠ 2 ಎಕರೆ ಜಮೀನು ನೀಡಬೇಕು ,ಈ ಎಲ್ಲ ಬೇಡಿಕೆಗಳನ್ನು ಈಡೇರಿಸುವವರೆಗೂ ಪ್ರತಿಭಟನೆ ನಡೆಸುವುದಾಗಿ ಎಚ್ಚರಿಸಿದರು.

ಇದೇ ವೇಳೆ ಸ್ಥಳಕ್ಕೆ ತಹಶಿಲ್ದಾರ್ ಬಿ.ಎನ್.ಸ್ವಾಮಿ ಹಾಗು ಉಪ ನೊಂದಣಾಧಿಕಾರಿ ಅಶ್ವಿನ್ ಭೇಟಿ ನೀಡಿ ಜೀತ ವಿಮುಕ್ತರ ಸಮಸ್ಯೆಗಳನ್ನು ಪರಿಶೀಲಿಸಿ ಮನವಿ ಸ್ವೀಕರಿಸಿದರು.

ತಾಲ್ಲೂಕು ಕಚೇರಿ ಆವರಣದಲ್ಲಿ ಅಂಬೇಡ್ಕರ್ ಭಾವಚಿತ್ರವಿಟ್ಟು ಅರ್ನಿಷ್ಟಾವಧಿ ಧರಣಿಯನ್ನು ಮುಂದುವರೆಸಿದ್ದಾರೆ.

ಈ ಸಂದರ್ಭದಲ್ಲಿ ಜೀವಿಕ ಒಕ್ಕೂಟದ ಅಧ್ಯಕ್ಷ ರಾಜ್ಯ ಗೌರವಾಧ್ಯಕ್ಷ ಗೊಲ್ಲಹಳ್ಳಿ ನರಸಿಂಹಪ್ಪ, ತಾಲ್ಲೂಕು ಅಧ್ಯಕ್ಷ ಮುನಿಯಪ್ಪ, ಮುನಿಕೃಷ್ಣಪ್ಪ ಮುನಿರಾಜು,ಆಂಜಿನಪ್ಪ, ಗಂಗಪ್ಪ, ಅನಿಲ್ ಕುಮಾರ್, ನಾರಾಯಣಪ್ಪ, ಕೃಷ್ಣಪ್ಪ, ಮತ್ತೀತರರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

# ಪ್ರತಿ ಮತಗಟ್ಟೆಗೆ ಬಿಎಲ್‌ಎಗಳನ್ನು ನೇಮಿಸಿ

**ತುಮಕೂರು:** ಜಿಲ್ಲೆಯ 11 ವಿಧಾನಸಭಾ ಕ್ಷೇತ್ರಗಳಲ್ಲಿ 2627 ಮತಗಟ್ಟೆಗಳಿದ್ದು, ಪ್ರತಿ ಮತಗಟ್ಟೆಗೂ ಮತಗಟ್ಟೆ ಮಟ್ಟದ ಏಜೆಂಟ್(ಬಿಎಲ್‌ಎ)ಗಳನ್ನು ನೇಮಿಸಲು ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಅಪರ ಜಿಲ್ಲಾಧಿಕಾರಿ ಹಾಗೂ ಅಪರ ಜಿಲ್ಲಾ ಚುನಾವಣಾಧಿಕಾರಿ ಡಾ: ಎನ್. ತಿಪ್ಪೇಸ್ವಾಮಿ ರಾಜಕೀಯ ಪಕ್ಷಗಳ ಪ್ರತಿನಿಧಿಗಳಿಗೆ ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ನ್ಯಾಯಾಲಯ ಸಭಾಂಗಣದಲ್ಲಿ ಬುಧವಾರ ಮತದಾರರ ಪಟ್ಟಿ ತಯಾರಿಕೆ, ಬಿಎಲ್‌ಒಗಳ ನೇಮಕಾತಿ ಹಾಗೂ ಇತರೆ ಚುನಾವಣಾ ವಿಷಯಗಳ ಕುರಿತು ನೋಂದಾಯಿತ/ಮಾನ್ಯತೆ ಪಡೆದ ರಾಜಕೀಯ ಪಕ್ಷಗಳ ಪ್ರತಿನಿಧಿಗಳೊಂದಿಗೆ ನಡೆದ ಸಭೆಯಲ್ಲಿ ಮಾತನಾಡಿದ ಅವರು, ಚುನಾವಣಾ ಆಯೋಗದ ನಿರ್ದೇಶನದಂತೆ ಮತದಾರರ ಪಟ್ಟಿ ತಯಾರಿಕೆ ಪ್ರಕ್ರಿಯೆಯನ್ನು ಸದೃಢಪಡಿಸುವ ಹಾಗೂ ಯಾವುದೇ ಚುನಾವಣೆಗಳನ್ನು ಪಾರದರ್ಶಕವಾಗಿ ನಡೆಸುವ ಸಂಬಂಧ ಈ ಸಭೆ ನಡೆಸಲಾಗುತ್ತಿದೆ ಎಂದು ತಿಳಿಸಿದರು.

ಚುನಾವಣೆಗಳಿಗೆ ಸಂಬಂಧಿಸಿದಂತೆಮತದಾರರ ಪಟ್ಟಿ ಹಾಗೂ ಇತರೆ ಚುನಾವಣಾ ಮಾಹಿತಿಗಳನ್ನು ಭಾರತ ಚುನಾವಣಾ ಆಯೋಗದ ವೆಬ್ ಸೈಟ್, ಮುಖ್ಯ ಚುನಾವಣಾಧಿಕಾರಿಗಳ ಕಚೇರಿ ವೆಬ್‌ಸೈಟ್ ಹಾಗೂ ಜಿಲ್ಲಾ ಚುನಾವಣಾಧಿಕಾರಿಗಳ ವೆಬ್‌ಸೈಟ್‌ನಲ್ಲಿ ಕಾಲಕಾಲಕ್ಕೆ ಪ್ರಕಟಿಸಲಾಗುತ್ತಿದ್ದು, ರಾಜಕೀಯ ಪಕ್ಷಗಳು ಸದರಿ ವೆಬ್‌ಸೈಟ್‌ಗೆ ಭೇಟಿ ನೀಡಿ ಅಗತ್ಯ ಮಾಹಿತಿಯನ್ನು ಪಡೆಯಬಹುದಾಗಿದೆ. ಜಿಲ್ಲೆಯಲ್ಲಿ ಅಂತಿಮ ಮತದಾರರ ಪಟ್ಟಿಯಂತೆ ಒಟ್ಟು 1140384 ಪುರುಷರು, 1165030 ಮಹಿಳೆಯರು ಹಾಗೂ 88 ಇತರೆ ಸೇರಿ ಒಟ್ಟು 2305502 ಮತದಾರರಿದ್ದಾರೆ. ಜಿಲ್ಲೆಯಲ್ಲಿರುವ 2627 ಮತಗಟ್ಟೆಗಳಿಗೆ 276 ಮತಗಟ್ಟೆ ಮಟ್ಟದ ಅಧಿಕಾರಿಗಳ ಮೇಲ್ವಿಚಾರಕರನ್ನು ನೇಮಿಸಲಾಗಿದೆ ಎಂದು ಮಾಹಿತಿ ನೀಡಿದರು.

ಮತದಾರರ ಗುರುತಿನ ಚೀಟಿಗಾಗಿ ಅರ್ಹರಿಂದ ಸ್ವೀಕೃತವಾದ ಅರ್ಜಿಗಳನ್ನು ನಿಗಧಿತ ಅವಧಿಯೊಳಗೆ ವಿಲೇವಾರಿ ಮಾಡಲಾಗುತ್ತಿದ್ದು, ಗುರುತಿನ ಚೀಟಿಗಳನ್ನು ಅಂಚೆ ಮೂಲಕ ಮತದಾರರಿಗೆ ರವಾನಿಸಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆ. ಮತದಾರರ ಪಟ್ಟಿ, ಎಪಿಕ್ ಕಾರ್ಡ್, ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆ, ತಿದ್ದುಪಡಿ, ತೆಗೆದುಹಾಕುವುದು, ವರ್ಗಾವಣೆಗಾಗಿ ಅಗತ್ಯ ದಾಖಲೆಗಳೊಂದಿಗೆ ನಿಗಧಿತ ನಮೂನೆಯಲ್ಲಿ ನಿರಂತರವಾಗಿ ಅರ್ಜಿ ಸಲ್ಲಿಸಬಹುದಾಗಿದೆ. ಮತದಾರರ ಪಟ್ಟಿ ನೋಂದಣಿಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಗಾಗಿ ಸಹಾಯವಾಣಿ 1950ಯನ್ನು ಸಂಪರ್ಕಿಸಬಹುದಾಗಿದೆ ಎಂದು ವಿವರಿಸಿದರು.

**ಬಿಎಲ್‌ಒಗಳಿಗೆ ನಿರ್ದಿಷ್ಟ ಸ್ಥಳ ನಿಗಧಿಪಡಿಸಲು ಸಲಹೆ:** ಮತಗಟ್ಟೆ ಮಟ್ಟದ ಅಧಿಕಾರಿ (ಬಿಎಲ್‌ಒ)ಗಳಿಗೆ ಚುನಾವಣಾ ಕೆಲಸಗಳನ್ನು ನಿರ್ವಹಿಸಲು ಅನುವಾಗುವಂತೆ ಪ್ರತ್ಯೇಕವಾಗಿ ನಿರ್ದಿಷ್ಟ ಸ್ಥಳ ನಿಗಧಿಪಡಿಸಿ ನೆರಳು, ನೀರು ಸೇರಿದಂತೆ ಅಗತ್ಯ ಮೂಲಸೌಕರ್ಯಗಳನ್ನು ಒದಗಿಸಬೇಕು ಎಂದು ನೋಂದಾಯಿತ ಹಾಗೂ ಮಾನ್ಯತೆ ಪಡೆದ ರಾಜ್ಯ ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಸಭೆಗೆ ಸಲಹೆ ನೀಡಿದರು.

ಸಭೆಯಲ್ಲಿ ಚುನಾವಣಾ ತಹಶೀಲ್ದಾರ್ ರೇಷ್ಮ, ನೋಂದಾಯಿತ ಹಾಗೂ ಮಾನ್ಯತೆ ಪಡೆದ ರಾಜ್ಯ ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಸೇರಿದಂತೆ ಮತ್ತಿತರರು ಹಾಜರಿದ್ದರು.



# ರಾಜ್ಯ ಮತ್ತು ಬಳ್ಳಾರಿ ಜಿಲ್ಲಾ ಘಟಕದ ನೇಮಕಾತಿ ಆದೇಶ ಪತ್ರ

**ಬಳ್ಳಾರಿ:** ನಗರದ ಸ್ನೇಹ ಸಂಪುಟ ಸಭಾಂಗಣದಲ್ಲಿ ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ, ವಿಮೋಚನವಾದ ರಾಜ್ಯ ಮತ್ತು ಬಳ್ಳಾರಿ ಜಿಲ್ಲಾ ಘಟಕದ ನೇಮಕಾತಿ ಆದೇಶ ಪತ್ರವನ್ನು ಮಹಿಳಾ ರಾಜ್ಯಾಧ್ಯಕ್ಷರಾದ ಎಂ.ಶಾಂತ ಅವರ ನೇತೃತ್ವದಲ್ಲಿ ಹಮ್ಮಿಕೊಳ್ಳಲಾಯಿತು.

ರಾಜ್ಯ ಘಟಕದಲ್ಲಿ ರಾಜ್ಯ ಗೌರವಾಧ್ಯಕ್ಷರಾದ ಡಾ.ವೈ.ಗೌಸಿಯಾ ಬೀ, ರಾಜ್ಯ ಪ್ರಧಾನ ಕಾರ್ಯದರ್ಶಿ ಎಂಪಿ.ಕಮಲ, ಉಪಾಧ್ಯಕ್ಷರಾದ ಈರಮ್ಮ, ಬಿಎ.ಮಲ್ಲೇಶ್ವರಿ, ಯಶೋದಮ್ಮ, ರೇಡಿಯೋ ಪರ್ಕ ಕೆ.ಮಮತಾ, ರಾಜ್ಯ ಕಾರ್ಯದರ್ಶಿ ಬಿಟಿ ಭಾಗ್ಯಮ್ಮ, ದ್ರಾಕ್ಷಾಯಿಣಿ ಇವರುಗಳನ್ನು ಮತ್ತು ಜಿಲ್ಲಾಧ್ಯಕ್ಷರಾದ ಹೆಚ್.ಚಂದ್ರಕಳ ಅವರ ಸಮ್ಮುಖದಲ್ಲಿ ಬಳ್ಳಾರಿ ಜಿಲ್ಲಾ ಘಟಕಕ್ಕೆ ಜಿಲ್ಲಾ ಖಜಾಂಚಿ ರೇಡಿಯೋ ಪಾರ್ಕ್ ಜೆ.ಕವಿತಾ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕುಸುಮ, ರೀಟ, ಜಿಲ್ಲಾ ಕಾರ್ಯದರ್ಶಿ ಉಮಾದೇವಿ, ಸಂಘಟನಾ ಕಾರ್ಯದರ್ಶಿ ಸುಜಾತ, ಜಿಲ್ಲಾ ಉಪಾಧ್ಯಕ್ಷರುಗಳಾದ ಮಂಜುಳಾ, ಎನ್. ಗೀತಾ ಮತ್ತು ವಸಂತ ಇವರುಗಳನ್ನು ದಲಿತ ಸಂಘರ್ಷ ಸಮಿತಿಯ ರಾಜ್ಯಾಧ್ಯಕ್ಷರಾದ ಆರ್. ಗುರುಮೂರ್ತಿಯವರ ಆದೇಶದ ಮೇರೆಗೆ ಮಹಿಳಾ ರಾಜ್ಯಾಧ್ಯಕ್ಷರಾದ ಎಂ ಶಾಂತ ಅವರಿಂದ ಆದೇಶ ಪತ್ರವನ್ನು ವಿತರಣೆ ಮಾಡಲಾಯಿತು.

ತಾವುಗಳು ಸಂಘದ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡು ನಮ್ಮ ಸಂಘದ ತತ್ವ ಸಿದ್ಧಾಂತ ಹಾಗೂ ಧ್ಯೇಯ ವಿಶ್ವಾಸವನ್ನು ಇಟ್ಟುಕೊಂಡು ಸಂಘದ ಮುಖಂಡರೊಂದಿಗೆ ಸತತ ಸಂಪರ್ಕವನ್ನು ಇಟ್ಟುಕೊಂಡು ಸಂಘವನ್ನು ಮುನ್ನಡಿಸುತ್ತೇವೆಂದು ಆಶಿಸುತ್ತೇನೆ ಇನ್ನು ಮುಂದೆ ಸಂಘವು ಕರೆಯುವ ಪ್ರತಿಯೊಂದು ಸಭೆಗೆ ತಪ್ಪದೆ ಹಾಜರಾಗಿ ಸಂಘದ ಎಲ್ಲಾ ಚಟುವಟಿಕೆಗಳಲ್ಲಿ ಭಾಗವಹಿಸಬೇಕೆಂದು ಈ ಮೂಲಕ ತಿಳಿಸುತ್ತೇನೆ.

**ಆರ್.ಗುರುಮೂರ್ತಿ। ಸಂಸ್ಥಾಪಕ ರಾಜ್ಯದ್ಯಕ್ಷರು**
ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ (ವಿಮೋಚನವಾದ)

# ಎಂಡಿಎನ್ ಅಧ್ಯಯನ ಪೀಠ ಆರಂಭಕ್ಕೆ ಮುಖ್ಯಮಂತ್ರಿಗಳಿಗೆ ಅಭಿನಂದನೆ

**ನಾಗಮಂಗಲ:** ರೈತಪರ ಹೋರಾಟದ ಧ್ವನಿ ರೈತಪರ ನಿಲುವಿನ ನಿರ್ಣಯಕ್ಕೆ ನಿರಂತರವಾದ ನಿಲುವಿನ ಹೋರಾಟಗಾರರಾದ ಪ್ರೊ. ಎಂ ಡಿ. ನಂಜುಂಡಸ್ವಾಮಿಯವರ ಅಧ್ಯಯನ ಪೀಠ ಆರಂಭಿಸುವುದಕ್ಕೆ ಚಾಲನೆ ನೀಡಿದ ಮುಖ್ಯಮಂತ್ರಿಗಳಿಗೆ ಕರ್ನಾಟಕ ರಾಜ್ಯ ರೈತ ಉತ್ಪಾದಕರ ಆಡಳಿತ ಮಂಡಳಿಯ ನಿರ್ದೇಶಕರಾದ ರಾಜೇಶ್ ಅಭಿನಂದನೆ ತಿಳಿಸಿದ್ದಾರೆ

ಭಾರತೀಯ ಕೃಷಿಯ ಬಗ್ಗೆ ಹೆಚ್ಚು ಕಾಳಜಿ ಇದ್ದು ಮತ್ತು ಜಾಗತಿಕ ದೃಷ್ಟಿಕೋನ ಹೊಂದಿದ್ದ ಪ್ರೊಫೆಸರ್ ಎಂ.ಡಿ ನಂಜುಂಡಸ್ವಾಮಿಯವರ ಜೀವನ ಹಾಗೂ ಅವರ ಕೊಡುಗೆಗಳು ಕುರಿತು ಅಧ್ಯಯನ ಪೀಠ ಮಾಡುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು 16ನೇ ಬಜೆಟ್ ನಲ್ಲಿ ಘೋಷಣೆ ಮಾಡಿರುವುದರಿಂದ ಅವರಿಗೆ ನಾಗಮಂಗಲ ತಾಲ್ಲೂಕಿನ ಕರ್ನಾಟಕ ರಾಜ್ಯ ರೈತ ಕೃಷಿ ಸಂವರ್ಧನ ಕೇಂದ್ರ. ದೇವಲಾಪುರ ರೈತ ಉತ್ಪಾದಕರ ಕಂಪನಿ ಮತ್ತು ಕರ್ನಾಟಕ ರಾಜ್ಯ ರೈತ ಉತ್ಪಾದಕರ ಆಡಳಿತ ಮಂಡಳಿಯ ಪರವಾಗಿ ಅಭಿನಂದನೆ ತಿಳಿಸಿದ್ದಾರೆ.

# ಮತ್ತೊಂದು ಮುಸ್ಲಿಂ ದೇಶದಲ್ಲಿ ಆಂತರಿಕ ಸಂಘರ್ಷ



ಟರ್ಕಿ: ಪ್ರಪಂಚದ ಹಲವು ದೇಶಗಳಲ್ಲಿ ಸಂಘರ್ಷಗಳು ನಡೆಯುತ್ತಿವೆ. ಹಮಾಸ್–ಇಸ್ರೇಲ್, ಬಾಂಗ್ಲಾದೇಶ ಆಂತರಿಕ ಸಂಘರ್ಷ, ಪಾಕಿಸ್ತಾನದಲ್ಲೂ ಬಲೂಚಿಸ್ಥಾನಿಗಳು ಸರ್ಕಾರದ ವಿರುದ್ಧ ಯುದ್ಧವೇ ಸಾರಿದ್ದಾರೆ. ಈ ನಡುವೆ ಇದೀಗ ಮತ್ತೊಂದು ಮುಸ್ಲಿಂ ದೇಶದಲ್ಲಿ ದಂಗೆಯ ಪರಿಸ್ಥಿತಿಗಳು ಗೋಚರಿಸುತ್ತಿವೆ. ಹೌದು. ಆ ದೇಶ ಬೇರೆ ಯಾವುದೂ ಅಲ್ಲ, ಕಟ್ಟಾ ಮುಸ್ಲಿಂ ದೇಶ ಟರ್ಕಿ. ಈ ದೇಶದ ನಾಯಕನಾಗಿರುವ ಖಲೀಫ ಅಧ್ಯಕ್ಷರು ರೆಸೆಪ್ ತಯ್ಯಿಪ್ ಎರ್ಡೋಗನ್ ವಿರುದ್ಧ ಪ್ರತಿಭಟಿಸಲು ಸಾವಿರಾರು ಟರ್ಕಿಶ್ ನಾಗರಿಕರು ಪ್ರಸ್ತುತ ಬೀದಿಗಿಳಿದಿದ್ದಾರೆ. ದೇಶದಲ್ಲಿ ಪರಿಸ್ಥಿತಿ ಈಗ ತುಂಬಾ ಹದಗೆಟ್ಟಿದ್ದು, ಟರ್ಕಿಶ್ ಆಡಳಿತವು ಮುಂದಿನ 4 ದಿನಗಳವರೆಗೆ ದೇಶದಲ್ಲಿ ಎಲ್ಲ ರೀತಿಯ ಪ್ರದರ್ಶನಗಳನ್ನು ನಿಷೇಧಿಸಿದೆ. ವಿಪರ್ಯಾಸವೆಂದರೆ ಹಿಂದೆ ಇತರೆ ದೇಶಗಳಿಗೆ ಸವಾಲು ಹಾಕುತ್ತಿದ್ದ ಟರ್ಕಿ ಇದೀಗ ತನ್ನದೇ ಬೇರು ಅಲುಗಾಡಲು ಶುರುವಾಗಿದೆ.

ಈ ಹಿಂದೆ ಸಿರಿಯಾ ಅಥವಾ ಗಾಜಾ ಆಗಿರಲಿ, ಪ್ರಪಂಚದ ಇತರ ದೇಶಗಳ ರಾಜಕೀಯದಲ್ಲಿ ಹಸ್ತಕ್ಷೇಪ ಮಾಡುವ ಮೂಲಕ ಖಲೀಫಾ ಎರ್ಡೋಗನ್ ತಾನು ಮುಸ್ಲಿಂ ಜಗತ್ತಿನ ನಾಯಕ ಎಂದು ಶಕ್ತಿ ತೋರಿಸುತ್ತಿದ್ದರು, ಸೌದಿ ಅರೇಬಿಯಾ ಮತ್ತು ಇರಾನ್‌ಗೆ ನೇರ ಸವಾಲು ಹಾಕುತ್ತಿದ್ದರು. ಆದರೆ ಈಗ ಅವರ ಸ್ವಂತ ದೇಶದಲ್ಲಿ ಅವರ ರಾಜಕೀಯ ಬೇರುಗಳು ದುರ್ಬಲಗೊಂಡಿವೆ. ದೇಶದಲ್ಲಿ ತಮ್ಮ ಅಧಿಕಾರವನ್ನು ಉಳಿಸಿಕೊಳ್ಳಲು ವಿರೋದಿಗಳನ್ನು ಬಂಧಿಸುವಲ್ಲಿ ನಿರತರಾಗಿದ್ದಾರೆ.

ಟರ್ಕಿಯ ಪ್ರಮುಖ ನಗರವಾದ ಇಸ್ತಾನ್‌ಬುಲ್‌ನ ಮೇಯರ್ ಎಕ್ರೆಮ್ ಇಮಾಮೊಗ್ಲು ಅವರ ಬಂಧನದ ನಂತರ ಗುರುವಾರ ಸಾವಿರಾರು ಪ್ರತಿಭಟನಾಕಾರರು ಇಸ್ತಾನ್‌ಬುಲ್‌ನ ಬೀದಿಗಿಳಿದಿದ್ದಾರೆ. ಸೆಕ್ಯುಲರ್ ರಿಪಬ್ಲಿಕನ್ ಪಕ್ಷದ ನಾಯಕ ಮತ್ತು ಇಸ್ತಾನ್‌ಬುಲ್‌ನ ಮೇಯರ್ ಆಗಿರುವ ಎಕ್ರೆಮ್ ಇಮಾಮೊಗ್ಲು ಅವರನ್ನು ಟರ್ಕಿಯಲ್ಲಿ ವಿರೋಧ ಪಕ್ಷದ ನಾಯಕ ಮತ್ತು ಅಧ್ಯಕ್ಷ ಎರ್ಡೋಗನ್ ಅವರ ಪ್ರಮುಖ ಪ್ರತಿಸ್ಪರ್ಧಿ ಎಂದು ಪರಿಗಣಿಸಲಾಗಿದೆ. ಈಗಿರುವಾಗ ಇಮಾಮೊಗ್ಲು ವಿರುದ್ಧ ಭ್ರಷ್ಟಾಚಾರ ಮತ್ತು ಭಯೋತ್ಪಾದಕ ಗುಂಪಿಗೆ ಸಹಾಯ ಮಾಡಲಾಗುತ್ತಿದೆ ಎಂದು ಪ್ರಾಸಿಕ್ಯೂಟರ್‌ಗಳು ಆರೋಪಿಸಿದ್ದಾರೆ. ಅವರನ್ನು ಕ್ರಿಮಿನಲ್ ಸಂಘಟನೆಯ ಶಂಕಿತ ನಾಯಕ ಎಂದು ಬಣ್ಣಿಸಿದ್ದಾರೆ.

ತನಿಖೆಯ ಭಾಗವಾಗಿ ಖಲೀಫಾ ಪೊಲೀಸರು 100 ಕ್ಕೂ ಹೆಚ್ಚು ಜನರನ್ನು ಬಂಧಿಸಿದ್ದಾರೆ. ಇದರಲ್ಲಿ ದೇಶದ ಪತ್ರಕರ್ತರು, ರಾಜಕಾರಣಿಗಳು ಮತ್ತು ಉದ್ಯಮಿಗಳು ಕೂಡ ಸೇರಿದ್ದಾರೆ. ಅದೇ ಸಮಯದಲ್ಲಿ, ಅವರ ಬಂಧನದ ನಂತರ ಜನರ ಕೋಪವನ್ನು ನೋಡಿ, ಇಸ್ತಾನ್‌ಬುಲ್ ಗವರ್ನರ್ ಕಚೇರಿ 4 ದಿನಗಳವರೆಗೆ ಯಾವುದೇ ರೀತಿಯ ಪ್ರತಿಭಟನೆ ಪ್ರದರ್ಶನವನ್ನು ನಿಷೇಧಿಸಿದೆ. ಇದರ ನಂತರ, ಇಮಾಮೊಗ್ಲು ಸಾಮಾಜಿಕ ಮಾಧ್ಯಮದಲ್ಲಿ ಆಕ್ರೋಶ ವ್ಯಕ್ತವಾಗಿದ್ದು, 'ಜನರ ಇಚ್ಛೆಯನ್ನು ನಿಗ್ರಹಿಸಲು ಸಾಧ್ಯವಿಲ್ಲ' ಎಂದು ಎಚ್ಚರಿಕೆ ನೀಡಲಾಗಿದೆ. ಟರ್ಕಿಯಲ್ಲಿ ಪ್ರತಿಭಟನೆಗಳ ಮೇಲೆ ನಾಲ್ಕು ದಿನಗಳ ನಿಷೇಧವಿದ್ದರೂ, ಇಸ್ತಾನ್‌ಬುಲ್‌ನ ಪೊಲೀಸ್ ಪ್ರಧಾನ ಕಚೇರಿ, ನಗರ ಸಭಾಂಗಣ ಮತ್ತು ಇಮಾಮೊಗ್ಲು ಅವರ ಪಕ್ಷದ ಕಚೇರಿಯ ಹೊರಗೆ ಸಾವಿರಾರು ಜನರು ಜಮಾಯಿಸಿ ಇಮಾಮೊಗ್ಲು ಅವರ ಬಂಧನವನ್ನು ಕಾನೂನುಬಾಹಿರ ಮತ್ತು ಆಧಾರರಹಿತ ಎಂದು ಖಲೀಫಾ ವಿರುದ್ಧ ಘೋಷಣೆಗಳನ್ನು ಕೂಗುತ್ತಿದ್ದಾರೆ. ಇದು ಘರ್ಷಣೆ ಯಾವ ಕ್ಷಣದಲ್ಲಾದರೂ ಭುಗಿಲೇಳುವ ಸಾಧ್ಯತೆಯಿದೆ. ಆಂತರಿಕ ಸಂಘರ್ಷ ಗಮನಿಸಿದರೆ ಟರ್ಕಿ ಮತ್ತೊಂದು ಬಾಂಗ್ಲಾದೇಶವಾಗುವುದು ಗೋಚರಿಸುತ್ತಿದೆ.

# ಎನ್‌ಕೌಂಟರ್: ಇಬ್ಬರು ನಕ್ಸಲರ ಹತ್ಯೆ ಓರ್ವ ಭದ್ರತಾ ಸಿಬ್ಬಂದಿ ಹುತಾತ್ಮ



ಛತ್ತೀಸ್‌ಗಢ: ನಕ್ಸಲರು ಮತ್ತು ಭದ್ರತಾ ಪಡೆಗಳ ನಡುವೆ ನಡೆದ ಗುಂಡಿನ ಚಕಮಕಿಯಲ್ಲಿ ಇಬ್ಬರು ನಕ್ಸಲರನ್ನು ಹತ್ಯೆಗೈಯ್ಯಲಾಗಿದ್ದು, ಓರ್ವ ಭದ್ರತಾ ಪಡೆ ಸಿಬ್ಬಂದಿ ಹುತಾತ್ಮರಾಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬಸ್ತಾರ್ ವಿಭಾಗದ ಬಿಜಾಪುರ–ದಂತೇವಾಡ ಗಡಿ ಭಾಗದ ಅರಣ್ಯ ಪ್ರದೇಶದಲ್ಲಿ ಗುರುವಾರ ಬೆಳಗ್ಗೆ 7 ಗಂಟೆಯ ಸುಮಾರಿಗೆ ಎನ್‌ಕೌಂಟರ್ ನಡೆದಿದೆ.

ಮೃತ ಭದ್ರತಾ ಸಿಬ್ಬಂದಿ ಛತ್ತೀಸ್‌ಗಢ ಪೊಲೀಸರ ಜಿಲ್ಲಾ ಮೀಸಲು ಪಡೆ (ಡಿಆರ್‌ಜಿ)ಗೆ ಸೇರಿದವರಾಗಿದ್ದು, ಗಂಗಲೂರು ಪೊಲೀಸ್ ಠಾಣಾ ಪ್ರದೇಶದಲ್ಲಿ ನಕ್ಸಲ್ ವಿರೋಧಿ ಕಾರ್ಯಾಚರಣೆಯಲ್ಲಿ ತೊಡಗಿದ್ದರು ಎಂದು ತಿಳಿದು ಬಂದಿದೆ.


ಘಟನಾ ಸ್ಥಳದಿಂದ ಇಬ್ಬರು ನಕ್ಸಲರ ಮೃತದೇಹಗಳ ಜೊತೆಗೆ ಬಂದೂಕುಗಳು ಮತ್ತು ಸ್ಫೋಟಕಗಳನ್ನು ವಶಪಡಿಸಿಕೊಳ್ಳಲಾಗಿದೆ. ಕಾರ್ಯಾಚರಣೆ ಇನ್ನೂ ಮುಂದುವರೆದಿದೆ ಎಂದು ಅದಿಕಾರಿಗಳು ಹೇಳಿದ್ದಾರೆ.

ಐಇಡಿ ಸ್ಫೋಟದಿಂದ ಪಾರು: ಈ ನಡುವೆ ರಾಜ್ಯದ ನಾರಾಯಣಪುರ ಜಿಲ್ಲೆಯಲ್ಲಿ ಗುರುವಾರ ಮುಂಜಾನೆ ನಕ್ಸಲರು ಐಇಡಿ ಸ್ಫೋಟಿಸಿದ್ದು, ಭದ್ರತಾ ಪಡೆ ಕೂದಲೆಳೆ ಅಂತರದಲ್ಲಿ ಪಾರಾಗಿದ್ದಾರೆ ಎಂದು ಪೊಲೀಸರು ಹೇಳಿದ್ದಾರೆ.

ಸ್ಫೋಟದಲ್ಲಿ ಭದ್ರತಾ ಸಿಬ್ಬಂದಿಗೆ ಯಾವುದೇ ಗಂಭೀರ ಸ್ವರೂಪದ ಗಾಯಗಳಾಗಿಲ್ಲ. ಆದರೆ, ಮಣ್ಣು ಮತ್ತು ಧೂಳು ಅಪ್ಪಳಿಸಿ ಇಬ್ಬರು ಪೊಲೀಸ್ ಸಿಬ್ಬಂದಿ ಹಾಗೂ ಓರ್ವ ಅಧಿಕಾರಿಯ ಕಣ್ಣಿಗೆ ಗಾಯವಾಗಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ.

ಅಬುಜ್‌ಮದ್ ಪ್ರದೇಶದಲ್ಲಿ ಬೆಳಗಿನ ಜಾವ ಸುಮಾರು 3ಕ್ಕೆ ಜಿಲ್ಲಾ ಮೀಸಲು ಪಡೆ (ಡಿಆರ್‌ಜಿ) ಘಟಕ ಮತ್ತು ವಿಶೇಷ ಕಾರ್ಯಪಡೆ (ಎಸ್‌ಟಿಎಫ್) ಜಂಟಿ ತಂಡ ನಕ್ಸಲ್ ವಿರೋಧಿ ಕಾರ್ಯಾಚರಣೆ ಕೈಗೊಂಡಾಗ ಈ ದಾಳಿ ನಡೆದಿದೆ.

# ಅಮೆರಿಕದಲ್ಲಿ ಬಡ್ಡಿದರ ಯಥಾಸ್ಥಿತಿ



**ನವದೆಹಲಿ:** ಅಮೆರಿಕದ ಫೆಡರಲ್ ರಿಸರ್ವ್ ಸಂಸ್ಥೆ ತನ್ನ ಬಡ್ಡಿದರ ಯಥಾಸ್ಥಿತಿ ಕಾಯ್ದುಕೊಳ್ಳಲು ನಿರ್ಧರಿಸಿದೆ. ಹೊಸ ಸರ್ಕಾರದ ವಿವಾದಾತ್ಮಕ ಆಮದು ಸುಂಕ ನೀತಿಯಿಂದಾಗಿ ಫೆಡರಲ್ ರಿಸರ್ವ್ ನಿರ್ಧಾರದ ಬಗ್ಗೆ ಸಾಕಷ್ಟು ಕುತೂಹಲ ಇತ್ತು. ಆದರೆ, ಅಂತಿಮವಾಗಿ ಶೇ. 4.25ರಿಂದ ಶೇ. 4.50ರ ಶ್ರೇಣಿಯಲ್ಲಿ ಬಡ್ಡಿದರ ಮುಂದುವರಿಸಲು ನಿಶ್ಚಯಿಸಲಾಗಿದೆ. ಮಾರುಕಟ್ಟೆ ಕೂಡ ಇದೇ ನಿರ್ಧಾರವನ್ನು ಅಪೇಕ್ಷಿಸಿತ್ತು ಮತ್ತು ನಿರೀಕ್ಷಿಸಿತ್ತು. ಎರಡು ದಿನಗಳ ಕಾಲ ಫೆಡರಲ್ ರಿಸರ್ವ್ ಸಭೆ ಬಳಿಕ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅದರ ಛೇರ್ಮನ್ ಜಿರೋಮ್ ಪೋವೆಲ್, ತಾವು ದೇಶದ ಆರ್ಥಿಕ ಚಟುವಟಿಕೆಯನ್ನು ಪರಾಮರ್ಶಿಸಿದ ಬಳಿಕ ಈ ನಿರ್ಧಾರ ತೆಗೆದುಕೊಂಡಿದ್ದಾಗಿ ತಿಳಿಸಿದರು.

ಹಣದುಬ್ಬರದ ಸಮಸ್ಯೆ ಇರದಿದ್ದರೆ ದರ ಕಡಿತ ಸಾಧ್ಯತೆ ಇತ್ತು

ಅಮೆರಿಕದಲ್ಲಿ ಹಣದುಬ್ಬರ ಶೇ.2ರಷ್ಟು ಇರಬೇಕೆಂದು ಗುರಿ ಇಡಲಾಗಿದೆ. ಆದರೆ, ಈ ಮಟ್ಟಕ್ಕಿಂತ ದರ ಹೆಚ್ಚಿದೆ. ಆಮದು ಸುಂಕ ನೀತಿಯು ಹಣದುಬ್ಬರವನ್ನು ಮೇಲ್ಮುಖಕ್ಕೆ ನೂಕುತ್ತಿದೆ. ಈ ಅಂಶಗಳನ್ನು ಫೆಡರಲ್ ರಿಸರ್ವ್‌ನ ಮಾನಿಟರಿ ಕಮಿಟಿ ಸಭೆಯಲ್ಲಿ ಪರಿಗಣಿಸಲಾಯಿತು. ಹಣದುಬ್ಬರ ನಿರೀಕ್ಷಿತ ರೀತಿಯಲ್ಲಿ ನಿಯಂತ್ರಣದಲ್ಲಿದ್ದಿದ್ದರೆ ಈ ಬಾರಿಯೂ ಬಡ್ಡಿದರ ಕಡಿಮೆಗೊಳಿಸುವ ಸಾಧ್ಯತೆ ಇತ್ತು. ಆದರೆ, ಅಂತಿಮವಾಗಿ ಬಡ್ಡಿದರ ಯಥಾಸ್ಥಿತಿ ಕಾಯ್ದುಕೊಳ್ಳುವ ನಿರ್ಧಾರಕ್ಕೆ ಬರಲಾಯಿತು.

ಈ ವರ್ಷ 50 ಮೂಲಾಂಕಗಳಷ್ಟು ದರ ಕಡಿತ

ಎಫ್‌ಓಎಂಸಿ ಸಭೆಯಲ್ಲಿ ಬಂದ ಮತ್ತೊಂದು ಮಹತ್ವದ ಸಂಗತಿ ಎಂದರೆ, ಈ ವರ್ಷ 50 ಮೂಲಾಂಕಗಳಷ್ಟು ಬಡ್ಡಿದರ ಕಡಿತ ಮಾಡಲು ಇಂಗಿತ ವ್ಯಕ್ತವಾಗಿದೆ. 2025ರ ಡಿಸೆಂಬರ್‌ನೊಳಗೆ ಎರಡು ಬಾರಿ ದರ ಕಡಿತಗೊಳಿಸಬಹುದು. ಈಗ ಶೇ. 4.25–4.50ರ ಶ್ರೇಣಿಯಲ್ಲಿರುವ ಬಡ್ಡಿದರ 2025ರ ಡಿಸೆಂಬರ್‌ನಲ್ಲಿ ಶೇ. 3.75–4.0ರಷ್ಟಾಗಬಹುದು.

ಕೋವಿಡ್ ಬಳಿಕ ಅಮೆರಿಕದಲ್ಲಿ ಹಣದುಬ್ಬರ ದರ ಶೇ.7ಕ್ಕಿಂತಲೂ ಹೆಚ್ಚಿನ ಮಟ್ಟದಲ್ಲಿತ್ತು. ಅದನ್ನು ನಿಯಂತ್ರಿಸಲು ಫೆಡರಲ್ ರಿಸರ್ವ್ ಸತತವಾಗಿ ಬಡ್ಡಿದರ ಹೆಚ್ಚಿಸಿತ್ತು. ಶೇ. 5.25–5.50ರಷ್ಟು ಬಡ್ಡಿದ ಇತ್ತು. ನಾಲ್ಕು ವರ್ಷದ ಬಳಿಕ 2024ರ ಸೆಪ್ಟೆಂಬರ್‌ನಲ್ಲಿ ಮೊದಲ ರೇಟ್ ಕಟ್ ನಿರ್ಧಾರ ತೆಗೆದುಕೊಳ್ಳಲಾಯಿತು. ಸತತ ಮೂರು ಬಾರಿ ದರ ಕಡಿತ ಮಾಡಲಾಯಿತು. ಸೆಪ್ಟೆಂಬರ್‌ನಲ್ಲಿ 50, ನವೆಂಬರ್‌ನಲ್ಲಿ 25, ಮತ್ತು ಡಿಸೆಂಬರ್‌ನಲ್ಲಿ 25 ಮೂಲಾಂಕಗಳಷ್ಟು ಬಡ್ಡಿದರ ಕಡಿಮೆಗೊಳಿಸಲಾಯಿತು.

# ಭಾರತದ ಅತ್ಯಂತ ಶ್ರೀಮಂತ ಶಾಸಕರ ಟಾಪ್ 10ರಲ್ಲಿ ಕರ್ನಾಟಕದ ನಾಲ್ವರಿಗೆ ಸ್ಥಾನ

ನವದೆಹಲಿ: ಭಾರತದ ಅತ್ಯಂತ ಶ್ರೀಮಂತ ಹಾಗೂ ಬಡ ಶಾಸಕರು ಯಾರು ಎನ್ನುವ ವರದಿಯನ್ನು ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್? ಬಿಡುಗಡೆ ಮಾಡಿದೆ. ಎಡಿಆರ್ ವರದಿಯ ಪ್ರಕಾರ, ಮುಂಬೈನ ಘಾಟ್ಕೋಪರ್ ಪೂರ್ವದ ಬಿಜೆಪಿ ಶಾಸಕ ಪರಾಗ್ ಶಾ ಭಾರತದ ಅತ್ಯಂತ ಶ್ರೀಮಂತ ಶಾಸಕ. ಇವರ ಆಸ್ತಿಯ ಮೌಲ್ಯ ಸುಮಾರು 3400 ಕೋಟಿ ರೂ. ಅವರ ನಂತರ ಕರ್ನಾಟಕದ ಕನಕಪುರದ ಕಾಂಗ್ರೆಸ್ ಶಾಸಕ ಡಿ.ಕೆ. ಶಿವಕುಮಾರ್ ಅವರ ಆಸ್ತಿ 1,413 ಕೋಟಿ ರೂ.ಗಳಿಗಿಂತ ಹೆಚ್ಚು. ಅತಿ ಕಡಿಮೆ ಆಸ್ತಿ ಹೊಂದಿರುವ ಶಾಸಕರು ಯಾರು ಎಂಬುದನ್ನು ತಿಳಿಯಿರಿ.

ಪರಾಗ್ ಶಾ ಅತ್ಯಂತ ಶ್ರೀಮಂತ ಶಾಸಕ

ಎಡಿಆರ್ ವರದಿಯು ಶಾಸಕರು ಚುನಾವಣೆಯಲ್ಲಿ ಸ್ಪರ್ಧಿಸುವ ಮೊದಲು ಸಲ್ಲಿಸಿದ ಅಫಿಡವಿಟ್‌ಗಳಲ್ಲಿರುವ ಮಾಹಿತಿಯನ್ನೇ ಇದು ಹೇಳುತ್ತದೆ. ಈ ಸಂಶೋಧನೆಯು 28 ರಾಜ್ಯಗಳು ಮತ್ತು ಮೂರು ಕೇಂದ್ರಾಡಳಿತ ಪ್ರದೇಶಗಳ 4092 ಶಾಸಕರನ್ನು ಒಳಗೊಂಡಿದೆ. ಈ ವರದಿಯ ಪ್ರಕಾರ, ಬಿಜೆಪಿಯ ಪರಾಗ್ ಶಾ ಅತ್ಯಂತ ಶ್ರೀಮಂತ ಶಾಸಕ. ಪಶ್ಚಿಮ ಬಂಗಾಳದ ನಿರ್ಮಲ್ ಕುಮಾರ್ ಧಾರಾ ಅತಿ ಕಡಿಮೆ ಆಸ್ತಿ ಹೊಂದಿರುವ ಶಾಸಕರಾಗಿದ್ದಾರೆ. ಅವರ ಬಳಿ ಕೇವಲ 1700 ರೂ. ಇದೆ. ರ್ಮಲ್ ಕುಮಾರ್ ಧಾರಾ ಪಶ್ಚಿಮ ಬಂಗಾಳದ ಇಂಡಸ್ ಕ್ಷೇತ್ರದ ಬಿಜೆಪಿ ಶಾಸಕರಾಗಿದ್ದಾರೆ.

ಕರ್ನಾಟಕದ ಶಾಸಕರು ಹೊಂದಿರುವ ಆಸ್ತಿ ಎಷ್ಟಿದೆ?

ಕರ್ನಾಟಕದ ಶಾಸಕರು ಒಟ್ಟಾರೆಯಾಗಿ 14,179 ಕೋಟಿ ರೂ. ಮೌಲ್ಯದ ಆಸ್ತಿಯನ್ನು ಹೊಂದಿದ್ದು, ಇದು ದೇಶದಲ್ಲೇ ಅತಿ ಹೆಚ್ಚು. ಮಹಾರಾಷ್ಟ್ರ ಶಾಸಕರ ಆಸ್ತಿ 12,424 ಕೋಟಿ ರೂ. ಆಂಧ್ರಪ್ರದೇಶದ ಶಾಸಕರು 11,323 ಕೋಟಿ ರೂಪಾಯಿ ಆಸ್ತಿ ಹೊಂದಿದ್ದಾರೆ. ಅತ್ಯಂತ ಕಡಿಮೆ ಸಂಪತ್ತು ಹೊಂದಿರುವ ರಾಜ್ಯಗಳಲ್ಲಿ ತ್ರಿಪುರ, ಮಣಿಪುರ ಮತ್ತು ಪುದುಚೇರಿ ಸೇರಿವೆ.

ತ್ರಿಪುರಾ ಶಾಸಕರ ಒಟ್ಟು ಆಸ್ತಿ ಮೌಲ್ಯ 90 ಕೋಟಿ ರೂ.

ತ್ರಿಪುರಾ ಶಾಸಕರು 90 ಕೋಟಿ ರೂಪಾಯಿ ಆಸ್ತಿ ಹೊಂದಿದ್ದಾರೆ. ಮಣಿಪುರ ಶಾಸಕರು 222 ಕೋಟಿ ರೂಪಾಯಿ ಮೌಲ್ಯದ ಆಸ್ತಿ ಹೊಂದಿದ್ದಾರೆ. ಪುದುಚೇರಿ ಶಾಸಕರು 297 ಕೋಟಿ ರೂಪಾಯಿ ಮೌಲ್ಯದ ಆಸ್ತಿ ಹೊಂದಿದ್ದಾರೆ. ಕರ್ನಾಟಕದ ಸ್ವತಂತ್ರ ಶಾಸಕ ಕೆ.ಎಚ್. ಪುಟ್ಟಸ್ವಾಮಿ ಗೌಡ ಅವರ ಆಸ್ತಿ 1,267 ಕೋಟಿ ರೂ. ಕರ್ನಾಟಕದ ಕಾಂಗ್ರೆಸ್ ಶಾಸಕ ಪ್ರಿಯಕೃಷ್ಣ ಅವರ ಆಸ್ತಿ 1,156 ಕೋಟಿ ರೂ. ಇದೆ. ವಿಶೇಷವೇನೆಂದರೆ ಟಾಪ್ 10ರಲ್ಲಿ ಕರ್ನಾಟಕದ ನಾಲ್ವರು ಶಾಸಕರು ಸ್ಥಾನ ಪಡೆದಿದ್ದಾರೆ.

ಶ್ರೀಮಂತ ಶಾಸಕರ ಪಟ್ಟಿಯಲ್ಲಿರುವ ಹೆಸರುಗಳು ಇವು

ಶ್ರೀಮಂತ ಶಾಸಕರ ಪಟ್ಟಿಯಲ್ಲಿ ಹಲವು ದೊಡ್ಡ ಹೆಸರುಗಳಿವೆ. ಆಂಧ್ರಪ್ರದೇಶದ ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು ಅವರ ಆಸ್ತಿ 931 ಕೋಟಿ ರೂ. ಆಂಧ್ರಪ್ರದೇಶದ ಮಾಜಿ ಮುಖ್ಯಮಂತ್ರಿ ವೈ.ಎಸ್. ಜಗನ್ ಮೋಹನ್ ರೆಡ್ಡಿ ಅವರ ಆಸ್ತಿ 757 ಕೋಟಿ ರೂ. ಇದೆ.

ಈ ರಾಜ್ಯದ ಏಳು ಶಾಸಕರು ಟಾಪ್ 20 ಶ್ರೀಮಂತ ಶಾಸಕರಲ್ಲಿ ಸೇರಿದ್ದಾರೆ. ಇವರಲ್ಲಿ ಐಟಿ ಸಚಿವ ನಾರಾ ಲೋಕೇಶ್ ಮತ್ತು ಹಿಂದೂಪುರ ಶಾಸಕ ಎನ್. ಬಾಲಕೃಷ್ಣ ಕೂಡ ಸೇರಿದ್ದಾರೆ. ರಾಜ್ಯಗಳ ಪ್ರಕಾರ ಶಾಸಕರ ಆಸ್ತಿಯಲ್ಲಿ ಬಹಳಷ್ಟು ವ್ಯತ್ಯಾಸವಿದೆ. ಸರಾಸರಿ ಸಂಪತ್ತಿನ ವಿಷಯದಲ್ಲಿ ಆಂಧ್ರಪ್ರದೇಶ ಮುಂಚೂಣಿಯಲ್ಲಿದೆ. ಇಲ್ಲಿನ ಪ್ರತಿ ಶಾಸಕರ ಸರಾಸರಿ ಆಸ್ತಿ 65.07 ಕೋಟಿ ರೂ. ಇದೆ.

ತ್ರಿಪುರಾದಲ್ಲಿ ಶಾಸಕರ ಸರಾಸರಿ ಆಸ್ತಿ ಅತ್ಯಂತ ಕಡಿಮೆ

ಕರ್ನಾಟಕದಲ್ಲಿ ಈ ಪ್ರಮಾಣ 63.58 ಕೋಟಿ ರೂ. ಮಹಾರಾಷ್ಟ್ರದಲ್ಲಿ ಇದು 43.44 ಕೋಟಿ ರೂ. ತ್ರಿಪುರಾದಲ್ಲಿ ಅತ್ಯಂತ ಕಡಿಮೆ ಸರಾಸರಿ ಸಂಪತ್ತು ಇದೆ. ಇಲ್ಲಿನ ಪ್ರತಿ ಶಾಸಕರ ಸರಾಸರಿ ಆಸ್ತಿ 1.51 ಕೋಟಿ ರೂ. 4,092 ಶಾಸಕರ ಒಟ್ಟು ಆಸ್ತಿ 73,348 ಕೋಟಿ ರೂ. ಇದು 2023–24ನೇ ಸಾಲಿನ ನಾಗಾಲ್ಯಾಂಡ್, ತ್ರಿಪುರ ಮತ್ತು ಮೇಘಾಲಯದ ಒಟ್ಟು ವಾರ್ಷಿಕ ಬಜೆಟ್‌ಗಿಂತ ಹೆಚ್ಚಾಗಿದೆ.

ಬಿಜೆಪಿ ಶಾಸಕರು ಅತಿ ಹೆಚ್ಚು ಆಸ್ತಿ ಹೊಂದಿದ್ದಾರೆ

ಪ್ರಮುಖ ರಾಜಕೀಯ ಪಕ್ಷಗಳಲ್ಲಿ ಬಿಜೆಪಿ ಶಾಸಕರು ಅತಿ ಹೆಚ್ಚು ಆಸ್ತಿ ಹೊಂದಿದ್ದಾರೆ. ಅವರ ಬಳಿ 26,270 ಕೋಟಿ ರೂಪಾಯಿ ಮೌಲ್ಯದ ಆಸ್ತಿ ಇದೆ. ಕಾಂಗ್ರೆಸ್ ಶಾಸಕರು 17,357 ಕೋಟಿ ರೂಪಾಯಿ ಆಸ್ತಿ ಹೊಂದಿದ್ದಾರೆ. ಟಿಡಿಪಿ ಶಾಸಕರು 9,108 ಕೋಟಿ ರೂಪಾಯಿ ಮೌಲ್ಯದ ಆಸ್ತಿ ಹೊಂದಿದ್ದಾರೆ. ಶಿವಸೇನಾ ಶಾಸಕರು 1,758 ಕೋಟಿ ರೂಪಾಯಿ ಮೌಲ್ಯದ ಆಸ್ತಿ ಹೊಂದಿದ್ದಾರೆ. ಎಎಪಿ ಶಾಸಕರು ಸರಾಸರಿ ಪ್ರತಿ ಶಾಸಕರ ಆಸ್ತಿ 7.33 ಕೋಟಿ ರೂ. ಇದೆ.

# ರಾಮನಗರ ಹೆಸರು ಬದಲಾಯಿಸುವುದು ಶತಸಿದ್ಧ, ನಮಗೂ ಕಾನೂನು ಗೊತ್ತಿದೆ



**ಬೆಂಗಳೂರು/ದೆಹಲಿ:** "ರಾಮನಗರ ಜಿಲ್ಲೆಯ ಹೆಸರನ್ನು 'ಬೆಂಗಳೂರು ದಕ್ಷಿಣ' ಎಂದು ಬದಲಾವಣೆ ಮಾಡುವುದು ಶತಸಿದ್ಧ. ಹೇಗೆ ಹೆಸರು ಬದಲಾಯಿಸಬೇಕು ಎಂಬುದು ನಮಗೆ ಗೊತ್ತಿದೆ" ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಖಾರವಾಗಿ ಪ್ರತಿಕ್ರಿಯಿಸಿದ್ದಾರೆ.

ಕೇಂದ್ರ ಸರಕಾರ ರಾಮನಗರ ಜಿಲ್ಲೆಯ ಹೆಸರು ಬದಲಾವಣೆ ಪ್ರಸ್ತಾಪವನ್ನು ತಡೆಹಿಡಿದಿರುವ ಕುರಿತು ಪ್ರತಿಕ್ರಿಯಿಸಿದ ಅವರು, "ಜಿಲ್ಲೆಯ ಹೆಸರು ಬದಲಾವಣೆ ರಾಜ್ಯ ಸರಕಾರಕ್ಕೆ ಸಂಬಂಧಪಟ್ಟ ವಿಚಾರ. ನಮಗೂ ಕಾನೂನು ಗೊತ್ತಿದೆ" ಎಂದರು.

"ಇಲ್ಲಿ ಒಂದಷ್ಟು ಸಚಿವರು ಇದ್ದಾರಲ್ಲಾ, ಅವರುಗಳು ಕೇಂದ್ರ ಗೃಹ ಸಚಿವರಿಗೆ ಹೇಳಿ ಹೆಸರು ಬದಲಾವಣೆ ಬೇಡ ಎಂದು ಬರೆಸಿದ್ದಾರೆ" ಎಂದರು. ಇದಕ್ಕೆ ಅವರು ಕುಮಾರಸ್ವಾಮಿಯೇ ಎಂದು ಮಾಧ್ಯಮದವರು ಮರುಪ್ರಶ್ನಿಸಿದಾಗ, 'ಇನ್ಯಾರು' ಎಂದು ಹೆಸರು ಹೇಳದೆ ಛೇಡಿಸಿದರು.

"ಈ ವಿಚಾರವಾಗಿ ಎಲ್ಲಾ ಇಲಾಖೆಗಳು ಸಕಾರಾತ್ಮಕವಾಗಿ ಸ್ಪಂದಿಸಿದ್ದವು. ಹಾಗೆ ನೋಡಿದರೆ ಜಿಲ್ಲೆಯ ಹೆಸರು ಬದಲಾವಣೆಗೆ ಕೇಂದ್ರ ಸರಕಾರದ ಅನುಮತಿಯ ಅವಶ್ಯಕತೆಯೇ ಇಲ್ಲ" ಎಂದು ಡಿಕೆಶಿ ತಿಳಿಸಿದರು.

"ಜನರ ಹೆಸರು ಬದಲಾವಣೆ ಮಾಡುವಾಗ ಒಂದು ಅಫಿಡವಿಟ್ ಮಾಡಿ ಬದಲಾಯಿಸಬಹುದಾದರೆ ಒಂದು ಜಿಲ್ಲೆಯ ಹೆಸರು ಬದಲಾಯಿಸುವುದು ಕಷ್ಟವೇ. ಅಷ್ಟಕ್ಕೂ ಇದು ರಾಜ್ಯದ ವಿಷಯ. ದ್ವೇಷದ ರಾಜಕಾರಣ ಹೇಗೆ ನಡೆಯುತ್ತಿದೆ ಮತ್ತು ರಾಮನಗರ ಜನತೆಯ ಮೇಲೆ ನಡೆಸುತ್ತಿರುವ ಗದಾಪ್ರಹಾರಕ್ಕೆ ಇವೆಲ್ಲವೂ ಸಾಕ್ಷಿ" ಎಂದರು.

ಎಐಸಿಸಿ ಕಚೇರಿಗೆ ಭೇಟಿ ನೀಡಿರುವ ಕುರಿತ ಪ್ರಶ್ನೆಗೆ, "ದೆಹಲಿಗೆ ಬಂದಾಗಲೆಲ್ಲಾ ಪಕ್ಷದ ದೇವಾಲಯ ಎಐಸಿಸಿ ಕಚೇರಿಗೆ ಭೇಟಿ ನೀಡುತ್ತೇನೆ" ಎಂದು ಹೇಳಿದರು.

ಮುಂದುವರೆದು ದೆಹಲಿ ಭೇಟಿ ಬಗ್ಗೆ ವಿವರಿಸುತ್ತಾ, "ರಾಹುಲ್ ಗಾಂಧಿ ಅವರು ಹಾಗೂ ಪಕ್ಷದ ಪ್ರಧಾನ ಕಾರ್ಯದರ್ಶಿಗಳ ಜೊತೆ ಮಾತನಾಡಿ, ನೂತನ ಕಾಂಗ್ರೆಸ್ ಭವನದ ಭೂಮಿ ಪೂಜೆಗೆ ಸಮಯ ನೀಡಲು ಮನವಿ ಮಾಡಿದ್ದೇನೆ" ಎಂದು ತಿಳಿಸಿದರು.

"ರಾಜ್ಯದಲ್ಲಿ 100 ಕಾಂಗ್ರೆಸ್ ಪಕ್ಷದ ಕಚೇರಿಗೆ ಕಟ್ಟಡ ಕಟ್ಟಲು ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ. ಕಾಂಗ್ರೆಸ್ ಹೈಕಮಾಂಡ್ ಸಮಯ ನೀಡಿದಾಗ ಭೂಮಿಪೂಜೆ ನಡೆಸಲಾಗುವುದು" ಎಂದು ಡಿಕೆಶಿ ಇದೇ ವೇಳೆ ಹೇಳಿದರು.

ರಾಜ್ಯದಲ್ಲಿ ಪಕ್ಷದ ಬೆಳವಣಿಗೆ ವಿಚಾರವಾಗಿ ಹೈಕಮಾಂಡ್ ಬಳಿ ಚರ್ಚೆ ನಡೆಸಿದ್ದೀರಾ ಎಂದು ಕೇಳಿದಾಗ, "ಜಿಲ್ಲಾ ಉಸ್ತುವಾರಿ ಸಚಿವರ ನೇತೃತ್ವದಲ್ಲಿ ಕಾರ್ಯಕರ್ತರ ಸಭೆ ನಡೆಸುವಂತೆ ಸೂಚನೆ ನೀಡಲಾಗಿದೆ. ವಿಧಾನಸಭೆ ಅಧಿವೇಶನ ಮುಗಿದ ನಂತರ ಎಲ್ಲಾ ಕ್ಷೇತ್ರಗಳಲ್ಲೂ ಸಭೆ ನಡೆಸಲಾಗುವುದು" ಎಂದರು.

"ರಾಜ್ಯದ ಎಲ್ಲಾ ಬೆಳವಣಿಗೆಗಳು ಹೈಕಮಾಂಡ್ ಗಮನದಲ್ಲಿದೆ. ಕಾರ್ಯಕರ್ತರ ಸಭೆ ವಿಚಾರವನ್ನು ತಿಳಿಸಲಾಗಿದೆ. ಸಭೆಯ ವರದಿ ನೀಡಬೇಕು ಎಂದು ಸೂಚನೆ ನೀಡಿದ್ದಾರೆ" ಎಂದರು.

ಅಧಿಕಾರ ಹಸ್ತಾಂತರ ವಿಚಾರವಾಗಿ ಚರ್ಚೆ ನಡೆಸಲಾಯಿತೇ ಎಂಬುದಕ್ಕೆ, "ಅಂಥದ್ದು ಯಾವುದೂ ಇಲ್ಲ. ನಾವು ಇದರ ಬಗ್ಗೆ ಯಾವ ವಿಚಾರವನ್ನೂ ಮಾತನಾಡಲು ಹೋಗುವುದಿಲ್ಲ. ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸಿ ಎಂದಷ್ಟೇ ಹೈಕಮಾಂಡ್ ಹೇಳಿದೆ" ಎಂದು ತಿಳಿಸಿದರು.

# ವಿಧಾನಸಭೆಯಲ್ಲಿ 13,823.47 ಕೋಟಿ ರೂ. ಮೊತ್ತದ ಪೂರಕ ಅಂದಾಜು ಮಂಡನೆ: ಯಾವುದಕ್ಕೆ ಎಷ್ಟು ಹಣ

**ಬೆಂಗಳೂರು:** 2024–25ರ ಸಾಲಿಗೆ 13,823.47 ಕೋಟಿ ರೂ. ಮೊತ್ತದ ಅಂತಿಮ ಪೂರಕ ಅಂದಾಜನ್ನು ವಿಧಾನಸಭೆಯಲ್ಲಿ ಮಂಡಿಸಲಾಗಿದೆ.

13,823.47 ಕೋಟಿ ರೂ.ಗಳಲ್ಲಿ 71.98 ಕೋಟಿ ರೂ.ಗಳು ಪ್ರಭುತ್ವ ವೆಚ್ಚ ಮತ್ತು 13,751.49 ಕೋಟಿ ರೂ. ಪುರಸ್ಕೃತ ವೆಚ್ಚ ಸೇರಿರುತ್ತದೆ. ಇದರಲ್ಲಿ ಮೀಸಲು ನಿಧಿಯಿಂದ ಭರಿಸಲಾಗುವ 1512.21 ಕೋಟಿ ರೂ. ಸಹ ಪುರಸ್ಕೃತವಾಗಬೇಕಿದೆ.

ಸಂಚಿತ ನಿಧಿಯಿಂದ ಹೊರಹೋಗುವ ನಿವ್ವಳ ಮೊತ್ತ 12,311.26 ಕೋಟಿ ರೂ., 1187.73 ಕೋಟಿ ರೂ. ಕೇಂದ್ರ ಸಹಾಯಕ್ಕೆ ಸಂಬಂಧಿಸಿವೆ.

ಪೂರಕ ಅಂದಾಜಿನಲ್ಲಿ ಕೃಷಿ ಮತ್ತು ತೋಟಗಾರಿಕೆ ಇಲಾಖೆ ರಾಜಸ್ವ ಖಾತೆಗೆ 475.98 ಕೋಟಿ ರೂ. ಹಾಗೂ ಬಂಡವಾಳ ಖಾತೆಗೆ 15 ಕೋಟಿ ರೂ., ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆಗೆ ರಾಜಸ್ವ ಖಾತೆಗೆ 257.20 ಕೋಟಿ ರೂ. ಹಾಗೂ ಬಂಡವಾಳ ಖಾತೆಗೆ 10.69 ಕೋಟಿ ರೂ., ಆರ್ಥಿಕ ಇಲಾಖೆ ರಾಜಸ್ವ ಖಾತೆಗೆ 27.55 ಕೋಟಿ ರೂ. ಹಾಗೂ ಬಂಡವಾಳ ಖಾತೆಗೆ 766.85 ಕೋಟಿ ರೂ., ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆಯ ರಾಜಸ್ವ ಖಾತೆಗೆ 52.40 ಕೋಟಿ ರೂ., ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆಗೆ ರಾಜಸ್ವ ಖಾತೆಗೆ 71.71 ಕೋಟಿ ರೂ. ಮಂಜೂರು ಮಾಡಲು ಕೋರಲಾಗಿದೆ.

ಸಮಾಜ ಕಲ್ಯಾಣ ಇಲಾಖೆಗೆ ರಾಜಸ್ವ ಖಾತೆಗೆ 447.79 ಕೋಟಿ ರೂ. ಹಾಗೂ ಬಂಡವಾಳ ಖಾತೆಗೆ 113.99 ಕೋಟಿ ರೂ., ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ರಾಜಸ್ವ ಖಾತೆಗೆ 57.84 ಕೋಟಿ ರೂ., ವಾರ್ತಾ, ಪ್ರವಾಸೋದ್ಯಮ ಮತ್ತು ಯುವ ಜನ ಸೇವೆಗಳು ಇಲಾಖೆ ರಾಜಸ್ವ ಖಾತೆಗೆ 157.21 ಕೋಟಿ ರೂ., ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಗೆ 36.01 ಲಕ್ಷ ರೂ., ಕಂದಾಯ ಇಲಾಖೆ ರಾಜಸ್ವ ಖಾತೆಗೆ 282.84 ಕೋಟಿ ರೂ. ಹಾಗೂ ಬಂಡವಾಳ ಖಾತೆಗೆ 96 ಕೋಟಿ ರೂ., ಶಿಕ್ಷಣ ಇಲಾಖೆ ರಾಜಸ್ವ ಖಾತೆಗೆ 29.12 ಕೋಟಿ ರೂ. ಪೂರಕ ಅಂದಾಜು ಮಾಡಲಾಗಿದೆ.

# ಗಗನಯಾತ್ರಿ ಸುನೀತಾ ವಿಲಿಯಮ್ಸ್ ಬದುಕು ಎಲ್ಲರಿಗೂ ಮಾದರಿ


ಒಂದು ವಾರ ಬಾಹ್ಯಾಕಾಶದ ಸಂಶೋಧನೆಗಾಗಿ ತೆರಳಿದದ್ದ ಸುನೀತಾ ವಿಲಿಯಮ್ಸ್ ಅವರು ತಾಂತ್ರಿಕ ಸಮಸ್ಯೆಯಿಂದ 9 ತಿಂಗಳ ನಂತರ ಭೂಮಿಗೆ ಹಿಂತಿರುಗಿದ್ದಾರೆ. ನಿಗದಿತ ಸಮಯದೊಳಗೆ ವಾಪಸ್? ಬರಲು ಸಾಧ್ಯವಾಗಲಿಲ್ಲ ಎಂಬುದಕ್ಕೆ ನಿರುತ್ಸಾಹಗೊಳ್ಳದೇ ದೈಹಿಕವಾಗಿ ಹಾಗೂ ಮಾನಸಿಕವಾಗಿ ಮತ್ತಷ್ಟು ಸಿದ್ಧರಾದ ಸುನೀತಾ ವಿಲಿಯಮ್ಸ್ ಅವರ ಶೌರ್ಯಕ್ಕೆ ಅಭೂತಪೂರ್ವ ಮೆಚ್ಚುಗೆ ವ್ಯಕ್ತವಾಗಿಯಿತು.

ನಾಸಾ ಗಗನಯಾತ್ರಿಗಳಾದ ಸುನೀತಾ ವಿಲಿಯಮ್ಸ್ ಹಾಗೂ ಬುಚ್ ವಿಲ್ಮೋರ್ ಒಂಬತ್ತು ತಿಂಗಳ ನಂತರ, ಬುಧವಾರ (ಮಾ.19 ರಂದು) ಬಾಹ್ಯಾಕಾಶದಿಂದ ಸುರಕ್ಷಿತವಾಗಿ ಭೂಮಿಗಿಳಿದರು. ಇವರಿಬ್ಬರೂ ಕಳೆದ ವರ್ಷ ಜೂನ್‌ನಲ್ಲಿ ಬಾಹ್ಯಾಕಾಶಕ್ಕೆ ತೆರಳಿದ್ದರು. ತಾಂತ್ರಿಕ ತೊಂದರೆ, ವೇಳಾಪಟ್ಟಿಯಲ್ಲಿನ ಬದಲಾವಣೆಗಳಿಂದ ವಾಪಸ್? ಬರಲು ತುಂಬಾ ವಿಳಂಬವಾಗಿತ್ತು. ತಾಂತ್ರಿಕ ಸಮಸ್ಯೆಯ ಹಿನ್ನೆಲೆ ಒಂದು ವಾರದ ಈ ಕಾರ್ಯಾಚರಣೆಗೆ ಬರೊಬ್ಬರಿ ಒಂಬತ್ತು ತಿಂಗಳಿಗೆ ವಿಸ್ತರಣೆಯಾಗಿತ್ತು. ಜೂನ್ 2024ರಿಂದ ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲಿ (ಖಖಖ) ಸಿಲುಕಿದ್ದ ಓಂಖಂ ಗಗನಯಾತ್ರಿಗಳಾದ 59 ವರ್ಷದ ಸುನೀತಾ ವಿಲಿಯಮ್ಸ್ ಮತ್ತು 62 ವರ್ಷದ ಬುಚ್ ವಿಲ್ಮೋರ್ ಅವರೊಂದಿಗೆ ನಿಕ್ ಹೇಗ್, ಅಲೆಕ್ಸಾಂಡರ್ ಗೋರ್ಬುನೋವ್ ಅವರು ಬಾಹ್ಯಾಕಾಶದಿಂದ ಧರೆಗೆ ಮರಳಿದ್ದಾರೆ.

ಸವಾಲುಗಳನ್ನು ಸಹ ಸಕಾರಾತ್ಮಕವಾಗಿ ಎದುರಿಸಬಹುದು ಎಂಬುದನ್ನು ತಮ್ಮ ದೀರ್ಘ ಬಾಹ್ಯಾಕಾಶ ಪ್ರಯಾಣದ ಮೂಲಕ ಸಾಬೀತುಪಡಿಸಿದ ಸುನೀತಾ ಅವರ ಪ್ರಯಾಣವು ಅನೇಕರಿಗೆ ಸ್ಫೂರ್ತಿಯಾಗಿದೆ. ಸುಮಾರು 286 ದಿನಗಳ ನಂತರ ಭೂಮಿಗೆ ಬಂದಿಳಿದ ಈ ಗಗನಯಾತ್ರಿ ಸುನೀತಾ ವಿಲಿಯಮ್ಸ್ ಅವರಿಂದ ನಾವು ಕಲಿಯಬಹುದಾದ ಅನೇಕ ವಿಷಯಗಳಿವೆ.

ದೊಡ್ಡ ಕನಸು ಕಾಣು.. ಕಷ್ಟಪಟ್ಟು ಕೆಲಸ ಮಾಡು.. ಎಷ್ಟೇ ಬೆಳೆದರೂ ವಿನಮ್ರನಾಗಿರು.. ಸಕಾರಾತ್ಮಕ ಜನರೊಂದಿಗೆ ಸ್ನೇಹ ಬೆಳೆಸು.. ಎಂಬುವುದು ಸುನೀತಾ ಅವರು ನಂಬಿದ್ದ ತತ್ವಗಳಿವು. ಅವರು ತಮ್ಮ ಜೀವನದ ಮೂಲಕ ಇದನ್ನೆಲ್ಲವನ್ನು ಸಾಬೀತುಪಡಿಸಿದ್ದಾರೆ. ಹಿಂದೆ ಪುರುಷರೇ ಪ್ರಾಬಲ್ಯ ಹೊಂದಿದ್ದ ಸಮಯದಲ್ಲಿ ಸುನೀತಾ ಅವರು ಬಾಹ್ಯಾಕಾಶದಲ್ಲಿ ಬಹುದೊಡ್ಡ ಸಾಧನೆಯ ಕನಸು ಕಂಡಿದ್ದರು.

ಸುನೀತಾ ಅವರು ಕಳೆದ ವರ್ಷ ಜೂನ್‌ನಲ್ಲಿ ಒಂದು ವಾರದ ಬಾಹ್ಯಾಕಾಶ ಯಾತ್ರೆಗಾಗಿ ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ (ಐಎಸ್‌ಎಸ್) ತೆರಳಿದರು. ಬಾಹ್ಯಾಕಾಶ ನೌಕೆಯಲ್ಲಿ ತಾಂತ್ರಿಕ ದೋಷ ಉಂಟಾದ ನಂತರ ಅವರು ಒಂಬತ್ತು ತಿಂಗಳು ಅಲ್ಲಿಯೇ ಇರಬೇಕಾಯಿತು. ಆದ್ರೆ, ಅವರು ಮಾನಸಿಕವಾಗಿ ಚಿಂತಿತರಾಗದೇ, ಸಂತೋಷದಿಂದಲೇ ಬಾಹ್ಯಾಕಾಶ



ಸಂಶೋಧನೆ ಮುಂದುವರಿಸಿದರು. ಗಗನಯಾತ್ರಿಗಳು ಬಾಹ್ಯಾಕಾಶದಲ್ಲಿ ಎಷ್ಟು ದಿನಗಳವರೆಗೆ ಇರುತ್ತಾರೋ ಅಷ್ಟು ದಿನಗಳವರೆಗೆ ಭೂಮಿಯ ಮೇಲೆ ಸೂಕ್ತ ತರಬೇತಿಯನ್ನು ಪಡೆದಿರುತ್ತಾರೆ. ಪ್ರಯಾಣದಲ್ಲಿ ಬೇಕಾದ ಆಹಾರ ಮತ್ತು ಇತರ ವಸ್ತುಗಳನ್ನು ಅವರು ತಮ್ಮೊಂದಿಗೆ ತೆಗೆದುಕೊಂಡು ಹೋಗುತ್ತಾರೆ. ಅನಿರೀಕ್ಷಿತವಾಗಿ ತಿಂಗಳುಗಟ್ಟಲೆ ಅವಧಿ ವಿಸ್ತರಣೆಯಾದರೆ, ಆಹಾರ ಲಭ್ಯತೆಯು ಕೂಡ ಕಷ್ಟವಾಗುತ್ತದೆ.


ಜೀವನಪರ್ಯಂತ ವಿದ್ಯಾರ್ಥಿಯಾಗಿರುತ್ತೇನೆ: ಗಗನಯಾತ್ರಿಯಾಗಿ ಹೆಚ್ಚು ಅನುಭವ ಹೊಂದಿರುವ ಸುನೀತಾ ಅವರಿಗೆ ಬಾಹ್ಯಾಕಾಶ ಕ್ಷೇತ್ರದ ಇನ್ನೂ ಹಲವು ವಿಷಯಗಳನ್ನು ಕಲಿಯುವ ಬಗ್ಗೆ ಹೆಚ್ಚಿನ ಆಸಕ್ತಿಹೊಂದಿರುವ ಶ್ರೇಷ್ಠ ವಿದ್ಯಾರ್ಥಿಯಂತೆ ಕಾಣಿತ್ತಾರೆ. ಅವರು ಎಷ್ಟೇ ಬೆಳೆದರೂ ವಿನಮ್ರಳಾಗಿ ಉಳಿಯುವಂತಹ ತತ್ವದಲ್ಲಿ ನಂಬಿಕೆ ಇಟ್ಟಿದ್ದಾರೆ. ಈ ತತ್ವವನ್ನು ತನ್ನ ವೃತ್ತಿಜೀವನದಲ್ಲಿ ಅಕ್ಷರಶಃ ಅಳವಡಿಸಿಕೊಂಡಿದ್ದಾರೆ. ನಾನು ಜೀವನಪರ್ಯಂತ ವಿದ್ಯಾರ್ಥಿಯಾಗಿಯೇ ಇರಲು ಬಯಸುತ್ತೇನೆ ಎಂದು ಹಲವು ಬಾರಿ ಸುನೀತಾ ಹೇಳಿದ್ದಾರೆ. ಸುನೀತಾ ತಮ್ಮ ಒಂಬತ್ತು ತಿಂಗಳ ಸುದೀರ್ಘ ಬಾಹ್ಯಾಕಾಶ ಪ್ರಯಾಣದಲ್ಲಿ ಅದನ್ನೇ ಸಾಬೀತುಪಡಿಸಿದ್ದಾರೆ.

ಸುನೀತಾ ಅವರು ನಾಸಾ ತಮಗೆ ವಹಿಸಿದ್ದ ಅನೇಕ ಕಾರ್ಯಗಳನ್ನು ಸಮರ್ಥವಾಗಿ ನಿರ್ವಹಿಸಿದರು. ಖಖಖನ ನಿರ್ವಹಣೆಯನ್ನು ನೋಡಿಕೊಳ್ಳುವುದು, ಅಗತ್ಯವಿದ್ದರೆ ಯಾವುದೇ ರಿಪೇರಿ ಮಾಡುವುದು, ಬಾಹ್ಯಾಕಾಶದಲ್ಲಿ ಕೃಷಿ, ತೂಕವಿಲ್ಲದ ಜಾಗದಲ್ಲಿ ದೈಹಿಕ ಆರೋಗ್ಯ ಸೇರಿದಂತೆ ಸುಮಾರು 150 ವಿಷಯಗಳ ಕುರಿತು ಪ್ರಯೋಗಗಳು ಮತ್ತು ಸಂಶೋಧನೆಗಳನ್ನು ನಡೆಸಿದರು. ಇದರಿಂದಾಗಿ ಸುನೀತಾ ತಮ್ಮ ವೃತ್ತಿ ಬೆಳವಣಿಗೆಗೆ ಅಗತ್ಯವಾದ ಅನೇಕ ವಿಷಯಗಳನ್ನು ಕಲಿತರು. ಅನೇಕ ಜನರಿಗೆ ವೃತ್ತಿ ಮಾರ್ಗದರ್ಶನವನ್ನು ನೀಡಿದರು.

ನೀವು ಯಾವುದೇ ಕೆಲಸವನ್ನು ಹೊಂದಿದ್ದರೂ, ನೀವು ಒಂದು ತಂಡದೊಂದಿಗೆ ಕೆಲಸ ಮಾಡಬೇಕಾಗುತ್ತದೆ. ನಾವು ಕೆಲಸ ಮಾಡುವ ತಂಡದೊಂದಿಗೆ ಸಂಪರ್ಕ ಹೊಂದಿದಾಗ ಮಾತ್ರ ನಮ್ಮ ಕೆಲಸವನ್ನು ಪೂರ್ಣಗೊಳಿಸಬಹುದು. ಇದಕ್ಕೆ ಉತ್ತಮ ಸಂವಹನ ಮುಖ್ಯ ಎಂದು ಸುನೀತಾ ತಿಳಿಸುತ್ತಾರೆ. ಅವರು ತನ್ನ ಬಾಹ್ಯಾಕಾಶ ಹಾರಾಟದಲ್ಲೂ ಇದನ್ನು ಸಾಬೀತುಪಡಿಸಿದರು. ಬಾಹ್ಯಾಕಾಶದಲ್ಲಿ ಈ ಒಂಬತ್ತು ತಿಂಗಳುಗಳ ಕಾಲ, ಸುನೀತಾ ತಮ್ಮ ಸಹ ಗಗನಯಾತ್ರಿ ವಿಲ್ಮೋರ್ ಮತ್ತು ಇತರ ಗಗನಯಾತ್ರಿಗಳೊಂದಿಗೆ ಬಾಹ್ಯಾಕಾಶ ನಿಲ್ದಾಣದ ದುರಸ್ತಿ, ಇತರ ಅಧ್ಯಯನಗಳು ಹಾಗೂ ಸಂಬಂಧಿತ ವಿಷಯಗಳ ಕುರಿತು ಸಂಶೋಧನೆ ನಡೆಸಿದರು.

ವೈಯಕ್ತಿಕ ಮತ್ತು ವೃತ್ತಿಪರ ಯಶಸ್ಸಿಗೆ ಆರೋಗ್ಯವಾಗಿರುವುದು ಮುಖ್ಯವಾಗಿದೆ. ಅದಕ್ಕಾಗಿಯೇ ಸುನೀತಾ ಅನಿರೀಕ್ಷಿತವಾಗಿ ತಿಂಗಳುಗಟ್ಟಲೆ ಬಾಹ್ಯಾಕಾಶದಲ್ಲಿ ಸಿಕ್ಕಿಹಾಕಿಕೊಂಡರೂ ಆದರೆ, ತಮ್ಮ ಆರೋಗ್ಯವನ್ನು ನಿರ್ಲಕ್ಷಿಸಲಿಲ್ಲ. ನಾಸಾ ಸಾಂದರ್ಭಿಕವಾಗಿ ಪೋಸ್ಟ್ ಮಾಡುವ ಫೋಟೋಗಳಲ್ಲಿ ಅವರು ಕುಂಟುತ್ತಿರುವಂತೆ ಕಂಡುಬಂದಾಗ ಅನೇಕರು ಅವರ ಆರೋಗ್ಯದ ಬಗ್ಗೆ ಚಿಂತಿತರಾಗಿದ್ದರು. ಆದರೆ, ತಾನು ಬಾಹ್ಯಾಕಾಶದಲ್ಲಿ ಸಂತೋಷವಾಗಿದ್ದೇನೆ ಮತ್ತು ತನ್ನ ವ್ಯಾಯಾಮ ದಿನಚರಿಯನ್ನು ಮುಂದುವರಿಸುತ್ತಿದ್ದೇನೆ ಎಂದು ಸುನೀತಾ ತಿಳಿಸಿದ್ದರು. ಬೆಳಿಗ್ಗೆ 6.30ಕ್ಕೆ ದಿನಚರಿ ಆರಂಭಿಸುತ್ತಿದ್ದ ಸುನೀತಾ ಅವರು, ಸುಮಾರು ಎರಡು ಗಂಟೆಗಳ ಕಾಲ ವ್ಯಾಯಾಮ ಮಾಡುತ್ತಿದ್ದರು ಎಂದು ಸುನೀತಾ ತಿಳಿಸಿದ್ದರು.

# ಐಪಿಎಲ್ ಉದ್ಘಾಟನೆಗೆ ಹಾಜರಿ ಹಾಕಲಿದೆ ಇಡೀ ಬಾಲಿವುಡ್




ಮಾರ್ಚ್ 22ರಂದು ಕೋಲ್ಕತ್ತಾದ ಇಡೆನ್ ಗಾರ್ಡನ್‌ನಲ್ಲಿ ಖಕಐ 2025ರ ಅದ್ಧೂರಿ ಉದ್ಘಾಟನಾ ಸಮಾರಂಭ ನಡೆಯಲಿದೆ. ಶಾರುಖ್ ಖಾನ್, ಸಲ್ಮಾನ್ ಖಾನ್, ಪ್ರಿಯಾಂಕಾ ಚೋಪ್ರಾ ಮುಂತಾದ ಬಾಲಿವುಡ್ ಸ್ಟಾರ್ಸ್ ಮತ್ತು ಅಮೇರಿಕನ್ ಪಾಪ್ ಬ್ಯಾಂಡ್ ಔಟಿಜಖಜರಿಣಥಟಟಿಥಿ ಭಾಗವಹಿಸಲಿದ್ದಾರೆ. ಮೊದಲ ಪಂದ್ಯ ಕೋಲ್ಕತ್ತಾ ನೈಟ್ ರೈಡರ್ಸ್ ಮತ್ತು ಖಅಃ ನಡುವೆ ನಡೆಯಲಿದೆ.

ಕೋಲ್ಕತ್ತ ಇಡನ್ ಗಾರ್ಡನ್‌ನಲ್ಲಿ ಮಾರ್ಚ್ 22ರಂದು ಐಪಿಎಲ್ 2025ರ ಉದ್ಘಾಟನಾ ಸಮಾರಂಭ ನಡೆಯಲಿದೆ. ಅದ್ದೂರಿಯಾಗಿ ಈ ಬಾರಿಯ ಐಪಿಎಲ್ ಆಯೋಜಿಸಲು ಸಿದ್ಧತೆ ನಡೆದಿದೆ. ಈ ಬಾರಿಯ ಐಪಿಎಲ್ ಉದ್ಘಾಟನಾ ಸಮಾರಂಭ ಹಲವು ಸ್ಟಾರ್‌ಗಳ ಸಮಾಗಮಕ್ಕೆ ಸಾಕ್ಷಿ ಆಗಲಿದೆ. ಶಾರುಖ್ ಖಾನ್, ಪ್ರಿಯಾಂಕಾ ಚೋಪ್ರಾ, ಸಲ್ಮಾನ್ ಖಾನ್, ವಿಕ್ಕಿ ಕೌಶಲ್, ಶ್ರದ್ಧಾ ಕಪೂರ್, ಸಂಜಯ್ ದತ್ (ಸೇರಿದಂತೆ ಅನೇಕರು ಈ ಕಾರ್ಯಕ್ರಮದಲ್ಲಿ ಭಾಗಿ ಆಗುವ ಸಾಧ್ಯತೆ ಇದೆ. ವೇದಿಕೆ ಮೇಲೆ ಅಮೆರಿಕದ ಪಾಪ್ ಬ್ಯಾಂಡ್ ಒನ್ ರಿಪಬ್ಲಿಕ್ ಪರ್ಫಾರ್ಮೆನ್ಸ್ ಮಾಡುವ ಸಾಧ್ಯತೆ ಇದೆ ಎನ್ನಲಾಗುತ್ತಿದೆ.

ಐಪಿಎಲ್ ಮೊದಲ ಪಂದ್ಯದಲ್ಲಿ ಕೋಲ್ಕತ್ತ ನೈಟ್ ರೈಡರ್ಸ್ ಹಾಗೂ ಆರ್‌ಸಿಬಿ ಮುಖಾಮುಖಿ ಆಗಲಿವೆ. ಕೋಲ್ಕತ್ತ ತಂಡದ ಮಾಲೀಕ ಶಾರುಖ್ ಖಾನ್ ಅವರು ಇದರಲ್ಲಿ ಭಾಗಿ ಆಗೋದು ಖಚಿತವಾಗಿದೆ. ಸಲ್ಮಾನ್ ಖಾನ್ ಅವರು ತಮ್ಮ ನಟನೆಯ 'ಸಿಕಂದರ್' ಚಿತ್ರವನ್ನು ಪ್ರಚಾರ ಮಾಡುವ ಸಾಧ್ಯತೆ ಇದೆ. ಹೀಗಾಗಿ, ಐಪಿಎಲ್ ವೇದಿಕೆಯ ರಂಗು ಮತ್ತಷ್ಟು ಹೆಚ್ಚಲಿದೆ.

ಇನ್ನು, ಅರಿಜಿತ್ ಸಿಂಗ್, ಶ್ರೇಯಾ ಘೋಶಾಲ್, ಕರಣ್ ಔಜ್ಲಾ, ದಿಶಾ ಪಟಾಣಿ, ಶ್ರದ್ಧಾ ಕಪೂರ್, ವರುಣ್ ಧವನ್ ಪರ್ಫಾರ್ಮೆನ್ಸ್ ಮಾಡೋ ಸಾಧ್ಯತೆ ಇದೆ. 'ಟೆಲ್ ಮಿ' ಸಾಂಗ್‌ಗಾಗಿ ಕರಣ್ ಔಜ್ಲಾ ಹಾಗೂ ದಿಶಾಪಟಾಣಿ ಅವರು ಒನ್ ರಿಪಬ್ಲಿಕ್ ಬ್ಯಾಂಡ್ ಜೊತೆ ಕೊಲ್ಯಾಬರೇಟ್ ಆಗಿದ್ದರು. ಅವರು ಪರ್ಫಾರ್ಮ್ ಮಾಡಲಿದ್ದಾರೆ. ಇಷ್ಟಕ್ಕೆ ನಿಂತಿಲ್ಲ. ಕತ್ರಿನಾ ಕೈಫ್, ಅನನ್ಯಾ ಪಾಂಡೆ, ಮಾಧುರಿ ದೀಕ್ಷಿತ್, ಜಾನ್ವಿ ಕಪೂರ್, ಕರೀನಾ ಕಪೂರ್, ಪೂಜಾ ಹೆಗ್ಡೆ, ಆಯುಷ್ಮಾನ್ ಖುರಾನಾ, ಸಾರಾ ಅಲಿ ಖಾನ್ ಸೇರಿದಂತೆ ಬಾಲಿವುಡ್‌ನ ಅನೇಖ ಸ್ಟಾರ್‌ಗಳು ಇದರಲ್ಲಿ ಭಾಗಿ ಆಗಲಿದ್ದಾರೆ. ಈ ಬಾರಿಯ ಐಪಿಎಲ್‌ನಲ್ಲಿ ಒಟ್ಟೂ 23 ಕಡೆಗಳಲ್ಲಿ 74 ಮ್ಯಾಚ್‌ಗಳು ನಡೆಯಲಿದ್ದು, ಮೇ 25ರಂದು ಫಿನಾಲೆ ನಡೆಯಲಿದೆ.

ಆರ್‌ಸಿಬಿ, ಚೆನ್ನೈ ಸೂಪರ್ ಕಿಂಗ್ಸ್, ಗುಜರಾತ್ ಟೈಟನ್ಸ್, ಕೋಲ್ಕತ್ತಾ ನೈಟ್ ರೈಡರ್ಸ್, ಲಖನೋ ಸೂಪರ್ ಜಯಂಟ್ಸ್, ಮುಂಬೈ ಇಂಡಿಯನ್ಸ್, ಪಂಜಾಬ್ ಕಿಂಗ್ಸ್, ರಾಜಸ್ಥಾನ್ ರಾಯಲ್ಸ್, ಸನ್ ರೈಸರ್ಸ್ ಹೈದರಾಬಾದ್ ತಂಡಗಳು ಈ ಬಾರಿಯ ಐಪಿಎಲ್‌ನಲ್ಲಿ ಇರುವ ತಂಡಗಳಾಗಿವೆ.

# ಎಸ್‌ಎಸ್‌ಎಂಬಿ29 ಒಡಿಶಾ ಶೂಟಿಂಗ್ ಕಂಪ್ಲೀಟ್



ಬಾಹುಬಲಿ, ಆರ್‌ಆರ್‌ಆರ್ ಖ್ಯಾತಿಯ ಎಸ್. ಎಸ್. ರಾಜಮೌಳಿ ಅವರ ಮುಂದಿನ ಬಹುನಿರೀಕ್ಷಿತ ಚಿತ್ರ 'ಎಸ್‌ಎಸ್‌ಎಂಬಿ29'. ತಾತ್ಕಾಲಿಕ ಶೀರ್ಷಿಕೆಯ ಸಿನಿಮಾ ಸೆಟ್ ಬಳಿಯ ಫೋಟೋ-ವಿಡಿಯೋಗಳು ಆನ್‌ಲೈನ್‌ನಲ್ಲಿ ವೈರಲ್ ಆಗುತ್ತಿದ್ದು, ಸಿನಿಮಾ ಸುತ್ತಲಿನ ಉತ್ಸಾಹ ಹೆಚ್ಚಾಗಿದೆ. ಒಡಿಶಾದ ಕೊರಾಪುಟ್‌ನಲ್ಲಿ ನಡೆಯುತ್ತಿದ್ದ ಚಿತ್ರೀಕರಣ ಪೂರ್ಣಗೊಂಡಿದೆ. ಮಹೇಶ್ ಬಾಬು ಮತ್ತು ಪ್ರಿಯಾಂಕಾ ಚೋಪ್ರಾ ಅವರನ್ನೊಳಗೊಂಡ ಕೆಲ ತೆರೆಮರೆಯ ಫೋಟೋಗಳು ವೈರಲ್ ಆಗಿವೆ. ಇನ್ನು, ನಿರ್ದೇಶಕರು ಸ್ಥಳೀಯರೊಂದಿಗೆ ಸಮಯ ಕಳೆದಿದ್ದು, ಈ ಫೋಟೋಗಳೂ ಸಹ ಇಂಟರ್‌ನೆಟ್‌ನಲ್ಲಿ ಹರಿದಾಡುತ್ತಿವೆ.

**ಸೆಟ್‌ನಿಂದ ಫೋಟೋ ವೈರಲ್ :** ಚಿತ್ರದ ಪ್ರಮುಖ ಕಲಾವಿದರಾದ ಪ್ರಿಯಾಂಕಾ ಚೋಪ್ರಾ ಹಾಗೂ ಮಹೇಶ್ ಬಾಬು ಅಭಿಮಾನಿಗಳು ಹಾಗೂ ಪ್ರೊಡಕ್ಷನ್ ಟೀಮ್‌ನ ಸದಸ್ಯರೊಂದಿಗೆ ಮಾತನಾಡುತ್ತಿರುವ ಫೋಟೋಗಳು ವ್ಯಾಪಕವಾಗಿ ವೈರಲ್ ಆಗಿವೆ. ಪ್ರಿಯಾಂಕಾ ವೈಟ್ ಆ್ಯಂಡ್ ಬ್ಲ್ಯೂ ಔಟ್‌ಫಿಟ್‌ನಲ್ಲಿ ಕಂಡುಬಂದರೆ, ಮಹೇಶ್ ಬಾಬು ಟ್ರ್ಯಾಕ್ ಪ್ಯಾಂಟ್, ಕ್ಯಾಶುಯಲ್ ಬ್ಲ್ಯೂ ಟಿ-ಶರ್ಟ್ ಹಾಗೂ ರೆಡ್ ಕ್ಯಾಪ್ ಧರಿಸಿದ್ದರು.

**ನಿರ್ದೇಶಕರೊಂದಿಗೆ ಶಾಸಕ :** ಈ ವೈರಲ್ ಫೋಟೋಗಳು ಕಲಾವಿದರು ಮತ್ತು ಚಿತ್ರತಂಡದ ಸದಸ್ಯರ ನಡುವಿನ ಸೌಹಾರ್ದತೆಯನ್ನು ಪ್ರದರ್ಶಿಸಿವೆ. ಅಲ್ಲದೇ, ದೊಡ್ಡ ಪ್ರಮಾಣದಲ್ಲಿ ಸಿನಿಮಾ ನಿರ್ಮಾಣಗೊಳ್ಳುತ್ತಿದೆ ಎಂಬುದು ಸ್ಪಷ್ಟವಾಗಿದೆ. ಕೆಲ ಫೋಟೋಗಳಲ್ಲಿ ನಿರ್ದೇಶಕ ರಾಜಮೌಳಿ ಅವರನ್ನು ಒಡಿಶಾದ ಶಾಸಕ ರಾಮ ಚಂದ್ರ ಕದಮ್ ಸ್ವಾಗತಿಸುತ್ತಿರುವುದನ್ನು ಕಾಣಬಹುದು.


**ಒಡಿಶಾಗೆ ರಾಜಮೌಳಿ ಕೃತಜ್ಞತೆ :** ವೈರಲ್ ಫೋಟೋಗಳ ಜೊತೆ ಜೊತೆಗೆ, ಎಸ್.ಎಸ್.ರಾಜಮೌಳಿ ಅವರ ಪತ್ರವೂ ಆನ್‌ಲೈನ್‌ನಲ್ಲಿ ಕಾಣಿಸಿಕೊಂಡಿದೆ. ತಮ್ಮ ಹೃದಯಸ್ಪರ್ಶಿ ಬರಹದಲ್ಲಿ, ನಿರ್ದೇಶಕರು ಒಡಿಶಾದಲ್ಲಿ ತಮಗೆ ಮತ್ತು ತಮ್ಮ ತಂಡಕ್ಕೆ ಸಿಕ್ಕ ಆತ್ಮೀಯ ಆತಿಥ್ಯಕ್ಕೆ ಮನದುಂಬಿ ಕೃತಜ್ಞತೆಗಳನ್ನು ವ್ಯಕ್ತಪಡಿಸಿದ್ದಾರೆ. "ಡಿಯರ್ ಕೊರಾಪುಟ್, ಆತ್ಮೀಯ ಆತಿಥ್ಯಕ್ಕಾಗಿ ಧನ್ಯವಾದಗಳು. ಇಂತಹ ಅಡ್ವೆಂಚರ್‌ಗಳಿಗಾಗಿ ಎದುರು ನೋಡುತ್ತಿದ್ದೇನೆ. ಎಸ್‌ಎಸ್‌ಎಂಬಿ29 ಸೆಟ್‌ಗಳಿಂದ ಪ್ರೀತಿಯಿಂದ.." ಎಂದು ಬರೆದಿದ್ದಾರೆ.

**ಕಾಸ್ಟ್ ಕನ್ಫರ್ಮೇಶನ್ :** ಇದಕ್ಕೂ ಮೊದಲು, ಒಡಿಶಾ ಉಪಮುಖ್ಯಮಂತ್ರಿ ಪ್ರವತಿ ಪರಿದಾ ಅವರು ಚಿತ್ರದ ಬಗ್ಗೆ ಮಾಹಿತಿ ಒದಗಿಸಿದ್ದರು. ಸೌತ್ ಸೂಪರ್ ಸ್ಟಾರ್ ಮಹೇಶ್ ಬಾಬು ಜೊತೆಗೆ, ಚಿತ್ರದಲ್ಲಿ ಪೃಥ್ವಿರಾಜ್ ಸುಕುಮಾರನ್ ಮತ್ತು ಪ್ರಿಯಾಂಕಾ ಚೋಪ್ರಾ ಕೂಡಾ ಪ್ರಮುಖ ಪಾತ್ರಗಳಲ್ಲಿದ್ದಾರೆ ಎಂದು ಅಧಿಕೃತವಾಗಿ ಬಹಿರಂಗಪಡಿಸಿದ್ದರು. ಮಲ್ಕನ್‌ಗಿರಿಯಲ್ಲಿ ಪುಷ್ಪ 2 ಚಿತ್ರೀಕರಣದ ನಂತರ, ರಾಜಮೌಳಿ ಅವರು ತಮ್ಮ ಮಹತ್ವಾಕಾಂಕ್ಷೆಯ ಪ್ರಾಜೆಕ್ಟ್‌ಗಾಗಿ ಒಡಿಶಾದ ಕೊರಾಪುಟ್ ಅನ್ನು ಹಿನ್ನೆಲೆಯಾಗಿ ಆಯ್ಕೆ ಮಾಡಿಕೊಂಡರೆಂಬುದನ್ನು ಉಲ್ಲೇಖಿಸುತ್ತಾ, ಒಡಿಶಾ ಬೆಳೆಯುತ್ತಿರುವ ಸಿನಿಮಾ ಕೇಂದ್ರವಾಗಿದೆ ಎಂಬುದನ್ನು ತಿಳಿಸಿದರು.

ಮೊದಲು ಪುಷ್ಪ 2 ಅನ್ನು ಒಡಿಶಾದ ಮಲ್ಕನ್‌ಗಿರಿಯಲ್ಲಿ ಚಿತ್ರೀಕರಿಸಲಾಗಿತ್ತು. ಇದೀಗ ಸೌತ್ ಸೂಪರ್ ಸ್ಟಾರ್‌ಗಳಾದ ಮಹೇಶ್ ಬಾಬು, ಪೃಥ್ವಿರಾಜ್ ಸುಕುಮಾರನ್ ಮತ್ತು ಜಾಗತಿಕ ಮಟ್ಟದಲ್ಲಿ ಮೆಚ್ಚುಗೆ ಪಡೆದಿರುವ ನಟಿ ಪ್ರಿಯಾಂಕಾ ಚೋಪ್ರಾ ಅವರೊಂದಿಗೆ ರಾಜಮೌಳಿ ಎಸ್‌ಎಸ್‌ಎಂಬಿ 29 ಚಿತ್ರವನ್ನು ಕೊರಾಪುಟ್‌ನಲ್ಲಿ ಚಿತ್ರೀಕರಿಸುತ್ತಿದ್ದಾರೆ. ಇದು ಸಿನಿಮಾ ಚಿತ್ರೀಕರಣಕ್ಕಾಗಿ ಒಡಿಶಾದಲ್ಲಿ ಉತ್ತಮ ಲೊಕೇಶನ್‌ಗಳಿವೆ ಎಂಬುದನ್ನು ಸಾಬೀತುಪಡಿಸಿದೆ ಎಂದು ತಿಳಿಸಿದರು.

ಎರಡು ಭಾಗಗಳಲ್ಲಿ ಬರಲಿದೆ ಎಸ್‌ಎಸ್‌ಎಂಬಿ29 : ಎಸ್.ಎಸ್.ರಾಜಮೌಳಿ ನಿರ್ದೇಶನದ ಎಸ್‌ಎಸ್‌ಎಂಬಿ29 ಭಾರತೀಯ ಚಿತ್ರರಂಗದ ಬಹು ನಿರೀಕ್ಷಿತ ಚಿತ್ರಗಳಲ್ಲಿ ಒಂದಾಗಿ ರೂಪುಗೊಳ್ಳುತ್ತಿದೆ. ಎರಡು ಭಾಗಗಳಲ್ಲಿ ಸಿನಿಮಾ ಮೂಡಿಬರಲಿದ್ದು, ಮೊದಲನೆಯದು 2027ರಲ್ಲಿ ಮತ್ತು ಎರಡನೆಯದು 2029ರಲ್ಲಿ ಬಿಡುಗಡೆಯಾಗಲಿದೆ ಎಂದು ವರದಿಯಾಗಿದೆ.

# 'ಫೈರ್ ಫ್ಲೈ' ಚಿತ್ರದ ಹಾಡು ಬಿಡುಗಡೆಗೆ ಸಿದ್ಧ




ಕರುನಾಡ ಚಕ್ರವರ್ತಿ ಶಿವರಾಜ್‌ಕುಮಾರ್ ಪುತ್ರಿ ನಿವೇದಿತಾ ನಿರ್ಮಾಣದ ಮೊದಲ ಚಿತ್ರ 'ಫೈರ್ ಫ್ಲೈ' ಬಿಡುಗಡೆಗೆ ಎದುರು ನೋಡುತ್ತಿದೆ. ನಿರ್ಮಾಪಕಿ, ತಾರಾಬಳಗದ ಮೂಲಕ ಗಮನ ಸೆಳೆದಿರುವ ಈ ಸಿನಿಮಾವನ್ನು ಶಿವರಾಜ್‌ಕುಮಾರ್ ಕೂಡಾ ಪ್ರಚಾರ ಮಾಡುತ್ತಿದ್ದಾರೆ. ಒಂದಿಷ್ಟು ವಿಶೇಷತೆಗಳನ್ನು ಹೊಂದಿರುವ ಸಿನಿಮಾ ಇತ್ತೀಚೆಗಷ್ಟೇ ತನ್ನ ರಿಲೀಸ್ ಡೇಟ್ ಅನೌನ್ಸ್ ಮಾಡಿದೆ. ಇದೀಗ ಚಿತ್ರದ ಮೊದಲ ಹಾಡು ಅನಾವರಣಕ್ಕೆ ದಿನ ನಿಗದಿಯಾಗಿದೆ.

ತಮ್ಮ ಬಹುನಿರೀಕ್ಷಿತ ಚಿತ್ರದ ಪೋಸ್ಟರ್ ಹಂಚಿಕೊಂಡಿರುವ ನಿವೇದಿತಾ ಶಿವರಾಜ್‌ಕುಮಾರ್, "ಫೈರ್ ಫ್ಲೈ ಲೋಕದ ಪ್ರೀತಿ ಗುಂಗು - ಮಾರ್ಚ್ 22 ನಿಮ್ಮ ಮುಂದೆ" ಎಂದು ಬರೆದುಕೊಂಡಿದ್ದಾರೆ. ಇದೇ ಶನಿವಾರ, ಚಿತ್ರದ ಮೊದಲ ಹಾಡು ಅನಾವರಣಗೊಳ್ಳಲಿದ್ದು ಅಭಿಮಾನಿಗಳು ತಮ್ಮ ಕುತೂಹಲ ವ್ಯಕ್ತಪಡಿಸುತ್ತಿದ್ದಾರೆ.

'ಫೈರ್ ಫ್ಲೈ' ಪ್ರಾಜೆಕ್ಟ್ ಮೂಲಕ ವಂಶಿ ಸ್ವತಂತ್ರ ನಿರ್ದೇಶಕರಾಗಿ ಮತ್ತು ಪೂರ್ಣ ಪ್ರಮಾಣದ ನಾಯಕ ನಟನಾಗಿ ಅದೃಷ್ಟ ಪರೀಕ್ಷೆಗಿಳಿದಿದ್ದಾರೆ. ಹಿರಿಯ ನಟ ಅಚ್ಯುತ್ ಕುಮಾರ್ ಅವರಿಲ್ಲಿ ನಾಯಕನ ತಂದೆಯ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಅವರಿಗೆ ಜೋಡಿಯಾಗಿ ಸುಧಾರಾಣಿ ಬಣ್ಣ ಹಚ್ಚಿದ್ದಾರೆ. ಉಳಿದಂತೆ ರಚನಾ ಇಂದರ್, ಶೀತಲ್ ಶೆಟ್ಟಿ ಮತ್ತು ಮೂಗು ಸುರೇಶ್ ಬಹುನಿರೀಕ್ಷಿತ ಚಿತ್ರದ ತಾರಾಬಳಗದಲ್ಲಿದ್ದಾರೆ. ಜಯ್ ರಾಮ್ ಸಹ-ನಿರ್ದೇಶಕರಾಗಿ ಚಿತ್ರತಂಡದಲ್ಲಿದ್ದಾರೆ. ಅಭಿಲಾಷ್ ಕಳತ್ತಿ ಛಾಯಾಗ್ರಹಣ, ಚರಣ್ ರಾಜ್ ಸಂಗೀತ, ರಘು ನಿಡುವಳ್ಳಿ ಸಂಭಾಷಣೆ ಸಿನಿಮಾಗಿದ್ದು, 'ಫೈರ್ ಫ್ಲೈ' ಮುಂದಿನ ತಿಂಗಳು ಚಿತ್ರಮಂದಿರ ಪ್ರವೇಶಿಸಲಿದೆ. ಹ್ಯಾಟ್ರಿಕ್ ಹೀರೋನ ಮುದ್ದು ಮಗಳ ಮೊದಲ ಸಿನಿಮಾ ಇದಾಗಿರುವುದರಿಂದ ಚಿತ್ರದ ಮೇಲೆ ಕನ್ನಡಿಗರ ನಿರೀಕ್ಷೆ, ಕುತೂಹಲ ದೊಡ್ಡ ಮಟ್ಟದಲ್ಲಿದೆ.

ಇದೇ ಮಾರ್ಚ್ 15ರಂದು ಚಿತ್ರದ ಒಂದು ಗ್ಲಿಂಪ್ಸ್ ಶೇರ್ ಮಾಡೋ ಮೂಲಕ ಚಿತ್ರತಂಡ ರಿಲೀಸ್ ಡೇಟ್ ಅನೌನ್ಸ್ ಮಾಡಿತು. ಫೈರ್ ಫ್ಲೈ ಮುಂದಿನ ತಿಂಗಳು, ಏಪ್ರಿಲ್ 24ಕ್ಕೆ ಚಿತ್ರಮಂದಿರಗಳಲ್ಲಿ ಬಿಡುಗಡೆ ಆಗಲಿದೆ. ಚಿತ್ರತಂಡ ಪ್ರಚಾರ ಪ್ರಾರಂಭಿಸಿದ್ದು, ಸಿನಿಮಾ ಎಷ್ಟರ ಮಟ್ಟಿಗೆ ಗೆಲುವು ಕಾಣಲಿದೆ ಅನ್ನೋದನ್ನು ಕಾದು ನೋಡಬೇಕಿದೆ. ಈ ಹಿಂದೆ ಚಿತ್ರೀಕರಣ ಪೂರ್ಣಗೊಂಡ ಸಂದರ್ಭ ಸ್ಪೆಷಲ್ ಪೋಸ್ಟ್ ಹಂಚಿಕೊಂಡಿದ್ದ ನಿವೇದಿತಾ ಶಿವರಾಜ್‌ಕುಮಾರ್, ಸಿನಿಮಾಗಳೊಂದಿಗೆ ಬೆಳೆದವಳು. ನನಗಿಷ್ಟವಾದ ಕಥೆಗಳನ್ನು ಪರದೆ ಮೇಲೆ ತರಬೇಕೆಂದು ಕಂಡ ಕನಸಿಗೆ ಕಟ್ಟಿದ ಮೊದಲ ರೆಕ್ಕೆಯೇ "ಫೈರ್ ಫ್ಲೈ". ನನ್ನ ಬೆನ್ನೆಲುಬಾಗಿ ನಿಂತ ತಂಡದ ಪ್ರತಿಯೊಬ್ಬರು, ಅವರೊಂದಿಗಿನ ನೆನಪುಗಳು ನನ್ನಲ್ಲಿ ಶಾಶ್ವತವಾಗಿ ಉಳಿಯುವುದು. ಶುರುವಾದ ಪ್ರತೀ ಪ್ರಯಾಣ ಎಲ್ಲಾದರೂ ಅಂತ್ಯಗೊಳ್ಳಬೇಕೆನ್ನುತ್ತಾರೆ. ಆದ್ರೆ, ನನ್ನೀ ಕನಸಿನ ಪ್ರಯಾಣದ ಕೊನೆ ಹತ್ತಿರವಾಗುತ್ತಿದ್ದರೂ ಕೂಡಾ ಹೊಸತೊಂದು ಪ್ರಯಾಣ ಶುರುವಾದಂತಿದೆ. "ಫೈರ್ ಫ್ಲೈ" ಚಿತ್ರವನ್ನು ನಿಮ್ಮೊಂದಿಗೆ ತೆರೆ ಮೂಲಕ ಹಂಚಿಕೊಳ್ಳಲು ಕಾತರದಿಂದ ಕಾಯುತ್ತಿರುವೆ ಎಂದು ತಿಳಿಸಿದ್ದರು.

# 'ಅವರು ನನ್ನನ್ನು ಕೊಲೆ ಮಾಡಿದ್ರೆ'



ಬಾಲಿವುಡ್‌ನ ಹಿರಿಯ ನಟ - ನಿರ್ದೇಶಕ ರಾಕೇಶ್ ರೋಷನ್ 2000ರಲ್ಲಿ ನಡೆದ ಆಘಾತಕಾರಿ ಶೂಟೌಟ್ ಘಟನೆ ಬಗ್ಗೆ ಮಾತನಾಡಿದ್ದಾರೆ. ಅದೊಂದು ಭಯಾನಕ ಅವಧಿ. ನಮ್ಮನ್ನು ಸಂಪೂರ್ಣವಾಗಿ ಬೆಚ್ಚಿಬೀಳಿಸಿತ್ತೆಂದು ಬಹಿರಂಗಪಡಿಸಿದರು.

ಮಗ ಹೃತಿಕ್ ರೋಷನ್ ಅವರ ಚೊಚ್ಚಲ ಚಿತ್ರ 'ಕಹೋ ನಾ...ಪ್ಯಾರ್ ಹೈ' ತೆರೆಕಂಡು ಭರ್ಜರಿ ಯಶಸ್ಸು ಗಳಿಸಿದ ನಂತರ ಈ ದಾಳಿ ನಡೆಯಿತು. ಹೃತಿಕ್ ನಟನೆಯ ಮೊದಲ ಸಿನಿಮಾ ಬ್ಲಾಕ್‌ಬಸ್ಟರ್ ಹಿಟ್ ಆಗಿತ್ತು. ಆದರೆ ರಾಕೇಶ್ ರೋಷನ್ ಮೇಲೆ ದುಷ್ಕರ್ಮಿಗಳು ಗುಂಡು ಹಾರಿಸಿದರು. ಈ ಘಟನೆ ರೋಷನ್ ಕುಟುಂಬ ಬೆಚ್ಚಿಬೀಳಿಸಿತ್ತು.

ಇತ್ತೀಚೆಗೆ ಸುದ್ದಿ ಸಂಸ್ಥೆಯೊಂದರೊಂದಿಗೆ ಮಾತನಾಡಿದ ರಾಕೇಶ್ ರೋಷನ್, ಭಯಾನಕ ಘಟನೆ ಬಗ್ಗೆ ಮಾಹಿತಿ ಹಂಚಿಕೊಂಡರು. 2000ರ ಶೂಟೌಟ್ ಘಟನೆ ಬಳಿಕ ತಮ್ಮ ರಕ್ಷಣೆಗಾಗಿ ಇಬ್ಬರು ಸಶಸ್ತ್ರ ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಲಾಯಿತು. ಹೆಚ್ಚಿದ ಭದ್ರತೆಯಿಂದ ಧೈರ್ಯ ತೆಗೆದುಕೊಳ್ಳುವ ಬದಲು, ತಮ್ಮನ್ನು ರಕ್ಷಿಸುತ್ತಿರುವ ಜನರೇ ತಮ್ಮ ಮೇಲೆ ತಿರುಗಿಬೀಳಬಹುದು ಎಂಬ ಭಯ ನಿರಂತರವಾಗಿತ್ತೆಂದು ರೋಷನ್ ಬಹಿರಂಗಪಡಿಸಿದರು.

ಇದೇ ವೇಳೆ, ತಮ್ಮ ಕಾರಿನ ಹಿಂಬದಿ ಸೀಟಿನಲ್ಲಿ ಬಾಡಿ ಗಾರ್ಡ್ಸ್ ಹೇಗೆ ಕುಳಿತುಕೊಳ್ಳುತ್ತಿದ್ದರು ಮತ್ತು ತಾವು ಮುಂದಿನ ಸೀಟಿನಲ್ಲಿ ಕುಳಿತುಕೊಳ್ಳುತ್ತಿದ್ದದ್ದನ್ನು ನೆನಪಿಸಿಕೊಂಡರು. ಈ ಸೆಕ್ಯೂರಿಟಿ, ಸೇಫ್ಟಿ ಫೀಲ್ ಕೊಡೋ ಬದಲು ರಾಕೇಶ್ ಅವರನ್ನು ಮತ್ತಷ್ಟು ಹೆದರಿಸಿತ್ತು. "ಆ ಇಬ್ಬರು ನನ್ನ ಹಿಂದೆ ಗನ್ ಹಿಡಿದು ಕುಳಿತಿದ್ದಾರೆ. ಏನಾದರೂ ಸಂಭವಿಸಿದ್ರೆ, ಅವರು ನನ್ನನ್ನು ಕೊಲ್ಲಬಹುದು" ಎಂದು ಭಯಭೀತರಾಗಿದ್ದನ್ನು ಬಹಿರಂಗಪಡಿಸಿದರು

ನಿರಂತರ ಕಣ್ಗಾವಲಿನಿಂದಾಗಿ ಕ್ಲಾಸ್ಟ್ರೋಫೋಬಿಕ್ ಅನಿಸುತ್ತಿದ್ದೆಂದು ಕರಣ್ ಅರ್ಜುನ್ ನಿರ್ದೇಶಕ ತಿಳಿಸಿದರು. ನಿರ್ದೇಶಕರ ಪ್ರತೀ ಹೆಜ್ಜೆಯನ್ನೂ ಭದ್ರತಾ ಸಿಬ್ಬಂದಿ ಸೂಕ್ಷ್ಮವಾಗಿ ಗಮನಿಸುತ್ತಿದ್ದರು. ಅವರು ಬೀಚ್ ಬಳಿ ನಡೆಯುವಾಗಲೂ ಅವರೊಂದಿಗೆ ಹೋಗುತ್ತಿದ್ದರು. ಆ ಲೈಫ್‌ಸ್ಟೈಲ್ ತಮ್ಮ ಮೇಲೆ ಪರಿಣಾಮ ಬೀರಿತು. ಫೈನಲಿ, ಭದ್ರತೆ ತೆಗೆದುಹಾಕುವಂತೆ ಕೇಳಿಕೊಂಡೆ ಎಂಬುದನ್ನು ತಿಳಿಸಿದರು.

"ನಾನು ಬೀಚ್ ಬಳಿ ನಡೆಯುವಾಗ, ಆ ಇಬ್ಬರು ಭದ್ರತಾ ಸಿಬ್ಬಂದಿ ನನ್ನೊಂದಿಗೆ ಇರುತ್ತಿದ್ದರು. 'ಏನಾಗುತ್ತಿದೆ?' ಎಂಬ ಪ್ರಶ್ನೆ ನನ್ನಲ್ಲಿತ್ತು. ನಂತರ, ನನ್ನ ಭದ್ರತೆಯನ್ನು ತೆಗೆದುಹಾಕಲು ಕೇಳಿದೆ. ನಾನು ಹೀಗೇ ಚೆನ್ನಾಗಿದ್ದೇನೆ. ಏನಾಗುತ್ತದೆ ಎಂದು ನೋಡೋಣ" ಎಂದು ರೋಷನ್ ಹೇಳಿದ್ದರು.

ಈ ಕಹಿ ಘಟನೆಗಳ ಹೊರತಾಗಿಯೂ, ರೋಷನ್ ಉತ್ತಮ ವೃತ್ತಿಜೀವನವನ್ನು ರೂಪಿಸಿಕೊಂಡರು. ಕರಣ್ ಅರ್ಜುನ್ (1995), ಖೂನ್ ಭರಿ ಮಾಂಗ್ (1988) ಮತ್ತು ಮಗ ಹೃತಿಕ್ ರೋಷನ್ ಅವರ ಕ್ರಿಶ್ ಸರಣಿಯಂತಹ ಐಕಾನಿಕ್ ಸಿನಿಮಾಗಳನ್ನು ನಿರ್ದೇಶಿಸಿದರು. ಅನುಭವಿ ನಿರ್ದೇಶಕರಿಗೆ ಇತ್ತೀಚೆಗೆ ಐಫಾ 2025ರಲ್ಲಿ ಔಟ್‌ಸ್ಟ್ಯಾಂಡಿಂಗ್ ಅಚೀವ್‌ಮೆಂಟ್ ಅವಾರ್ಡ್ ನೀಡಿ ಗೌರವಿಸಲಾಯಿತು.



# ಪೂರ್ವ ನಿರ್ಧಾರಿತವಾಗಿ ತಮ್ಮ ಸಿನಿಮಾ ನೋಡದೇ ಇರಬೇಡಿ

ಕಂಗನಾ ನಟನೆಯ 'ಎಮರ್ಜೆನ್ಸಿ' ಸಿನಿಮಾ ಬಾಕ್ಸ್ ಆಫೀಸ್‌ನಲ್ಲಿ ಸೋತಿದೆ. ಈ ಚಿತ್ರದ ಬಗ್ಗೆ ಒಳ್ಳೆಯ ಟಾಕ್ ಬರಲಿಲ್ಲ. ಈಗ ಸಿನಿಮಾ ಒಟಿಟಿಯಲ್ಲಿ ರಿಲೀಸ್ ಆಗಿದೆ. ಅನೇಕರು ಈ ಚಿತ್ರವನ್ನು ಮೆಚ್ಚಿಕೊಂಡಿದ್ದಾರೆ. ಸಿನಿಮಾನ ಹೊಗಳಿ, ಕಂಗನಾ ನಿರ್ದೇಶನವನ್ನು ಮೆಚ್ಚಿ ಟ್ವೀಟ್ ಮಾಡುತ್ತಿದ್ದಾರೆ.

ಈ ಬಗ್ಗೆ ಕಂಗನಾ ಮಾತನಾಡಿದ್ದಾರೆ. ಪೂರ್ವ ನಿರ್ಧಾರಿತವಾಗಿ ತಮ್ಮ ಸಿನಿಮಾ ನೋಡದೇ ಇರಬೇಡಿ ಎಂದು ಅವರು ಕೋರಿದ್ದಾರೆ.

ಕಂಗನಾ ಮೊದಲಿನಿಂದಲೂ ಬಿಜೆಪಿ ಹಾಗೂ ಆ ಪಕ್ಷದ ಆಲೋಚನೆಗಳನ್ನು ಬೆಂಬಲಿಸುತ್ತಾ ಬಂದವರು. ಅವರು 'ಎಮರ್ಜೆನ್ಸಿ' ಸಿನಿಮಾ ಮಾಡುತ್ತಾರೆ ಎಂದಾಗ ಅನೇಕರು ಇದೊಂದು ಪ್ರೊಪೊಗಾಂಡ ಸಿನಿಮಾ ಎಂದೇ ಎಲ್ಲರೂ ಭಾವಿಸಿದ್ದರು. ಆದರೆ, ಆ ರೀತಿ ಇಲ್ಲ ಎಂದು ಅನೇಕರಿಗೆ ಆ ಬಳಿಕ ಅನಿಸಿದೆ. ಈ ರೀತಿ ಪೂರ್ವ ನಿರ್ಧಾರಿತ ಆಗಬೇಡಿ ಎಂದು ಕಂಗನಾ ಕೋರಿಕೊಂಡಿದ್ದಾರೆ.

ಇತ್ತೀಚೆಗೆ ನಿರ್ದೇಶಕ ಸಂಜಯ್ ಗುಪ್ತಾ ಅವರು 'ಎಮರ್ಜೆನ್ಸಿ' ಚಿತ್ರವನ್ನು ಹೊಗಳಿದ್ದರು. ಈ ಬಗ್ಗೆ ಮಾತನಾಡಿರೋ ಕಂಗನಾ, 'ಸಂಜಯ್ ಗುಪ್ತಾ ಅವರು ತಮಗೆ ಪೂರ್ವಾಗ್ರಹ ಪೀಡಿತ ಭಾವನೆಗಳು ಇವೆ ಎಂದು ಒಪ್ಪಿಕೊಂಡಿದ್ದಾರೆ. ನೀವು ವಿಫಲರಾಗುತ್ತಿರುವಾಗ ನನ್ನನ್ನು ಅರ್ಥಮಾಡಿಕೊಳ್ಳಲು ಏಕೆ ಪ್ರಯತ್ನಿಸುತ್ತಿದ್ದೀರಿ? ಅಚ್ಚರಿಯ ಸಂಗತಿ ಎಂದರೆ ಅವರು ತಾವು ವಿಫಲವಾಗಿದ್ದಾಗಿಯೂ ಅವರು ಒಪ್ಪಿಕೊಂಡಿದ್ದಾರೆ' ಎಂದಿದ್ದಾರೆ ಕಂಗನಾ.

'ನನ್ನ ಬಗ್ಗೆ ನಕಾರಾತ್ಮಕ ಚಿಂತನೆಗಳನ್ನು ಮಾತ್ರ ಇಟ್ಟುಕೊಂಡು, ನಕಾರಾತ್ಮಕವಾಗಿ ಮಾತ್ರ ಯೋಚನೆ ಮಾಡುವಾಗ ಮತ್ತು ನಾನು ಸೋಲು ಕಾಣಲಿ ಎಂದು ಬಯಸುವಾಗ ನಾನು ಏನು ಮಾಡುತ್ತಿದ್ದೇನೆ ಎಂದು ನಿಮಗೆ ಹೇಗೆ ಗೊತ್ತಾಗುತ್ತದೆ? ನನ್ನನ್ನು ಅರ್ಥಮಾಡಿಕೊಳ್ಳಲು ನಿಮಗೆ ಬುದ್ಧಿಶಕ್ತಿ ಇದೆಯೇ' ಎಂದು ಅವರು ಪ್ರಶ್ನೆ ಮಾಡಿದ್ದಾರೆ.

'ನೀವು ಒಬ್ಬ ವ್ಯಕ್ತಿಯ ಬಗ್ಗೆ ವಿಶಾಲ ಹೃದಯಿ ಆಗಿ ತಿಳಿದುಕೊಳ್ಳಲು ಬಯಸುತ್ತೀರಿ ಎಂದರೆ ಆ ವಸ್ತು ಅಥವಾ ವಿಷಯದ ಬಗ್ಗೆ ನಿಮಗೆ ವಿಸ್ತೃತ ದೃಷ್ಟಿಕೋನವಿರಬೇಕು. ನೀವು ಯಾವ ರೀತಿಯ ಸಿನಿಮಾ ಮಾಡುತ್ತೀರಿ' ಎಂದು ಅವರು ಪ್ರಶ್ನೆ ಮಾಡಿದ್ದಾರೆ.

'ಸಿನಿಮಾ ಇಂಡಸ್ಟ್ರಿ ದ್ವೇಷ ಮತ್ತು ಪೂರ್ವಾಗ್ರಹಗಳಿಂದ ಹೊರಬಂದು ಉತ್ತಮ ಕೆಲಸವನ್ನು ಒಪ್ಪಿಕೊಳ್ಳಬೇಕು. ಸಂಜಯ್ ಅವರೇ ಆ ತಡೆಗೋಡೆಯನ್ನು ಮುರಿದಿದ್ದಕ್ಕಾಗಿ ಧನ್ಯವಾದ. ಎಲ್ಲಾ ಸಿನಿಮಾ ಬುದ್ಧಿಜೀವಿಗಳಿಗೆ ನನ್ನ ಸಂದೇಶ. ನನ್ನ ಬಗ್ಗೆ ಯಾವುದೇ ಕಲ್ಪನೆಗಳನ್ನು ಎಂದಿಗೂ ಇಟ್ಟುಕೊಳ್ಳಬೇಡಿ. ನನ್ನನ್ನು ಕಂಡುಹಿಡಿಯಲು ಪ್ರಯತ್ನಿಸಬೇಡಿ, ನಾನು ನಿಮ್ಮ ವ್ಯಾಪ್ತಿಯಿಂದ ಹೊರಗಿದ್ದೇನೆ' ಎಂದಿದ್ದಾರೆ.

Edited, Published and Owned by Laxmiprasanna R.H, #1652/6, 20th Cross, 8th Main, C Block, SahakarNagar, Bangalore-560092. Printed by P N Printers, Narasipalya, Arishinakunte(Post), Kasaba(hobali), Nelamangala, Bengaluru-562123
Email-mussanje2010@gmail.com, Phone: 9448074878